# IX. 2020-21 ನೇ ಸಾಲಿನ ಸಾವಯವ ಕೃಷಿ ಮತ್ತು ಸಿರಿಧಾನ್ಯ ಕಾರ್ಯಕ್ರಮಗಳು

**ಪೀಠಿಕೆ:**

ರಾಜ್ಯದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಸರ್ಕಾರವು 2004-05 ನೇ ಸಾಲಿನಲ್ಲಿಯೇ ಸಾವಯವ ಕೃಷಿ ನೀತಿಯನ್ನು ಹೊರತಂದಿದ್ದು, ಈ ನೀತಿಯಡಿ ಅನೇಕ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಹಂತಹಂತವಾಗಿ ಅನುಷ್ಠಾನಗೊಳಿಸುತ್ತಾ ಬಂದಿದೆ. ಸಾವಯವ ಕೃಷಿ ನೀತಿ 2004 ರಡಿ ರಾಜ್ಯದಲ್ಲಿ ಈ ವರೆವಿಗೂ ಅನುಷ್ಠಾನದಲ್ಲಿದ್ದ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳು ಜೀವವೈವಿದ್ಯತೆ ಸಂರಕ್ಷಣೆ, ಮಿಶ್ರ ಬೇಸಾಯ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸ್ಥಳೀಯವಾಗಿ ಸಾವಯವ ಗೊಬ್ಬರ ಉತ್ಪಾದನೆ, ಭೂಮಿಯ ಪುನರುಜ್ಜೀವನ ಇತ್ಯಾದಿಗಳು ಸೇರಿದಂತೆ ಒಟ್ಟಾರೆಯಾಗಿ ಸಾವಯವ ಕೃಷಿ ಪದ್ಧತಿಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದರ ಜೊತೆಗೆ ಸಾವಯವ ಕೃಷಿಯು ಅತ್ಯುತ್ತಮ ಸುಸ್ಥಿರ ಉತ್ಪಾದನಾ ಪದ್ಧತಿಯೆಂದು ರೈತರಿಗೆ ಮನವರಿಕೆ ಮಾಡಿಕೊಡುವುದು ಯೋಜನೆಗಳ ಮುಖ್ಯ ಉದ್ದೇಶವಾಗಿತ್ತು. ಈವರೆವಿಗಿನ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳು ಅಂದಿನ ಉದ್ದೇಶಗಳನ್ನು ತಲುಪಲು ಸಾಧ್ಯವಾಗಿರುತ್ತದೆ. ಆದರೆ, ಸಾವಯವ ಕೃಷಿ ಉತ್ಪನ್ನಗಳ ಬಗೆಗಿನ ಅರಿವಿನಿಂದಾಗಿ ಉಂಟಾಗಿರುವ ಬೇಡಿಕೆಯನ್ನು ಪೂರೈಸುವಲ್ಲಿ ಹಾಗೂ ಈ ಬೇಡಿಕೆಯಿಂದಾಗಿ ಉತ್ಪನ್ನಗಳ ಗುಣಮಟ್ಟ ಕಾಪಾಡುವಲ್ಲಿ ಕೆಲವೊಂದು ನ್ಯೂನ್ಯತೆಗಳನ್ನು ಸೃಷ್ಟಿಸಿವೆ. ಈ ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಮಾರುಕಟ್ಟೆ ಆಧಾರಿತ ಕಾರ್ಯಕ್ರಮವನ್ನಾಗಿ ರೂಪಿಸಲು ಸದರಿ ನೀತಿಯನ್ನು ಮಾರುಕಟ್ಟೆ ಆಧಾರಿತ ಚಟುವಟಿಕೆಗಳ ಸೇರ್ಪಡೆಯೊಂದಿಗೆ ಪರಿಷ್ಕರಿಸಿ ಸಾವಯವ ಕೃಷಿ ನೀತಿ, 2017 ಹೊರತರಲಾಗಿದ್ದು, ಸದರಿ ನೀತಿಯಡಿ ಅನೇಕ ಮಾರುಕಟ್ಟೆ ಸಂಬಂಧಿತ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿರುತ್ತದೆ.

**2020-21 ನೇ ಸಾಲಿನಲ್ಲಿ ಈ ಕೆಳಕಂಡ ಸಾವಯವ ಕೃಷಿ ಮತ್ತು ಸಿರಿಧಾನ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.**

## X. A. ಸಾವಯವ ಕೃಷಿ ಮತ್ತು ದೃಢೀಕರಣ ((Adoption of Organic Farming and Certification programme) ಕಾರ್ಯಕ್ರಮ ಅನುಷ್ಠಾನ ಮಾರ್ಗಸೂಚಿ

## 2401-00-104-0-12 (059)

2018-19 ನೇ ಸಾಲಿನ ಆಯವ್ಯಯ ಘೋಷಣಾ ಕಾರ್ಯಕ್ರಮವಾದ ಈ ಕಾರ್ಯಕ್ರಮವು ರಾಜ್ಯದ ಸಾವಯವ ಪ್ರಮಾಣಿತ ಪ್ರದೇಶವನ್ನು 1.00 ಲಕ್ಷ ಹೆಕ್ಟೇರ್ ಗಳಿಂದ 1.50ಲಕ್ಷ ಹೆಕ್ಟೇರ ಗಳಿಗೆ ಹೆಚ್ಚಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿರುತ್ತದೆ. ಈ ಕಾರ್ಯಕ್ರಮವು ಪ್ರಸ್ತಾವನೆ ಆಧಾರಿತವಾಗಿದ್ದು ಅರ್ಹ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಾವಯವ ಪ್ರಮಾಣೀಕರಣ ಶುಲ್ಕ ಭರಿಸುವುದರೊಂದಿಗೆ ಅವರ ಕ್ಷೇತ್ರವನ್ನು ಪ್ರಮಾಣೀಕರಣ ವ್ಯಾಪ್ತಿಗೆ ತರಲಾಗುತ್ತದೆ. ಈ ಕಾರ್ಯಕ್ರಮದ ಪ್ರಮುಖ ಉದ್ದೇಶವೇನೆಂದರೆ ರಾಜ್ಯದ ಸಾವಯವ ಕೃಷಿ ಪ್ರಮಾಣೀಕೃತ ಪ್ರದೇಶವನ್ನು

ಹೆಚ್ಚಿಸುವುದರ ಜೊತೆಗೆ ಮಾರುಕಟ್ಟೆಗೆ ಗುಣಮಟ್ಟದ ಸಾವಯವ ಕೃಷಿ ಉತ್ಪನ್ನಗಳ ನಿರಂತರ ಪೂರೈಕೆ ದೊರಕಿಸುವುದಾಗಿದೆ. ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಇದರಡಿ ಸಾವಯವ ದೃಢೀಕರಣಕ್ಕೆ ಒಳಪಡಿಸಲು ಸಹಾಯಧನ ನೀಡಲಾಗುವುದು. ಪ್ರಸ್ತುತ ಸದರಿ ಕಾರ್ಯಕ್ರಮದಡಿ 279 ಗುಂಪು ಮತ್ತು 397 ವ್ಯಕ್ತಿಗತ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಪ್ರಮಾಣೀಕರಣ ಪ್ರಕ್ರಿಯೆ ಪ್ರಾರಂಭಿಸಲಾಗಿದ್ದು, ರಾಜ್ಯದಲ್ಲಿ ಹೆಚ್ಚುವರಿಯಾಗಿ ಸುಮಾರು 21000 ಹೆಕ್ಟೇರ್ ರಷ್ಟು ಪ್ರದೇಶವನ್ನು ಸದರಿ ಯೋಜನೆಯಡಿ ಪ್ರಮಾಣೀಕರಣಕ್ಕಾಗಿ ಒಳಪಡಿಸಲಾಗಿರುತ್ತದೆ.

**2020-21 ನೇ ಸಾಲಿನಲ್ಲಿಯೂ ಸದರಿ ಕಾರ್ಯಕ್ರಮವನ್ನು ಮುಂದುವರೆಸಲಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯವಲಯ ಸಾವಯವ ಕೃಷಿ ಯೋಜನೆ ಲೆಕ್ಕ ಶೀರ್ಷಿಕೆ: 2401-00-104-0-12 ಅಡಿಯಲ್ಲಿ ಉಪ ಶೀರ್ಷಿಕೆ 059 ಅಡಿ ರೂ. 100.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಜಿಲ್ಲೆಗಳಲ್ಲಿ ಸಾವಯವ ಪ್ರಮಾಣೀಕರಣಕ್ಕಾಗಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆಯ ಮುಖಾಂತರ ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಲಾಗುವುದು (ಯಾವುದೇ ಪೂರಕ ಘಟಕಗಳ ಅನುಷ್ಠಾನಕ್ಕೆ ಸಹಾಯಧನ ಒದಗಿಸಲು ಅವಕಾಶವಿರುವುದಿಲ್ಲ).**

**I. ಇಲಾಖೆಯ ಪಾತ್ರ:**

**ಅ) ಫಲಾನುಭವಿಗಳ ಅರ್ಜಿ/ಪ್ರಸ್ತಾವನೆಗಳ ಅರ್ಹತೆ:**

- ಕ್ಷೇತ್ರವನ್ನು ಸಾವಯವ ಪ್ರಮಾಣೀಕರಣಕ್ಕೆ ಈಗಾಗಲೇ ನೋಂದಾಯಿಸಲಾಗಿರುವ (ಮೊದಲನೇ ವರ್ಷಕ್ಕೆ) ಮತ್ತು ನೋಂದಾಯಿಸಲು ಆಸಕ್ತಿ ಇರುವ ನೋಂದಿತ ಸಂಘ-ಸಂಸ್ಥೆಗಳು, ಕೃಷಿಕರ ಸಂಘಗಳು/ಖಾಸಗಿ ಸಂಸ್ಥೆಗಳು/ರೈತ ಉತ್ಪಾದನಾ ಸಂಸ್ಥೆಗಳು/ಕೃಷಿಕರು ಸಲ್ಲಿಸುವ ಯೋಜನಾ ಪ್ರಸ್ತಾವನೆ ಆಧರಿಸಿ ಆಯ್ಕೆ ಮಾಡುವುದು.

- ಆಯಾ ಪ್ರದೇಶದಲ್ಲಿನ ಸಾವಯವ ಕೃಷಿ ಸಾಮರ್ಥ್ಯ, ಸಾವಯವ ಕೃಷಿಕರ ಸಂಖ್ಯೆ, ಮಾರುಕಟ್ಟೆ ಆಧಾರಿತ ಬೆಳೆಗಳು, ಮಾರುಕಟ್ಟೆ ಬೇಡಿಕೆ ಇತ್ಯಾದಿಗಳನ್ನು ಆಧರಿಸಿ ಯೋಜನಾ ಅನುಷ್ಠಾನ ಪ್ರದೇಶವನ್ನು / ಪ್ರಸ್ತಾವನೆಯನ್ನು ಆಯ್ಕೆ ಮಾಡುವುದು.
- ಸಂಘ-ಸಂಸ್ಥೆಗಳ ಪ್ರಸ್ತಾವನೆಗಳಿದ್ದಲ್ಲಿ ಸಾವಯವ ಪರಿವರ್ತನೆ ಹಾಗೂ ದೃಢೀಕರಣ ಕಾರ್ಯಕ್ರಮದಡಿ ಗುಚ್ಛ ಗ್ರಾಮಗಳನ್ನು (2 ಅಥವಾ 3 ಹಳ್ಳಿಗಳು ಇದ್ದಲ್ಲಿ ಮಾತ್ರ (Contiguous Cluster) ಆಯ್ಕೆ ಮಾಡುವುದು.
- ರೈತರ ಪ್ರಸ್ತಾವನೆಗಳಾಗಿದ್ದಲ್ಲಿ, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು. ಮಹಿಳೆಯ ಹೆಸರಿನಲ್ಲಿ ಖಾತೆ

ಹೊಂದಿದ್ದಲ್ಲಿ ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

- ರೈತ ಫಲಾನುಭವಿಗಳ ಪ್ರಸ್ತಾವನೆಗಳಾಗಿದ್ದಲ್ಲಿ ಕನಿಷ್ಠ 1.00 ಎಕರೆ ಹಿಡುವಳಿ ಪ್ರದೇಶ ಹೊಂದಿರಬೇಕು. ಸಂಘ - ಸಂಸ್ಥೆಗಳ ಪ್ರಸ್ತಾವನೆಯಾಗಿದ್ದಲ್ಲಿ ಗುಚ್ಛ ಮಾದರಿಯಲ್ಲಿ ಕನಿಷ್ಠ 50 ಎಕರೆ ಪ್ರದೇಶ ಇರಬೇಕು.
- ಫಲಾನುಭವಿಗಳು ಬಹು ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ಒಂದು ಅಥವಾ ಎರಡು ನಿರ್ದಿಷ್ಟ ಪ್ರಮುಖ ಬೆಳೆಗಳನ್ನು (ಸಾವಯವ ಕೃಷಿ ನೀತಿ 2017 ರನ್ವಯ) ಬೆಳೆಯುವ ಆಸಕ್ತಿ ಹೊಂದಿರಬೇಕು.
- ಯೋಜನೆಯ ಅನುಷ್ಠಾನದಲ್ಲಿ ಪ್ರತಿಯೊಂದು ಸಂಘ-ಸಂಸ್ಥೆಯನ್ನು ಒಂದು ಘಟಕವೆಂದು ಪರಿಗಣಿಸಲಾಗುವುದು. ಹಾಗೆಯೇ, ಸ್ವಯಂ ಇಚ್ಛೆಯಿಂದ ತಮ್ಮ ಸಂಪೂರ್ಣ ಕ್ಷೇತ್ರವನ್ನು ಸಾವಯವ ಕೃಷಿಗೆ ಪರಿವರ್ತಿಸಲು ಇಚ್ಛಿಸುವ ಫಲಾನುಭವಿಗಳನ್ನು ಸಹ ಪರಿಗಣಿಸುವುದು.
- ಈಗಾಗಲೇ ಸಾವಯವ ದೃಢೀಕರಣಕ್ಕೆ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿ ಹಾಲಿ ಸಹಾಯಧನ ಪಡೆಯುತ್ತಿರುವ ಸಂಘ/ಸಂಸ್ಥೆಗಳು/ಕೃಷಿಕರು ಈ ಯೋಜನೆಯಡಿ ಪುನಃ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಅರ್ಜಿದಾರರಿಂದ ಕೇಂದ್ರ/ರಾಜ್ಯ ಸರ್ಕಾರದ ಇತರೆ ಯಾವುದೇ ಯೋಜನೆಯಡಿ ಈ ಕಾರ್ಯಕ್ರಮಕ್ಕೆ ಹಾಲಿ ಸಹಾಯಧನ ಪಡೆಯುತ್ತಿಲ್ಲ ಎಂಬ ದೃಢೀಕರಣ ಪತ್ರ ಪಡೆದುಕೊಳ್ಳುವುದು.

**ಆ)ಅರ್ಜಿ ಆಹ್ವಾನಿಸುವ ವಿಧಾನ:**

ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆಯ ಮೂಲಕ ಅರ್ಹ ರೈತರು/ ಸಂಘ ಸಂಸ್ಥೆಗಳಿಂದ ಅರ್ಜಿ/ಪ್ರಸ್ತಾವನೆಯನ್ನು ಆಹ್ವಾನಿಸುವುದು (ಅನುಬಂಧ-1 (ಎ) & ಅನುಬಂಧ 1 (ಬಿ). ಸ್ವೀಕೃತವಾದ ಅರ್ಜಿಗಳನ್ನು ತಾಲ್ಲೂಕು ಮಟ್ಟದಲ್ಲಿ ಪರಿಶೀಲಿಸಿ ಪ್ರಮಾಣೀಕರಣ ಸಂಸ್ಥೆಯಿಂದ ಸ್ಥಳ ಪರಿಶೀಲನೆಗೆ ಕ್ರಮ ಕೈಗೊಳ್ಳುವುದು.

**II. KSOCA ಪಾತ್ರ:**

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ಸಾವಯವ ಪ್ರಮಾಣೀಕರಣ (**KSOCA**) ಸಂಸ್ಥೆಯು ಈ ಕಾರ್ಯಕ್ರಮದಡಿ ನೋಡಲ್ ಸಂಸ್ಥೆಯಾಗಿರುತ್ತದೆ. ಸದರಿ ಸಂಸ್ಥೆಯ ಉಸ್ತುವಾರಿ/ಸಮನ್ವಯದೊಂದಿಗೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ **APEDA** ಅನುಮೋದಿತ **(Accredited)** ಸಂಸ್ಥೆಗಳ ಮುಖಾಂತರವು ಪ್ರಮಾಣೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ.

- ಜಂಟಿ ಕೃಷಿ ನಿರ್ದೇಶಕರುಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಆಧರಿಸಿ KSOCA ಸಂಸ್ಥೆ ಮತ್ತು ಸಂಸ್ಥೆಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಇತರೆ ಪ್ರಮಾಣೀಕರಣ ಸಂಸ್ಥೆಗಳು ಇಲಾಖೆಯ ಅಧಿಕಾರಿಗಳೊಂದಿಗೆ ಯೋಜನಾ ಅನುಷ್ಠಾನ ಪ್ರದೇಶಕ್ಕೆ ಭೇಟಿ ನೀಡಿ ದೃಢೀಕರಣಕ್ಕೆ ಅರ್ಹತೆಯಿರುವ ಬಗ್ಗೆ ಪರಿಶೀಲಿಸಿ ನೀಡುವ ವರದಿಯನ್ನಾಧರಿಸಿ work order / letter of indent ಅನ್ನು ನೀಡುವುದು.

- ಸಾವಯವ ದೃಢೀಕರಣಕ್ಕೆ ಸಂಬಂಧಿಸಿದ ಅನುದಾನವನ್ನು KSOCA ಸಂಸ್ಥೆಯು ನೇರವಾಗಿ ಅನುಷ್ಠಾನ ಸಂಸ್ಥೆ/ಫಲಾನುಭವಿಗೆ ಪಾವತಿಸುವುದು.

- ಸಾವಯವ ದೃಢೀಕರಣವನ್ನು APEDA Accredited ಸಂಸ್ಥೆಗಳ ಮೂಲಕ ಕೈಗೊಂಡಿದ್ದಲ್ಲಿ ಪ್ರಮಾಣೀಕರಣಕ್ಕೆ ಸಂಬಂಧಿಸಿದ ಅನುದಾನವನ್ನು KSOCA ಸಂಸ್ಥೆಯು ಆಯಾ ಪ್ರಮಾಣೀಕರಣ ಸಂಸ್ಥೆಗಳಿಗೆ ನೇರವಾಗಿ ಬಿಡುಗಡೆ ಮಾಡತಕ್ಕದ್ದು.
- ಇಲಾಖೆಯಿಂದ ಬಿಡುಗಡೆಯಾಗುವ ಪೂರ್ಣ ಅನುದಾನಕ್ಕೆ KSOCA ಸಂಸ್ಥೆಯು ಉಪಯೋಗಿತ ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

**ಯೋಜನೆಯ ಉಸ್ತುವಾರಿ ಮತ್ತು ಮೌಲ್ಯಮಾಪನ :**

- ಜಿಲ್ಲಾ ಚಾಲನಾ ಸಮಿತಿಯು ಜಿಲ್ಲಾ ಉಸ್ತುವಾರಿ ಸಮಿತಿಯೊಂದನ್ನು ರಚಿಸುವುದು ಹಾಗೂ ವಾರ್ಷಿಕ ಎರಡು ಉಸ್ತುವಾರಿ ಭೇಟಿ ಕೈಗೊಳ್ಳುವುದು. ಜಿಲ್ಲಾ ಉಸ್ತುವಾರಿ ಸಮಿತಿಯ ಕ್ಷೇತ್ರ ಭೇಟಿ ಸಮಯದಲ್ಲಿ KSOCA ಸಂಸ್ಥೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರುವುದು.
- KSOCA ಸಂಸ್ಥೆಯಿಂದ ತಾಕು ಪರಿಶೀಲನೆ ಸಮಯದಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಕಡ್ಡಾಯವಾಗಿ ಪಾಲ್ಗೊಳ್ಳುವುದು.
- KSOCA ಸಂಸ್ಥೆಯ ಸಾವಯವ ಪ್ರಮಾಣೀಕರಣದ ಬಗ್ಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಪರಿಶೀಲಿಸಿ ವರದಿಯನ್ನು ಸಲ್ಲಿಸುವುದು.
- ಉಸ್ತುವಾರಿ ಭೇಟಿಯ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಯೋಜನೆಯ ವಾರ್ಷಿಕ ಮೌಲ್ಯಮಾಪನವನ್ನು ಆಯಾ ಜಿಲ್ಲಾ ವ್ಯಾಪ್ತಿಯ ಕೃಷಿ ವಿಶ್ವವಿದ್ಯಾನಿಲಯಗಳ ಸಾವಯವ ಕೃಷಿ ಸಂಶೋಧನಾ ಸಂಸ್ಥೆ ವತಿಯಿಂದ ಕೈಗೊಳ್ಳುವುದು.

ಅನುಬಂಧ-1 (ಎ)

ಅರ್ಜಿ ನಮೂನೆ (ಗುಂಪು ದೃಢೀಕರಣ)

ಸಾವಯವ ಕೃಷಿ ಮತ್ತು ದೃಢೀಕರಣ

| | | |
|---|---|---|
| 1 | ಸಂಘದ ಹೆಸರು | |
| 2 | ಸಂಘದ ಪೂರ್ಣ ವಿಳಾಸ ಗ್ರಾಮ: | ಗ್ರಾಮ: |
| | | ಹೋಬಳಿ: |
| | | ತಾಲ್ಲೂಕು: |
| | | ಜಿಲ್ಲೆ: |
| 3 | ಸಂಘದ ಪ್ರತಿನಿಧಿಯ ಅಥವಾ ಸಂಘವು ನೇಮಿಸಿದ ವ್ಯಕ್ತಿಯ ಹೆಸರು (ಗರಿಷ್ಟ 3 ಸಂಘಗಳಿಗೆ ಒಂದೇ ವ್ಯಕ್ತಿಯನ್ನು ನೇಮಿಸಬಹುದು). | |
| 4 | ಸಂಘದ ಪ್ರತಿನಿಧಿಯ ಅಥವಾ ಸಂಘವು ನೇಮಿಸಿದ ವ್ಯಕ್ತಿಯ ದೂರವಾಣಿ ಸಂಖ್ಯೆ | |
| 5 | ಸಂಘದ ನೋಂದಣಿ ಪತ್ರದ ಪ್ರತಿಯನ್ನು ಲಗತ್ತಿಸುವುದು | |
| 6 | ಸಾವಯವ ದೃಢೀಕರಣಕ್ಕೆ ಒಳಪಡಿಸಲಾದ/ಒಳಪಡಿಸುವ ಕ್ಷೇತ್ರದ ವಿಸ್ತೀರ್ಣ (ಹೆಕ್ಟೇರ್) | |
| 7 | ಸಂಘ-ಸಂಸ್ಥೆಯ ಸದಸ್ಯರು ಬೆಳೆಯುತ್ತಿರುವ ಎರಡು ನಿರ್ದಿಷ್ಟ ಪ್ರಮುಖ ಬೆಳೆಗಳು | 1.<br>2. |
| 8 | ಈಗಾಗಲೇ ಸಾವಯವ ದೃಢೀಕರಣಕ್ಕೆ ಒಳಪಡಿಸಿದ್ದಲ್ಲಿ ಯಾವ ಪ್ರಮಾಣೀಕರಣ ಸಂಸ್ಥೆ ಮೂಲಕ ಯಾವ ವರ್ಷದಲ್ಲಿ ದೃಢೀಕರಣಕ್ಕೆ ಒಳಪಡಿಸಿದೆ? | |
| 9 | ಸಾವಯವ ಕೃಷಿ ಕೈಗೊಳ್ಳಲು ಇರುವ ಸೌಲಭ್ಯಗಳು ಮತ್ತು ಸಂಪನ್ಮೂಲಗಳ ಮಾಹಿತಿ | |
| 10 | ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡಲು ಇರುವ ಅವಕಾಶಗಳು/ ಒಪ್ಪಂದಗಳು | |
| 11 | ಸಂಘದ ವತಿಯಿಂದ ನೇಮಿಸಿದ ವ್ಯಕ್ತಿಯ ಸಾವಯವ ಕೃಷಿ ಮತ್ತು ಪ್ರಮಾಣೀಕರಣದ ಬಗ್ಗೆ ಪಡೆದ ತರಬೇತಿ ಅಥವಾ ಅನುಭವದ ವಿವರಗಳು. | |

| | | |
|---|---|---|
| 12 | ಸದರಿ ಯೋಜನೆಯಡಿ NPOP ಪ್ರಕಾರ ಸಾವಯವ ದೃಢೀಕರಣಕ್ಕೆ ಅವಕಾಶವಿರುತ್ತದೆ. ಈ ಪ್ರಮಾಣೀಕರಣಕ್ಕೆ ನೋಂದಾಯಿಸಲು ಇಚ್ಛಿಸುವಿರಾ? | |
| 13 | ಸದರಿ ಯೋಜನೆಯಡಿ ಸಲ್ಲಿಸಬೇಕಾದ ಈ ಕೆಳಗಿನ ದಾಖಲಾತಿಗಳನ್ನು ಲಗತ್ತಿಸುವುದು. | |
| | 1.ಸಂಘದ ಕ್ರೂಢೀಕೃತ ಮಾಹಿತಿ<br>2.ಸಂಘದ ನೋಂದಣಿ ಪತ್ರದ ಪ್ರತಿ<br>3.ರೈತರ ಅನುಮೋದಿತ ಪಟ್ಟಿ (Approved Farmer List)<br>4.ಸಂಘದ ಎಲ್ಲಾ ಸದಸ್ಯರ ಆಧಾರ್ ಕಾರ್ಡ್ ಪ್ರತಿ<br>5.ಸಂಘದ ಸದಸ್ಯರ ಜಮೀನಿನ ಪಹಣಿ ಪ್ರತಿ<br>6.ಸಂಘದ ಸದಸ್ಯರ ಜಮೀನಿನ GPS (ಅಕ್ಷಾಂಶ ಮತ್ತು ರೇಖಾಂಶ) ಸಂಖ್ಯೆ ಹೊಂದಿರುವ ಜಮೀನಿನ ಫೋಟೊ ಲಗತ್ತಿಸುವುದು. | |

ಸಂಘದ

ಪ್ರತಿನಿಧಿ/ಸಂಘವು

ನೇಮಿಸಿದ ವ್ಯಕ್ತಿಯ ಸಹಿ

ಅನುಬಂಧ-1 (ಬಿ)

ಅರ್ಜಿ ನಮೂನೆ (ವ್ಯಕ್ತಿಗತ ದೃಢೀಕರಣ)

ಸಾವಯವ ಕೃಷಿ ಮತ್ತು ದೃಢೀಕರಣ

| ಭಾವಚಿತ್ರ |
|---|

| | | |
|---|---|---|
| 1 | ರೈತರ ಹೆಸರು | |
| 2 | ರೈತರ ತಂದೆ/ಗಂಡನ ಹೆಸರು | |
| 3 | ರೈತರ ಪೂರ್ಣ ವಿಳಾಸ ಗ್ರಾಮ: | ಗ್ರಾಮ: |
| | | ಹೋಬಳಿ: |
| | | ತಾಲ್ಲೂಕು: |
| | | ಜಿಲ್ಲೆ: |
| 4 | ರೈತರ ದೂರವಾಣಿ ಸಂಖ್ಯೆ | |
| 5 | ರೈತರ ವಯಸ್ಸು/ವಿದ್ಯಾರ್ಹತೆ | |
| 6 | ರೈತರ ಆಧಾರ್ ನಂಬರ್. (ಪ್ರತಿಯನ್ನು ಲಗತ್ತಿಸುವುದು). | |
| 7 | ರೈತರ ಬ್ಯಾಂಕ್ ಖಾತೆ ಸಂಖ್ಯೆ/ಬ್ಯಾಂಕಿನ ಹೆಸರು ಮತ್ತು ಶಾಖೆ/ಐ.ಎಫ್.ಎಸ್.ಸಿ.ಕೋಡ್ (ಈ ವಿವರಗಳನ್ನೊಳಗೊಂಡ ಪಾಸ್ ಬುಕ್ ಪ್ರತಿಯನ್ನು ಲಗತ್ತಿಸುವುದು). | |
| 8 | ಈ ಯೋಜನೆಯಡಿ ಸಾವಯವ ಕೃಷಿ/ಧೃಡೀಕರಣಕ್ಕೆ ಒಳಪಡಿಸುವ ಒಟ್ಟು ಕ್ಷೇತ್ರ (ಹೆಕ್ಟೇರ್ಗಳಲ್ಲಿ) (ಪಹಣಿ ಪ್ರತಿಯನ್ನು ಲಗತ್ತಿಸುವುದು). | |

| | | | | |
|---|---|---|---|---|
| 9 | ಸಾವಯವ ದೃಢೀಕರಣಕ್ಕೆ ಒಳಪಡಿಸಲಾದ/ಒಳಪಡಿಸುವ ಹಿಡುವಳಿ ವಿವರ (ಹೆ). | ಜಮೀನಿನ ವಿಧ | ಸರ್ವೆ ನಂ. | ವಿಸ್ತೀರ್ಣ(ಹೆ) |
| | | ಖುಷ್ಕಿ | | |
| | | ನೀರಾವರಿ | | |
| | | ಇತರೆ | | |
| | | ಒಟ್ಟು | | |
| 10 | ರೈತರು ಬೆಳೆಯುತ್ತಿರುವ ಎರಡು ನಿರ್ದಿಷ್ಟ ಪ್ರಮುಖ ಬೆಳೆಗಳು | 1.<br>2. | | |
| 11 | ರೈತರ ಜಮೀನಿನ GPS (ಅಕ್ಷಾಂಶ ಮತ್ತು ರೇಖಾಂಶ) ಸಂಖ್ಯೆ ಹೊಂದಿರುವ ಜಮೀನಿನ ಫೋಟೊ ಲಗತ್ತಿಸುವುದು | | | |
| 12 | ರೈತರ PAN Card ನಂಬರ್ (ಪ್ರತಿಯನ್ನು ಲಗತ್ತಿಸುವುದು). | | | |
| 13 | ಸಾವಯವ ಕೃಷಿ ಕೈಗೊಳ್ಳಲು ಇರುವ ಸೌಲಭ್ಯಗಳು ಮತ್ತು ಸಂಪನ್ಮೂಲಗಳ ಮಾಹಿತಿ | | | |
| 14 | ಸಾವಯವ ಉತ್ಪನ್ನಗಳನ್ನು ಮಾರಾಟ ಮಾಡಲು ಇರುವ ಅವಕಾಶಗಳು/ ಒಪ್ಪಂದಗಳು | | | |
| 15 | ಸದರಿ ಯೋಜನೆಯಡಿ NPOP ಪ್ರಕಾರ ಸಾವಯವ ದೃಢೀಕರಣಕ್ಕೆ ಅವಕಾಶವಿರುತ್ತದೆ. ಈ ಪ್ರಮಾಣೀರಣಕ್ಕೆ ನೋಂದಾಯಿಸಲು ಇಚ್ಛಿಸುವಿರಾ | | | |

ರೈತರ ಸಹಿ

## ಅನುಬಂಧ-2

ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಸಾವಯವ ಕೃಷಿ ಸಲಹಾ ಸಮಿತಿ

| ಕ್ರ.ಸಂ | ಅಧಿಕಾರಿಗಳ ವಿವರ | ಪದನಾಮ |
|---|---|---|
| 1 | ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಉಪಾಧ್ಯಕ್ಷರು. |
| 3 | KSSOCA ವ್ಯವಸ್ಥಾಪಕ ನಿರ್ದೇಶಕರು | ಸದಸ್ಯರು |
| 4 | ಜಂಟಿ ಕೃಷಿ ನಿರ್ದೇಶಕರು(ಸಾವಯವ ಕೃಷಿ ಮತ್ತು ಪ್ರಯೋಗಾಲಯಗಳು) | ಸದಸ್ಯರು |
| 5 | ತೋಟಗಾರಿಕೆ ಜಂಟಿ ನಿರ್ದೇಶಕರು, ಬಯೋ ಟೆಕ್ನಾಲಜಿ ಸೆಂಟರ್, ಹುಳಿಮಾವು | ಸದಸ್ಯರು |
| 6 | ರಾಜ್ಯದ ನಾಲ್ಕೂ ಕೃಷಿ ವಿಶ್ವವಿದ್ಯಾನಿಲಯಗಳ ಸಾವಯವ ಕೃಷಿ/ ZBNF ವಿಭಾಗದ ಮುಖ್ಯಸ್ಥರು | ಸದಸ್ಯರು |
| 7 | ರಾಜ್ಯದ ತೋಟಗಾರಿಕೆ ವಿಶ್ವವಿದ್ಯಾನಿಲಯದ ಸಾವಯವ ಕೃಷಿ/ ZBNF ವಿಭಾಗದ ಮುಖ್ಯಸ್ಥರು | ಸದಸ್ಯರು |
| 8 | ಉಪ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಸದಸ್ಯ ಕಾರ್ಯದರ್ಶಿ |
| 9 | ವಿಶೇಷ ಆಹ್ವಾನಿತರು-ಸಭೆಯ ವಿಷಯ ಸೂಚಿಯನ್ನು ಆಧರಿಸಿ ವಿಷಯ ಪರಿಣಿತರನ್ನು ಸಭೆಗೆ ಆಹ್ವಾನಿಸುವುದು | |

ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ರಾಜ್ಯ ಮಟ್ಟದ ಸಾವಯವ ಕೃಷಿ ಸಲಹಾ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು

- ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಯೋಜನೆಯ ರೂಪುರೇಷೆ ಮತ್ತು ಮಾರ್ಗಸೂಚಿ ಸಿದ್ಧಪಡಿಸುವುದು.
- ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಯೋಜನೆಯ ಉಸ್ತುವಾರಿ ಕೈಗೊಳ್ಳುವುದು ಮತ್ತು ಪ್ರಗತಿ ಪರಿಶೀಲನೆ ಕೈಗೊಳ್ಳುವುದು ಹಾಗೂ ಕ್ಷೇತ್ರ ಭೇಟಿ ಕೈಗೊಳ್ಳುವುದು.

## X. B. 2020-21 ನೇ ಸಾಲಿಗೆ ರೈತಸಿರಿ ಯೋಜನೆಯ ಮಾರ್ಗಸೂಚಿಗಳು ಲೆಕ್ಕ ಶೀರ್ಷಿಕೆ: 2401-00-104-0-12

## (106,422 ,423)

2020-21 ನೇ ಸಾಲಿನ ರೈತಸಿರಿ ಯೋಜನೆಯಡಿ ರಾಜ್ಯದಲ್ಲಿ ಸಿರಿಧಾನ್ಯಗಳನ್ನು ಉತ್ತೇಜಿಸಲು "ರೈತಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು ರೂ. 500.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೈತಸಿರಿ ಯೋಜನೆಯನ್ನು ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯಗಳಿಗೆ (ರಾಗಿ, ಜೋಳ ಮತ್ತು ಸಜ್ಜೆ ಹೊರತುಪಡಿಸಿ) ಮೀಸಲಿಡುವುದು. 2019-20 ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನೀಡಬೇಕಾಗಿರುವ ಅನುದಾನವನ್ನು ಪಾವತಿಸಲು ಮೊದಲ ಆದ್ಯತೆ ನೀಡುವುದು.

**ರೈತಸಿರಿ" ಯೋಜನೆಯ ಮುಖ್ಯ ಉದ್ದೇಶಗಳು:**

- ರಾಜ್ಯದಲ್ಲಿನ ಸಿರಿಧಾನ್ಯಗಳ ಪ್ರದೇಶ ವಿಸ್ತರಣೆ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು.
- ಸಿರಿಧಾನ್ಯಗಳು ಪೌಷ್ಠಿಕ ಆಹಾರ, ರೈತರ ಭದ್ರತೆ, ಸುಸ್ಥಿರ ಕೃಷಿ ಮತ್ತು ಪರಿಸರದ ಸಂರಕ್ಷಣೆಗೆ ಪೂರಕವಾಗಿರುವ ಹಿನ್ನೆಲೆಯಲ್ಲಿ ಸಿರಿಧಾನ್ಯಗಳ ಬೆಳೆಯನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹಿಸುವುದು.
- ಅತೀ ಕಡಿಮೆ ಮಳೆ ಹಾಗೂ ಕಡಿಮೆ ಫಲವತ್ತತೆಯುಳ್ಳ ಜಮೀನಿನ ಸದ್ಬಳಕೆ ಮಾಡುವುದು.
- ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಿ, ಮಾರುಕಟ್ಟೆ ಸಂಪರ್ಕ ಹೆಚ್ಚಿಸಿ ಕೃಷಿ ಮತ್ತು ಆಹಾರದ ಮುಖ್ಯ ವಾಹಿನಿಗೆ ತರುವುದು.

**"ರೈತಸಿರಿ"ಯೋಜನೆಯ ಅನುಷ್ಠಾನ ಮಾರ್ಗಸೂಚಿ:**

**I. ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರೋತ್ಸಾಹಧನ (DBT ಮುಖಾಂತರ):**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯಗಳನ್ನು (ರಾಗಿ, ಜೋಳ ಮತ್ತು ಸಜ್ಜೆ ಹೊರತುಪಡಿಸಿ) ಹೊಸದಾಗಿ ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧರದ ಮೇರೆಗೆ ರೈತಸಿರಿ ಯೋಜನೆಯಡಿ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ನಗದು ಪ್ರೋತ್ಸಾಹಧನವನ್ನು ಎರಡು ಕಂತುಗಳಲ್ಲಿ ನೇರ ಸೌಲಭ್ಯ ವರ್ಗಾವಣೆ ಮೂಲಕ (Direct Benefit Transfer) ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಹೆಚ್ಚಿನ ರೈತರು ಸಿರಿಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುವುದು.

- ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯಗಳನ್ನು ಹೊಸದಾಗಿ ಬೆಳೆದ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪರಿಶೀಲಿಸಿ, ಮೊದಲ ಕಂತಿನ ಪ್ರೋತ್ಸಾಹಧನ ರೂ. 6000/-ಗಳನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಲೆಕ್ಕ ಶೀರ್ಷಿಕೆ: 2401-00-108-0-15 ರಡಿ ರೈತಸಿರಿ ಕಾರ್ಯಕ್ರಮಕ್ಕೆ ಒದಗಿಸಲಾಗಿರುವ ಅನುದಾನದಿಂದ ಆಯ್ಕೆಯಾದ ರೈತರಿಗೆ ನೇರ ಸೌಲಭ್ಯ ವರ್ಗಾವಣೆ (Direct Benefit Transfer)

ಮೂಲಕ ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡುವುದು. ಎರಡನೇ ಕಂತಿನ ಪ್ರೋತ್ಸಾಹಧನ ರೂ 4000/- ಅನ್ನು ಸಾವಯವ ಕೃಷಿ ಮತ್ತು ಸಿರಿಧಾನ್ಯ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ: 2401-00-104-0-12 ರಡಿ ಪ್ರೋತ್ಸಾಹಧನವನ್ನು ನೀಡುವುದು.

- ಪ್ರತಿ ಫಲಾನುಭವಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಮಾತ್ರ ಸೀಮಿತವಾಗುವಂತೆ ಪ್ರೋತ್ಸಾಹಧನ ನೀಡುವುದು.
- ಫಲಾನುಭವಿಗಳು ಹೊಂದಿರುವ ವಿಸ್ತೀರ್ಣಕ್ಕೆ ಸಮನಾಗಿ ಪ್ರೋತ್ಸಾಹಧನ ನೀಡುವುದು.

**ಫಲಾನುಭವಿಗಳ ಅರ್ಹತೆ:**

1. 2019-20 ನೇ ಸಾಲಿನಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನೀಡಬೇಕಾಗಿರುವ ಅನುದಾನವನ್ನು ಪಾವತಿಸಲು ಮೊದಲ ಆದ್ಯತೆ ನೀಡುವುದು.

2. ಅನುದಾನ ಲಭ್ಯವಿದ್ದಲ್ಲಿ, 2020-21 ನೇ ಸಾಲಿನಲ್ಲಿ ಫಲಾನುಭವಿಗಳನ್ನು ಸಿರಿಧಾನ್ಯಗಳಾದ ಊದಲು, ನವಣೆ, ಹಾರಕಾ, ಕೊರಲೆ, ಸಾಮೆ ಅಥವಾ ಬರಗು ಸಿರಿಧಾನ್ಯಗಳನ್ನು ಹೊಸದಾಗಿ ಬೆಳೆದಿರುವ ರೈತರನ್ನು ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಆಯ್ಕೆ ಮಾಡುವುದು (ಕಳೆದ ಸಾಲಿನಲ್ಲಿ ಸವಲತ್ತು ಪಡೆದ ರೈತರಿಗೆ ಈ ಸಾಲಿನಲ್ಲಿ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ) ಹಾಗೂ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

**ಫಲಾನುಭವಿಗಳ ಆಯ್ಕೆ:**

1. ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ತಮ್ಮ ಜಿಲ್ಲೆಗೆ ನೀಡಿರುವ ಗುರಿಯನ್ವಯ ತಾಲ್ಲೂಕುವಾರು ಗುರಿ ನಿಗದಿಪಡಿಸುವುದು.
2. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಈ ಯೋಜನೆಯ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ರೈತರಿಗೆ ಮಾಹಿತಿ ನೀಡಿ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಗಡುವು ನೀಡುವುದು.
3. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಯೋಜನೆಯ ಮಾಹಿತಿಯನ್ನು ಪ್ರಚುರ ಪಡಿಸಿ ಆಸಕ್ತ ರೈತರ ಹೆಸರುಗಳನ್ನು ನೋಂದಾಯಿಸಿಕೊಳ್ಳುವುದು. ರೈತರಿಂದ ಪಹಣಿ, ರೈತರ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ, ಆಧಾರ ಕಾರ್ಡ್ ಪ್ರತಿ, ಪ ಜಾ/ಪ ಪಂ ದ ರೈತರಾದಲ್ಲಿ ಜಾತಿ ಪ್ರಮಾಣ ಪತ್ರದ ದಾಖಲೆಗಳನ್ನು ಕಡ್ಡಾಯವಾಗಿ ಪಡೆಯುವುದು.
4. ನಿಗದಿಪಡಿಸಿದ ಗುರಿಗಿಂತ ಯಾವುದೇ ಕಾರಣಕ್ಕೂ ಹೆಚ್ಚಿನ ವಿಸ್ತೀರ್ಣವನ್ನು ಪರಿಗಣಿಸಬಾರದು.
5. ಕಾನೂನು ರೀತ್ಯ ಪ ಜಾ/ಪ ಪಂ/ಅಲ್ಪಸಂಖ್ಯಾತರು/ಮಹಿಳೆಯರು/ ಹಿಂದುಳಿದ ವರ್ಗದ ರೈತರಿಗೆ ಆದ್ಯತೆ ನೀಡುವುದು.

**ಅನುದಾನ ಬಿಡುಗಡೆ :**

ಮೇಲೆ ತಿಳಿಸಿರುವ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸಿರಿಧಾನ್ಯ ಬೆಳೆಯುವ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವ ಅನುದಾನವನ್ನು ಜಿಲ್ಲೆಗಳ ಬೇಡಿಕೆಗನುಗುಣವಾಗಿ ವೆಚ್ಚ ಭರಿಸುವುದು.

ಅರ್ಜಿ ನಮೂನೆ

ಅನುಬಂಧ

| ಭಾವಚಿತ್ರ |
|---|
| |

| ಕ್ರ. ಸಂ | ವಿವರ | |
|---|---|---|
| 1 | ರೈತನ ಹೆಸರು | |
| 2 | ತಂದೆ/ಗಂಡನ ಹೆಸರು | |
| 3 | ವಿಳಾಸ | ಗ್ರಾಮ |
| | | ಹೋಬಳಿ |
| | | ತಾಲ್ಲೂಕು |
| | | ಜಿಲ್ಲೆ |
| 4 | ರೈತರ ದೂರವಾಣಿ ಸಂಖ್ಯೆ | |
| 5 | ರೈತರ ವಯಸ್ಸು/ವಿದ್ಯಾರ್ಹತೆ | |
| 6 | ರೈತರ ಆಧಾರ್ ಸಂಖ್ಯೆ | |
| 7 | ರೈತರಖಾತೆ ಸಂಖ್ಯೆ/ಬ್ಯಾಂಕಿನ ಹೆಸರು ಮತ್ತು ಶಾಖೆ/ಐ ಎಫ್ಎಸ್ ಸಿ ಕೋಡ್ | |
| 8 | ರೈತರ ವರ್ಗ | ಪ ಜಾ/ಪ ಪಂ/ಮಹಿಳೆ/ಅಲ್ಪಸಂಖ್ಯಾಂತರು/ಹಿಂದುಳಿದ ವರ್ಗದವರು-ಪಜಾ/ಪ ಪಂ ರೈತರಾದಲ್ಲಿಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು |
| 9 | ಬೆಳೆ/ತಳಿ | |
| | ಬಿತ್ತನೆ ದಿನಾಂಕ | |

| | | | | | |
|---|---|---|---|---|---|
| 10 | ಸಿರಿಧಾನ್ಯ ಬೆಳೆಗೆ ಒಳಪಡಿಸುವ ಹಿಡುವಳಿ ವಿವರ(ಹೆ)- ಪಹಣಿ ಪ್ರತಿ ಲಗತ್ತಿಸಬೇಕು | ಬೆಳೆ | ಜಮೀನಿನ ವಿಧ(ಖುಷ್ಕಿ /ನೀರಾವರಿ) | ಸರ್ವೆ ನಂ. | ವಿಸ್ತೀರ್ಣ(ಹೆ) |
| | | | | | |

ದೃಡೀಕರಣ

ಮೇಲೆ ಸಲ್ಲಿಸಿರುವ ಎಲ್ಲಾ ವಿವರಗಳು ಸತ್ಯದಿಂದ ಕೂಡಿದೆ ಎಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಸಲ್ಲಿಸಿರುವ ವಿವರಗಳು ಸತ್ಯಕ್ಕೆ ದೂರವಾಗಿದ್ದಲ್ಲಿ ನಾನು ಪಡೆದಿರುವ ಪ್ರೋತ್ಸಾಹಧನವನ್ನು ಸರ್ಕಾರಕ್ಕೆ ಹಿಂದಿರುಗಿಸುವಲ್ಲಿ ಬದ್ಧನಾಗಿರುತ್ತೇನೆ. ಸರ್ಕಾರದಿಂದ ಸಿಗುವ ಪ್ರೋತ್ಸಾಹಧನವನ್ನು ಆಧಾರ್ ಲಿಂಕ್ ಆಗಿರುವ ನನ್ನ______________ ಬ್ಯಾಂಕ್ ____________ಶಾಖೆಯ _________ ಖಾತೆ ಸಂಖ್ಯೆಗೆ RTGS/NEFT ಮುಖಾಂತರ ವರ್ಗಾಯಿಸಲು ಕೋರುತ್ತೇನೆ.

ಸ್ಥಳ: ರೈತರ ಹೆಸರು ಮತ್ತು ಸಹಿ:

ದಿನಾಂಕ

## ಮುಂಗಡ ಹಣ ಸಂದ ರಸೀದಿ

ಸಹಾಯಕ ಕೃಷಿ ನಿರ್ದೇಶಕರು ______________________ತಾಲೂಕು --------- ಜಿಲ್ಲೆಇವರಿಂದ 2020-21 ನೇ ಸಾಲಿನ ರಾಜ್ಯವಲಯ ಸಾವಯವ ಕೃಷಿ ಮತ್ತು ಸಿರಿಧಾನ್ಯ ಕಾರ್ಯಕ್ರಮದ ರೈತಸಿರಿ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-104-0-12 ರ ----- ಉಪ ಶೀರ್ಷಿಕೆ ಯಡಿ ------- ಸಿರಿಧಾನ್ಯವನ್ನು _______ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಸರ್ಕಾರದ ಪ್ರೋತ್ಸಾಹಧನ ರೂ.________ (ಒಟ್ಟು ರೂಪಾಯಿ____________________________) ಗಳನ್ನು ವಂದಾನಾಪೂರ್ವಕವಾಗಿ ಸ್ವೀಕರಿಸಿದ್ದೇನೆ.

ಸ್ಥಳ:- ರೈತರ ಸಹಿ

ದಿನಾಂಕ:- ರೈತರ ಹೆಸರು ಮತ್ತು ಸಂಪೂರ್ಣ ವಿಳಾಸ.

## ದೃಡೀಕರಣ

ಶ್ರೀ/ಶ್ರೀಮತಿ________________ ಬಿನ್/ಕೋಂ. _________________,ಗ್ರಾಮ ________ ಹೋಬಳಿ___________ತಾಲೂಕು___________ಜಿಲ್ಲೆ__________ಇವರು 2020-21 ನೇ ಸಾಲಿನ ರೈತಸಿರಿ ಯೋಜನೆಯಡಿ________ ಸಿರಿಧಾನ್ಯವನ್ನು _______ ಎಕರೆ ಪ್ರದೇಶದಲ್ಲಿ ಬಿತ್ತನೆ ಮಾಡಿದ ಬಾಬ್ತು ಇವರಿಗೆ ಸರಕಾರದ ಪ್ರೋತ್ಸಾಹಧನ ರೂ. _______ (ಒಟ್ಟು ರೂಪಾಯಿ __________________________________) ಗಳನ್ನು ಮಾತ್ರ ಮಂಜೂರು ಮಾಡಬಹುದು.

| | |
|---|---|
| (ಹೆಸರು ಮತ್ತು ಸಹಿ) | (ಹೆಸರು ಮತ್ತು ಸಹಿ) |
| ಸಹಾಯಕ ಕೃಷಿ ಅಧಿಕಾರಿ | ಕೃಷಿ ಅಧಿಕಾರಿ, |
| ರೈ.ಸಂ.ಕೇಂ | ರೈ.ಸಂ.ಕೇಂ |

## C. 2020-21 ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯ ಅನುಷ್ಠಾನ ಮಾರ್ಗಸೂಚಿ

### ಲೆಕ್ಕ ಶೀರ್ಷಿಕೆ : 2401-00-104-0-12 (059)

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ (**ZBNF**) ಪದ್ಧತಿಯು ಅತಿಯಾದ ರಾಸಾಯನಿಕ ಬಳಕೆಯಿಂದ ಕೂಡಿರುವ ರಾಸಾಯನಿಕ ಕೃಷಿ ಹಾಗೂ ಪರಿಸರ ಸ್ನೇಹಿ ಸುಸ್ಥಿರ ಪದ್ಧತಿಯಾಗಿದ್ದರೂ ದುಬಾರಿ ಸಾವಯವ ಪರಿಕರ ಆಧಾರಿತ ಪದ್ಧತಿಯಾಗಿರುವ ಸಾವಯವ ಕೃಷಿ ಪದ್ಧತಿಗಳಿಂದ ವಿಭಿನ್ನವಾಗಿರುತ್ತದೆ. ಅತಿ ಅಲ್ಪ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆಯುವ ಲಾಭದಾಯಕ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯನ್ನು ಮಹಾರಾಷ್ಟ್ರದ ಪ್ರಗತಿಪರ ಕೃಷಿಕರಾದ ಶ್ರೀ ಸುಭಾಷ ಪಾಳೇಕರ್ ರವರು ಅಭಿವೃದ್ಧಿಪಡಿಸಿದ್ದು ಕಳೆದ ಹತ್ತು ವರ್ಷಗಳಿಂದ ಈ ಪದ್ಧತಿಯು ದೇಶಾದ್ಯಂತ ಅನುಚರಣೆಯಲ್ಲಿರುತ್ತದೆ. ಸದರಿ ಪದ್ಧತಿಯು ಇತ್ತೀಚಿಗೆ ವಿಶ್ವದೆಡೆ ಹೆಚ್ಚಿನ ಮಹತ್ವ ಪಡೆಯುತ್ತಿರುವ Regenerative Agriculture ವ್ಯಾಪ್ತಿಯಡಿ ಸೇರಿರುತ್ತದೆ. ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯು ಈ ಕೆಳಕಂಡ ನಾಲ್ಕು ಮೂಲ ತತ್ವಗಳ ಆಧಾರದ ಮೇಲೆ ಅವಲಂಬಿವಾಗಿರುತ್ತದೆ.

1. ಬೀಜಾಮೃತ : ದೇಶಿ ಹಸುವಿನ ಸಗಣಿ ಹಾಗೂ ಗಂಜಲ ಆಧಾರಿತ ಕಷಾಯಗಳಿಂದ ಬೀಜಗಳ ಲೇಪನ
2. ಜೀವಾಮೃತ: ದೇಶಿ ಹಸುವಿನ ಗಂಜಲ, ಸಗಣಿ, ಬೆಲ್ಲ ಹಾಗೂ ದ್ವಿದಳ ಧಾನ್ಯಗಳ ಹಿಟ್ಟಿನ ಮಿಶ್ರಣವನ್ನು ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳ ಸಂಖ್ಯೆಯನ್ನು ವೃದ್ಧಿಸಲು ಬಳಸುವುದು
3. ಬೆಳೆಗಳ ಹೊದಿಕೆ : ಭೂಮಿಯನ್ನು ಬೆಳೆಗಳು ಹಾಗೂ ಬೆಳೆ ಶೇಷಗಳಿಂದ ಹೊದಿಸುವುದು
4. ವಾಘಾಸ : ಮಣ್ಣಿನ ಹ್ಯೂಮಸ್ ನ್ನು ವೃದ್ಧಿಸಿ ಮಣ್ಣಿನ ವಾಯುಗುಣವನ್ನು ವೃದ್ಧಿಸುವುದು

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯ Scientific validation ಅನ್ನು ರಾಜ್ಯದ ಪ್ರತಿ ಹವಾಮಾನ ವಲಯದಲ್ಲಿ ಸಂಬಂಧಪಟ್ಟ ಕೃಷಿ/ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಮುಖಾಂತರ Operational Research Project (ORP) ಮಾದರಿಯಲ್ಲಿ ZBNF ಪ್ರಾಯೋಗಿಕ ಪ್ರಯೋಗಗಳನ್ನು ಸಂಶೋಧನಾ ಕೇಂದ್ರಗಳಲ್ಲಿ 2018-19ನೇ ಸಾಲಿನÀ ಬೇಸಿಗೆ ಹಂಗಾಮಿನಿಂದ ಪ್ರಾರಂಭಿಸಲಾಗಿದ್ದು, 2019-20ನೇ ಸಾಲಿನ ಮುಂಗಾರು ಹಂಗಾಮಿನಿಂದ ರಾಜ್ಯದ ಪ್ರತಿ ವಲಯದ ರೈತ ಕ್ಷೇತ್ರಗಳಲ್ಲಿಯೂ ಪ್ರಾರಂಭಿಸಲಾಗಿರುತ್ತದೆ. ಸದರಿ ಪ್ರಯೋಗಗಳನ್ನು 2020-21ನೇ ಸಾಲಿನಲ್ಲಿ ಮುಂದುವರೆಸಲಾಗಿರುತ್ತದೆ.

### ಯೋಜನೆಯ ಉದ್ದೇಶಗಳು:

- ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ (**ZBNF**) ಪದ್ಧತಿಯ **ವೈಜ್ಞಾನಿಕ** validation **ಕೈಗೊಳ್ಳುವುದು**.

- ರೈತರಿಗೆ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಿ ಅಪಾಯ(Risk)ವನ್ನು ಕಡಿಮೆ ಮಾಡುವುದು
- ನೈಸರ್ಗಿಕ ರೀತಿಯಿಂದ ಹವಾಮಾನ ವೈಪರೀತ್ಯವನ್ನು ಎದುರಿಸುವುದು
- ಅನಾವೃಷ್ಟಿ ಹಾಗೂ ಅತಿವೃಷ್ಟಿಯ ಸಂದರ್ಭಗಳಲ್ಲಿ ಉಂಟಾಗುವ ಬೆಳೆ ನಷ್ಟವನ್ನು ಎದುರಿಸಲು ರೈತರನ್ನು ಸಶಕ್ತರನ್ನಾಗಿಸುವುದು.
- ಸುರಕ್ಷಿತ ಹಾಗೂ ಪೌಷ್ಟಿಕ ಆಹಾರ ಉತ್ಪಾದನೆಯನ್ನು ವೃದ್ದಿಸುವುದು.
- ಮಣ್ಣಿನ ಸೂಕ್ಷ್ಮಜೀವಿ, ಪರಿಸರದಲ್ಲಿನ ಸಸ್ಯ ಮತ್ತು ಪ್ರಾಣಿಗಳು, ಜೇನು, ಪಕ್ಷಿಗಳು ಹಾಗೂ ಚಿಟ್ಟೆಗಳ ಸಂಖ್ಯೆಯನ್ನು ವೃದ್ದಿಸಿ ಪರಿಸರದ ಸಂರಕ್ಷಣೆ ಹಾಗೂ ಸುಧಾರಣೆಗೆ ಕ್ರಮ ಕೈಗೊಳ್ಳುವುದು.

**ಅನುಷ್ಠಾನ ಮಾರ್ಗಸೂಚಿ :**

ಪ್ರಸ್ತುತ ಸದರಿ ಪ್ರಯೋಗಗಳು ಸಂಶೋಧನಾ ಕೇಂದ್ರಗಳಲ್ಲಿ ಮೂರನೇ ವರ್ಷಕ್ಕೆ ಹಾಗೂ ರೈತರ ಕ್ಷೇತ್ರದಲ್ಲಿ 2ನೇ ವರ್ಷಕ್ಕೆ ಪ್ರವೇಶಿಸಿದ್ದು, 2020-21 ನೇ ಸಾಲಿನಲ್ಲಿ ಸಂಶೋಧನಾ ಕೇಂದ್ರಗಳಲ್ಲಿ ಮತ್ತು ಈಗಾಗಲೇ ಸ್ಥಾಪಿತವಾಗಿರುವ ರೈತರ ಕ್ಲಸ್ಟರ್ ಗಳಲ್ಲಿ ಕೇವಲ ZBNF ಪ್ರಾಯೋಗಿಕ ಪ್ರಯೋಗಗಳನ್ನು ಕನಿಷ್ಠ ಮಾನವ ಸಂಪನ್ಮೂಲ (Minimum Human Resource) ವನ್ನೊಳಗೊಂಡಂತೆ ಮುಂದುವರೆಸಿ ಅದರನ್ವಯ Field Observation ಗಳನ್ನು ದಾಖಲಿಸಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.

ಕಳೆದ ಎರಡು ವರ್ಷಗಳಲ್ಲಿ (2018-19 ಮತ್ತು 2019-20ನೇ ಸಾಲಿನ) ಸಂಶೋಧನಾ ಕೇಂದ್ರಗಳಲ್ಲಿ ಹಾಗೂ ರೈತರ ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ಕೈಗೊಳ್ಳಲಾದ ಪ್ರಯೋಗಗಳ ಈವರೆವಿಗಿನ ಫಲಿತಾಂಶಗಳ Interim Results ಅನ್ನು ಸಲ್ಲಿಸುವುದು.

ZBNF **ಅನುಷ್ಠಾನದ** ವಲಯ ಮಟ್ಟದ ಸಮಿತಿ :

| ಕ್ರ.ಸಂ. | ವಿವರ | ಸ್ಥಾನ |
|---|---|---|
| **1** | ORP ತಂಡದ ಮುಖ್ಯಸ್ಥರು | ಅಧ್ಯಕ್ಷರು |
| | ಬೇಸಾಯಶಾಸ್ತ್ರಜ್ಞ /ತೋಟಗಾರಿಕೆ ವಿಜ್ಞಾನಿ-1 | ಸದಸ್ಯರು |
| | ಕೀಟಶಾಸ್ತ್ರಜ್ಞ -1 | |
| | ಸಸ್ಯರೋಗಶಾಸ್ತ್ರಜ್ಞ -1 | |
| | ಅರ್ಥಶಾಸ್ತ್ರಜ್ಞ/ಸಂಖ್ಯೆಶಾಸ್ತ್ರಜ್ಞ-1 | |
| | ಸೂಕ್ಷ್ಮಾಣು ಜೀವಶಾಸ್ತಜ್ಞ-1 | |
| | ಮಣ್ಣು ವಿಜ್ಞಾನ ಶಾಸ್ತಜ್ಞ-1 | |
| | ವಲಯದ ಜಂಟಿ ಕೃಷಿ ನಿರ್ದೇಶಕರು | |
| | ತೋಟಗಾರಿಕಾ ಉಪ ನಿರ್ದೇಶಕರು -1 | |
| | ZBNF ಅಳವಡಿಸಿರುವ ರೈತರುಗಳು (ಪ್ರತಿ ಜಿಲ್ಲೆಗೆ | |

| | | |
|---|---|---|
| | ಒಬ್ಬರಂತೆ) | |
| | ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ-1 | |
| | ORP ತಂಡಕ್ಕೆ ಅವಶ್ಯವಿರುವ ಯಾವುದೇ ವ್ಯಕ್ತಿ-1 | |

ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು

- ORP ತಂಡವು ಹಂಚಿಕೆಯಾದ ವಲಯದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ.
- ORP ತಂಡವು ಹಂಚಿಕೆಯಾದ ವಲಯದಲ್ಲಿ ರೈತರ ತಾಕುಗಳಲ್ಲಿ ನೈಸರ್ಗಿಕ ಕೃಷಿಯ ಅನುಷ್ಠಾನಕ್ಕಾಗಿ**,** ಸಂಶೋಧನಾ ಕೇಂದ್ರಗಳಲ್ಲಿ ನೈಸರ್ಗಿಕ ಕೃಷಿಯನ್ನು ಮೌಲ್ಯಮಾಪನ (Scientific Validation) ಮಾಡಲು ಪ್ರಾಯೋಗಿಕ ಪ್ರಯೋಗಗಳನ್ನು ಕೈಗೊಳ್ಳುವುದು.
- ಪ್ರತಿ ಕೃಷಿ ಹವಾಮಾನ ವಲಯದಲ್ಲಿ ZBNF Project ನ ಅನುಷ್ಠಾನಕ್ಕೆ ವಾರ್ಷಿಕ ಕ್ರಿಯಾ ಯೋಜನೆ (Annual Action plan) ಸಿದ್ಧಪಡಿಸಿ ಅನುಮೋದನೆ ಪಡೆಯುವುದು.
- ಯೋಜನಾ ಪ್ರದೇಶದಲ್ಲಿ ಆಯ್ಕೆಯಾದ ರೈತರ ತಾಕುಗಳಲ್ಲಿ ಕಾಲಕಾಲಕ್ಕೆ ಸಮೀಕ್ಷೆ ಕೈಗೊಂಡು ಮಾಹಿತಿಯನ್ನು ZBNF website ನಲ್ಲಿ ನಮೂದಿಸುವುದು.
- ZBNF ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ಛಾಯಚಿತ್ರ ಮತ್ತು ವೀಡಿಯೋ ದಾಖಲಾತಿ ಮಾಡುವುದು.
- ರೈತರ ತಾಕುಗಳ ಸಮೀಕ್ಷೆ ಹಾಗೂ ಪ್ರಾಯೋಗಿಕ ಪ್ರಯೋಗಗಳ ಫಲಿತಾಂಶಗಳ ಕುರಿತು ಪ್ರತಿ ಹಂಗಾಮಿಗೆ ಸಂಶೋಧನಾ ಲೇಖನಗಳನ್ನು ಹೊರತರುವುದು.

**2020-21 ನೇ ಸಾಲಿನ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆಯಡಿ ಘಟಕವಾರು ಗುರಿ (ರೂ. ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ಹಂಚಿಕೆ | ಘಟಕಗಳು | ZBNF ಕ್ಲಸ್ಟರ್ ಮುಂದುವರಿಕೆಗಾಗಿ |
|---|---|---|---|
| 1 | ಕೇಂದ್ರ ಕಚೇರಿ | ಕಾರ್ಯಾಗಾರ, ವಿಚಾರಗೋಷ್ಠಿ (Seminars), ರಾಜ್ಯ ಮಟ್ಟದ ತರಬೇತಿಗಳನ್ನು ಆಯೋಜಿಸುವುದು ಮತ್ತು ಭಾಗವಹಿಸುವುದು. ಸಮೂಹ ಮತ್ತು ಮುದ್ರಣ ಮಾದ್ಯಮಗಳ ಮೂಲಕ ಪ್ರಚಾರ ಕಾರ್ಯಕ್ರಮ, ಉಸ್ತುವಾರಿ ಮತ್ತು ಮೌಲ್ಯಮಾಪನ, ಮೇಳಗಳು, ವಸ್ತುಪ್ರದರ್ಶನ, KSOCA ಸಂಸ್ಥೆಗೆ PGS ದೃಡೀಕರಣಕ್ಕಾಗಿ, ಇತ್ಯಾದಿ | 25.00 |
| 2 | ಕೃಷಿ ವಿಶ್ವವಿದ್ಯಾನಿಲಯಗಳು | ಪ್ರಯೋಗಗಳ ಮುಂದುವರಿಕೆಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ, ಆಡಳಿತಾತ್ಮಕ ವೆಚ್ಚ, ಪ್ರಯೋಗಾಲಯ ವೆಚ್ಚ, ಪ್ರಯಾಣ ವೆಚ್ಚ, ಸಂಶೋಧನಾ ವೆಚ್ಚ, ಸಂಸ್ಥೆಯ ವೆಚ್ಚ, ವಾಹನ ಬಾಡಿಗೆ, ಹೊಸ ಕ್ಲಸ್ಟರ್ ಗಳಿಗೆ ತರಬೇತಿ, ಮೂಲ ಸಮೀಕ್ಷೆ ಇತ್ಯಾದಿ | 375.00 |
| **ಒಟ್ಟು** | | | **400.00** |

## XI. ಮುಖ್ಯ ಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆ - Prime Minister's Krishi Sinchaayi Yojane-PMKSY)ಲೆಕ್ಕ ಶೀರ್ಷಿಕೆ: 2401-00-108-1-15

ಕರ್ನಾಟಕ ರಾಜ್ಯವು ರಾಜಾಸ್ಥಾನದ ನಂತರ ದೇಶದಲ್ಲಿ ಹೆಚ್ಚಿನ ಒಣಭೂಮಿ ಪ್ರದೇಶವನ್ನು ಹೊಂದಿರುವ ಎರಡನೆ ರಾಜ್ಯವಾಗಿರುತ್ತದೆ. ರಾಜ್ಯದಲ್ಲಿ ಸುಮಾರು ಶೇ.66 ರಷ್ಟು ಸಾಗುವಳಿ ಪ್ರದೇಶದಲ್ಲಿ ಮಳೆಯಾಶ್ರಿತ ಕೃಷಿ ಇದ್ದು, ಶೇ.34ರಷ್ಟು ಪ್ರದೇಶ ಮಾತ್ರ ನೀರಾವರಿ ಸೌಲಭ್ಯವನ್ನು ಹೊಂದಿರುತ್ತದೆ. ಬೆಳೆಗೆ ನೀರು ಅತ್ಯಮೂಲ್ಯ ಅವಶ್ಯಕತೆಯಾಗಿದ್ದು, ನೀರಿನ ಸಮರ್ಥ ಬಳಕೆ ಕೃಷಿಯಲ್ಲಿ ಪ್ರಾಮುಖ್ಯವಾಗಿರುತ್ತದೆ.

ರಾಜ್ಯದಲ್ಲಿ ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಸೂಕ್ಷ್ಮ ನೀರಾವರಿ ಯೋಜನೆಯನ್ನು 2003-04ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಸಹಾಯಧನದಡಿ ವಿತರಿಸಲಾಗುತ್ತಿದೆ. 2005-06ನೇ ಸಾಲಿನಿಂದ ಕೇಂದ್ರ ಸರ್ಕಾರವು ಸಹ ಸೂಕ್ಷ್ಮ ನೀರಾವರಿ ಕಾರ್ಯಕ್ರಮಕ್ಕೆ ಸಹಾಯಧನ ಒದಗಿಸುತ್ತಿದೆ. 2015-16ನೇ ಸಾಲಿನಿಂದ ಸೂಕ್ಷ್ಮ ನೀರಾವರಿ ಕಾರ್ಯಕ್ರಮಗಳನ್ನು ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆಯ (Prime Minister's Krishi Sinchayi Yojane) PMKSY -(Per Drop More Crop) ಘಟಕದಡಿ ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಏಪ್ರಿಲ್ 2017ರಿಂದ ಅನ್ವಯವಾಗುವಂತೆ ನೀಡಿರುವ PMKSY (Per Drop More Crop) ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿಗಳ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನದ ಪಾಲಿನ ವಿವರಗಳು ಈ ಕೆಳಗಿನಂತಿವೆ:

| ವರ್ಗ | 2.00 ಹೆಕ್ಟೇರ್ ಪ್ರದೇಶದವರೆಗೆ | | | 2.00 ಹೆಕ್ಟೇರ್ ಮೇಲ್ಪಟ್ಟು 5.00 ಹೆಕ್ಟೇರ್ ಪ್ರದೇಶದವರೆಗೆ | | |
|---|---|---|---|---|---|---|
| | ಕೇಂದ್ರ ಪಾಲಿನ ಸಹಾಯಧನ (%) | ರಾಜ್ಯದ ಪಾಲಿನ ಸಹಾಯಧನ (%) | ಒಟ್ಟು ಸಹಾಯಧನ **(%)** | ಕೇಂದ್ರ ಪಾಲಿನ ಸಹಾಯಧನ (%) | ರಾಜ್ಯದ ಪಾಲಿನ ಸಹಾಯಧನ (%) | ಒಟ್ಟು ಸಹಾಯಧನ **(%)** |
| ಸಣ್ಣ & ಅತಿ ಸಣ್ಣ/ ಪ.ಜಾತಿ/ಪಂಗಡ | 33 | 57 | 90 | 27 | 18 | 45 |
| ಇತರೆ (ಸಾಮಾನ್ಯ) | 27 | 63 | 90 | 27 | 18 | 45 |

2020-21ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ, ಲೆಕ್ಕಶೀರ್ಷಿಕೆ: 2401-00-108-1-15 (ಪ್ರಧಾನ ಮಂತ್ರಿಗಳ ಕೃಷಿ ಸಿಂಚಾಯಿ ಯೋಜನೆಯಡಿ Prime Minister's Krishi Sinchayi Yojane) PMKSY - Per Drop More Crop ಘಟಕದಡಿ ಉ.ಶೀ -059, 106, 422 ಮತ್ತು 423 ಹಾಗೂ ನಬಾರ್ಡ್ ಕೆಲಸಗಳು- ಉ.ಶೀ 436 ಅಡಿ ಅನುಷ್ಠಾನಗೊಳಿಸಲಾಗುತ್ತಿದೆ.

2020-21 ನೇ ಸಾಲಿನ ಆಯವ್ಯಯದಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮಗಳಿಗೆ ವಿವಿಧ ಲೆ. ಶೀ. ಗಳಡಿ ಒದಗಿಸಿದ ಅನುದಾನದ ವಿವರ ಈ ಕೆಳಗಿನಂತಿದೆ.

**2020-21 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ವಿವರ : (ಲಕ್ಷ ರೂ.ಗಳಲ್ಲಿ)**

| ಲೆಕ್ಕ ಶೀರ್ಷಿಕೆ | ಉಪ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ |
|---|---|---|
| ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401-00-108-1-15) | ಇತರೆ ಖರ್ಚುಗಳು-059 | 500.00 |
| | ಸಹಾಯಾನುದಾನ-106 | 24023.00 |
| | ವಿಶೇಷ ಘಟಕ ಉಪಯೋಜನೆ-422 | 6413.00 |
| | ಗಿರಿಜನ ಉಪಯೋಜನೆ-423 | 2664.00 |
| | ನಬಾರ್ಡ್ ಕೆಲಸಗಳು-436 | 618.00 |
| | **ಒಟ್ಟು** | **34218.00** |

**ಸಹಾಯಧನವನ್ನು ಭರಿಸುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು.**

ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿನ ಅನುದಾನವನ್ನು ಲೆಕ್ಕ ಶೀರ್ಷಿಕೆ 2401-00-108-1-15 ಅಡಿ ನಿಗದಿತ ಉಪಶೀರ್ಷಿಕೆಗಳಡಿ ನಿಗದಿಪಡಿಸಿರುವಂತೆ ಯೋಜನೆಯ ಮಾರ್ಗಸೂಚಿ ಅನ್ವಯ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಪ್ರತಿ ರೈತನಿಗೆ 5.00 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಬಹುದು. ಮೊದಲ ಎರಡು ಹೆಕ್ಟೇರ್ ಪ್ರದೇಶದವರೆಗೆ ಶೇ.90ರಷ್ಟು ಸಹಾಯಧನವನ್ನು ಹಾಗೂ 2.00 ಹೆಕ್ಟೇರ್‌ಗಿಂತ ಮೇಲ್ಪಟ್ಟು 5.00 ಹೆಕ್ಟೇರ್ ಪ್ರದೇಶದವರೆಗೆ ಶೇ.45ರಷ್ಟು ಸಹಾಯಧನವನ್ನು ನೀಡುವುದು.

ಪ್ರಸಕ್ತ(2020-21) ಸಾಲಿನಲ್ಲಿ ಆರ್.ಐ.ಡಿ.ಎಫ್. ಅಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ 2401-00-108-1-15 ಉಪ ಶೀರ್ಷಿಕೆ ನಬಾರ್ಡ್ ಕಾಮಗಾರಿಗಳು-436 ಅಡಿ ರೂ.618.00ಲಕ್ಷ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ಎಲ್ಲಾ ವರ್ಗದ ರೈತರಿಗೆ, ಪ್ರತಿ ರೈತರಿಗೆ ಮೊದಲ ಎರಡು ಹೆಕ್ಟೇರ್ ಪ್ರದೇಶದವರೆಗೆ ಶೇ.90ರಷ್ಟು ಸಹಾಯಧನವನ್ನು ಒದಗಿಸುವುದು.

1. 2020-21ನೇ ಸಾಲಿಗೆ ನೀಡಿರುವ ಕಾರ್ಯಕ್ರಮದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸುವುದು. ಮಹಿಳಾ (ಶೇ.33ರಷ್ಟು) ಮತ್ತು ಅಲ್ಪ ಸಂಖ್ಯಾತರ(ಶೇ.15 ರಷ್ಟು) ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಆದ್ಯತೆ ಮೇರೆಗೆ ಪರಿಗಣಿಸುವುದು.
2. ಸೂಕ್ಷ್ಮ ನೀರಾವರಿಗೆ ವ್ಯಾಪಕ ಪ್ರಚಾರ ನೀಡಲು ಮತ್ತು ಪ್ರೋತ್ಸಾಹಿಸಲು ಸೂಕ್ಷ್ಮ ನೀರಾವರಿ ಪದ್ಧತಿಯ ಉಪಯೋಗಗಳು, ಲಭ್ಯವಾಗುವ ಸಹಾಯಧನ, ತಯಾರಕ ಸಂಸ್ಥೆಗಳ ವಿವರ ಮತ್ತು ರೈತರ ವಂತಿಕೆಯ ವಿವರಗಳನ್ನೊಳಗೊಂಡ ಭಿತ್ತಿ ಪತ್ರ ಹೊರಡಿಸಿ, ಎಲ್ಲಾ ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಪ್ರದರ್ಶಿಸುವುದು.
3. ಒಮ್ಮೆ ಸೂಕ್ಷ್ಮ ನೀರಾವರಿ ಘಟಕವನ್ನು ಸಹಾಯಧನದಡಿ ಪಡೆದ ನಂತರ ಸೂಕ್ಷ್ಮ ನೀರಾವರಿ ಘಟಕವನ್ನು ಸದರಿ ರೈತರಿಗೆ ಏಳು ವರ್ಷಗಳವರೆಗೆ ಸಹಾಯಧನದಡಿ ಪಡೆಯಲು ಅವಕಾಶವಿರುವುದಿಲ್ಲ.
4. ಮಾಹೆವಾರು ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಖಡ್ಡಾಯವಾಗಿ ಭಾರತ ಸರ್ಕಾರ ನೀಡಿರುವ ಅನುಬಂಧಗಳ ಪ್ರಕಾರ ಬೆಳೆವಾರು ಕಡ್ಡಾಯವಾಗಿ ಸಲ್ಲಿಸಬೇಕು.
5. ಆರ್ಥಿಕ ವರ್ಷದ ಅಂತ್ಯಕ್ಕೆ ಸಾಧಿಸಲಾದ ಪ್ರಗತಿ ವರದಿಯನ್ನು (ಭೌತಿಕ ಹೆಕ್ಟೇರ್ ಹಾಗು ಆರ್ಥಿಕ ರೂ. ಲಕ್ಷಗಳಲ್ಲಿ) (ಕೇಂದ್ರದ ಪಾಲು ಹಾಗೂ ರಾಜ್ಯದ ಪಾಲು) ಮತ್ತು ಫಲಾನುಭವಿಗಳ ಸಂಖ್ಯೆಯೊAದಿಗೆ (ಹನಿ ಮತ್ತು ತುಂತುರು ನೀರಾವರಿ ಘಟಕಗಳಿಗೆ ಪ್ರತ್ಯೇಕವಾಗಿ) ಉಪಯೋಗಿತ ಪತ್ರಗಳೊಂದಿಗೆ ತಾಳೆ ಹೊಂದಿಸಿ ಮುಂದಿನ ಆರ್ಥಿಕ ವರ್ಷದ ಏಪ್ರಿಲ್ ಮಾಹೆಯೊಳಗಾಗಿ ಸಲ್ಲಿಸುವುದು.
6. ಕೇಂದ್ರ ಸರ್ಕಾರಕ್ಕೆ ಫಲಾನುಭವಿಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಆಡಿಟೆಡ್ ಉಪಯೋಗಿತ ಪತ್ರ ಹಾಗು ಅದಕ್ಕೆ ತಾಳೆಯಾಗುವ ಪ್ರಗತಿ ವರದಿಯನ್ನು ಆಂಗ್ಲ ಭ್ಹಾಷೆಯಲ್ಲಿ ಸಲ್ಲಿಸುವುದು.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಕೃಷಿ ಇಲಾಖೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ಜಿಲ್ಲಾವಾರು ಕ್ರಿಯಾ ಯೋಜನೆ ವಿವರಗಳನ್ನು ನೀಡಲಾಗುವುದು.

**ಸೂಕ್ಷ್ಮ ನೀರಾವರಿ ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಗಳು:**

ಈ ಯೋಜನೆಯನ್ನು ನೀರಿನ ಸಮರ್ಥ ಬಳಕೆಯಲ್ಲಿ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಲ್ಲಿ ರೂಪಿಸಲಾಗಿದೆ.

1. 2019-20 ನೇ ಸಾಲಿನಲ್ಲಿ ಕ್ರಿಯಾ ಯೋಜನೆ ಪ್ರಕಾರ ಖರೀದಿಸಿದ/ ಅಳವಡಿಸಿದ/ ಅನುಷ್ಠಾನ ಮಾಡಿದ ಹನಿ ಮತ್ತು ತುಂತುರು ನೀರಾವರಿ ಘಟಕಗಳಿಗೆ ಅನುದಾನ ಕೊರತೆಯಿಂದ/ಖಜಾನೆ ಸಮಸ್ಯೆಯಿಂದ ಸಹಾಯಧನ ಪಾವತಿಸಲಾಗದ ಅರ್ಜಿಗಳಿಗೆ ಕೇಂದ್ರ ಕಚೇರಿಯಿಂದ ಅನುಮೋದನೆ ಪಡೆದು ಜ್ಯೇಷ್ಠತೆ ಆಧಾರದ ಮೇಲೆ ಸಹಾಯಧನವನ್ನು ಪಾವತಿಸಲು ಕ್ರಮ ವಹಿಸುವುದು. ನಂತರ 2020-21ನೇ ಸಾಲಿನಲ್ಲಿ ನಿಯಮಾನುಸಾರ ಕ್ರಮಬದ್ದವಾಗಿ ಸ್ವೀಕರಿಸಿದ(ಬಾಕಿ)ಅರ್ಜಿಗಳಿಗೆ ಮೊದಲು ಜ್ಯೇಷ್ಠತೆ ಆಧಾರದ ಮೇಲೆ ಸಹಾಯಧನ ನೀಡುವುದು.
2. ಸರ್ಕಾರದಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿ0ದ ಪಡೆದಂತಹ ಹನಿ ಮತ್ತು ತುಂತುರು ನೀರಾವರಿ ಘಟಕಗಳು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತವೆ.
3. ಹನಿ ನೀರಾವರಿ ಮತ್ತು ತುಂತುರು ನೀರಾವರಿಗೆ ಸಂಬ0ಧಿಸಿದ0ತೆ ಭಾರತ ಸರ್ಕಾರದಿಂದ ನೀಡಿರುವ ಸೂಚ್ಯಂಕ ದರಗಳನ್ನು (Indicative cost) ***ಅನುಬಂಧ-1ರಲ್ಲಿ*** ಹಾಗೂ ಇದರ ಅನ್ವಯ ಹನಿ ನೀರಾವರಿ ಘಟಕಗಳಿಗೆ ನೀಡಬೇಕಾಗಿರುವ ಸಹಾಯಧನದ ವಿವರಗಳನ್ನು ***ಅನುಬಂಧ-2*** ಮತ್ತು ತುಂತುರು ನೀರಾವರಿ ಘಟಕಗಳಿಗೆ ನೀಡಬೇಕಾಗಿರುವ ಸಹಾಯಧನವನ್ನು ***ಅನುಬಂಧ-3*** ರಲ್ಲಿ ನೀಡಲಾಗಿರುತ್ತದೆ.
4. ರೈತರು ಸಹಾಯಧನದಡಿ ಸವಲತ್ತನ್ನು ಪಡೆಯಲು **FRUITS** (Farmers Registration and Unified Beneficiary Information System) Portal ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ನೋಂದಾಯಿಸಿಕೊ0ಡ ರೈತರು ಮಾತ್ರ ಸವಲತ್ತನ್ನು ಪಡೆಯಲು ಅರ್ಹರಿರುತ್ತಾರೆ.
5. ಸವಲತ್ತನ್ನು ಪಡೆಯಲು ರೈತರು ನಿಗದಿತ ನಮೂನೆಯಲ್ಲಿ ಸಂಬ0ಧಿಸಿದ ದಾಖಲೆಗಳೊಂದಿಗೆ (ವೈಯುಕ್ತಿಕ ವಿವರ, ಮೊಬೈಲ್ ಸಂಖ್ಯೆ ಪಹಣಿ/ಹಿಡುವಳಿ ಪತ್ರ, ಚೆಕ್ಕುಬಂದಿ, ನೀರಿನ ಲಭ್ಯತೆಯ ಪ್ರಮಾಣ ಪತ್ರ (ನೀರಿನ ಮೂಲದ ಪತ್ರ), **ಆಧಾರ್ ಕಾರ್ಡ್‌ನ ಪ್ರತಿ**(ಆಧಾರ್ ಕಾರ್ಡ್‌ನ ಪ್ರತಿಯನ್ನು ಪಡೆಯುವಾಗ ರೈತರಿಂದ ತಪ್ಪದೇ ಒಪ್ಪಿಗೆ ಪತ್ರ (Consent letter) ಪಡೆಯುವುದು, ಮತದಾರರ ಗುರುತಿನ ಚೀಟಿ, ಭಾವಚಿತ್ರ, **ಬ್ಯಾಂಕ್ ಖಾತೆ ವಿವರಗಳು (IFSC ಕೋಡ್‌ನೊಂದಿಗೆ),** ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಾಗಿದ್ದಲ್ಲಿ ಮಾತ್ರ), ಹಾಗೂ ಘಟಕದ ಖರೀದಿಗೆ ಬ್ಯಾಂಕ್‌ನಿAದ ಸಾಲ ಪಡೆದಿದ್ದಲ್ಲಿ, ಬ್ಯಾಂಕ್ ಸಾಲದ ಖಾತೆ ವಿವರಗಳು ಇವುಗಳೊಂದಿಗೆ ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸುವುದು.

6. ಸರ್ಕಾರದ ಸಹಾಯಧನ ಪಾವತಿಯನ್ನು ಆಧಾರ್ ಸಂಖ್ಯೆಗೆ ಲಿಂಕ್ ಮಾಡಬೇಕಿರುವುದರಿಂದ ರೈತರ ಅರ್ಜಿಯೊಂದಿಗೆ ಆಧಾರ್ ಕಾರ್ಡ್ನ ಪ್ರತಿ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಪಡೆಯುವುದು.

7. ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರವನ್ನು ನೀಡಿ, ರೈತ ಸಂಪರ್ಕ ಕೇಂದ್ರದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು (ಫಲಾನುಭವಿಗಳ ಹೆಸರು, ವಿಳಾಸ, ಅರ್ಜಿ ನೀಡಿದ ದಿನಾಂಕ) ಜೇಷ್ಠತೆಯಲ್ಲಿ (seniority wise) ಒಂದು ಪ್ರತ್ಯೇಕ ವಹಿಯಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ದಾಖಲಿಸುವುದು ಹಾಗೂ ಆನ್‌ಲೈನ್ ಮೂಲಕ ಕ್ರಮಬದ್ಧವಾಗಿ ದಾಖಲಿಸುವುದು.

8. ಒಮ್ಮೆ ಸೂಕ್ಷ್ಮ ನೀರಾವರಿ ಘಟಕವನ್ನು ಸಹಾಯಧನದಡಿ ಪಡೆದ ನಂತರ ಸೂಕ್ಷ್ಮ ನೀರಾವರಿ ಘಟಕವನ್ನು ಸದರಿ ರೈತರಿಗೆ ಏಳು ವರ್ಷಗಳವರೆಗೆ ಸಹಾಯಧನದಡಿ ಪಡೆಯಲು ಅವಕಾಶವಿರುವುದಿಲ್ಲದಿರುವ ಪ್ರಯುಕ್ತ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲೇ ಪರಿಶೀಲಿಸಿ ದೃಡೀಕರಿಸುವುದು.

9. ರೈತರು ರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸಿದ ಅರ್ಜಿಗಳನ್ನು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಪರಿಶೀಲಿಸಿ ನಂತರ ಅರ್ಜಿಗಳನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

10. ಸಹಾಯಕ ಕೃಷಿ ನಿರ್ದೇಶಕರು ಬಂದAತಹ ಅರ್ಜಿಗಳನ್ನು ಪರಿಶೀಲಿಸಿ, ಇಲಾಖೆಯ ವೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಆಗಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

11. ರೈತರಿಂದ ಸೂಕ್ಷ್ಮ ನೀರಾವರಿ ಘಟಕವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ರೂ.20/-ರ ಛಾಪಾ ಕಾಗದದ ಮೇಲೆ ಘೋಷಣೆಯನ್ನು ಪಡೆದುಕೊಳ್ಳುವುದು.

12. ಸಹಾಯಕ ಕೃಷಿ ನಿರ್ದೇಶಕರು, ಆನ್‌ಲೈನ್‌ನಲ್ಲಿ ನಮೂದಾಗಿರುವ ದಾಖಲಾತಿಗಳನ್ನು ಪರಿಶೀಲಿಸಿ, ರೈತರು ಇಚ್ಛಿಸಿದ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಪಡೆಯಲು (ಸರ್ಕಾರ ಅನುಮೋದಿಸಿದ ಪಟ್ಟಿಯಲ್ಲಿರುವಂತೆ) ನಿಗದಿಪಡಿಸಿದ ವಾರ್ಷಿಕ ಕಾರ್ಯಕ್ರಮದನ್ವಯ ಜೇಷ್ಠತೆ ಆಧಾರದ ಮೇರೆಗೆ ರೈತರು ಖರೀದಿಸಲು ಇಚ್ಛಿಸಿದ ಉಪಕರಣವೇ ದಾಖಲಾಗಿರುವುದನ್ನು ಗಮನಿಸಿ ಅಥವಾ ಅವಶ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳ ತರುವಾಯ ಸದರಿ ಘಟಕಕ್ಕೆ ಇತರೆ ಇಲಾಖೆಗಳಾದ ತೋಟಗಾರಿಕೆ/ರೇಷ್ಮೆ ಇಲಾಖೆಯಿಂದ ಸಹಾಯಧನ ಪಡೆದಿರುವುದಿಲ್ಲವೆಂಬ ದೃಢೀಕರಣ ಪತ್ರದ ದಾಖಲಾತಿ ಪತ್ರ ನೀಡಲು ಅರ್ಜಿದಾರರಿಗೆ ತಿಳಿಸುವುದು.

13. ಲಘು ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಸಲ್ಲಿಸಿರುವ ಅರ್ಜಿಗಳನ್ನು ಹನಿ ನೀರಾವರಿ ಮತ್ತು ತುಂತುರು ನೀರಾವರಿಯೆಂದು ಪ್ರತ್ಯೇಕಿಸುವುದು.

## ಹನಿ ನೀರಾವರಿ

- ಹನಿ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಸಲ್ಲಿಸಿರುವ ಅರ್ಜಿಗಳಿಗೆ ಮಾತ್ರ ಪ್ರತಿ ಫಲಾನುಭವಿಗೆ ಸಂಬ0ಧಿಸಿದ0ತೆ ಪ್ರತ್ಯೇಕ ಕಡತವನ್ನು ನಿರ್ವಹಿಸುವುದು.
- ಹನಿ ನೀರಾವರಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಜಿದಾರರು ನಮೂದಿಸಿದ/ ನಮೂದಿಸದಿದ್ದಲ್ಲಿ ಸರಬರಾಜು ಮತ್ತು ತೃಪ್ತಿಕರ ಸೇವೆ ಒದಗಿಸುವ ಅನುಮೋದಿತ ಸಂಸ್ಥೆಗಳಿಗೆ ವಿನ್ಯಾಸ (ಪ್ಲಾನ್ ಲೇ ಔಟ್) ಮತ್ತು ಅದಕ್ಕೆ ತಗಲುವ ಅಂದಾಜು ಪತ್ರಿಕೆ(ಎಸ್ಟಿಮೇಟ್)ಯನ್ನು ಸಲ್ಲಿಸಲು ತಿಳಿಸುವುದು.
- ಸಂಸ್ಥೆಗಳು ಸಲ್ಲಿಸಿದ ಪ್ಲಾನ್ ಲೇ ಔಟ್ ಮತ್ತು ಅಂದಾಜು ಪತ್ರಿಕೆಯೊಂದಿಗೆ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಪೂರ್ವ ತಪಾಸಣೆ ಮಾಡಿ ಪ್ಲಾನ್ ಲೇ ಔಟ್ ಮತ್ತು ಅದರ ಅಂದಾಜು ಪತ್ರಿಕೆ ಸರಿಯಾಗಿರುವ ಬಗ್ಗೆ ದೃಡೀಕರಣ ಮತ್ತು ಅನುಮೋದನೆ ನೀಡುವುದು.
- ಪೂರ್ವ ತಪಾಸಣಾ ವರದಿಯನ್ನು ಹಾಗೂ ಕ್ಷೇತ್ರದಲ್ಲಿ ರೈತರು ಮತ್ತು ಇಲಾಖಾ ಅಧಿಕಾರಿಗಳನ್ನೊಳಗೊಂಡ ಜಿ.ಪಿ.ಎಸ್ ಛಾಯಾಚಿತ್ರವನ್ನು ಕೆ. ಕಿಸಾನ್ ಮೋಬೈಲ್ ಆಪ್ ನಲ್ಲಿ ಅಪ್‌ಲೋಡ್ ಮಾಡುವುದು.
- ರೈತರು ಸಲ್ಲಿಸಿದ ದಾಖಲಾತಿಗಳನ್ನು, ಸಂಸ್ಥೆಯವರು ಸಲ್ಲಿಸಿದ ಪ್ಲಾನ್ ಲೇ ಔಟ್ ಹಾಗೂ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಿ, ರೈತ ಸಂಪರ್ಕ ಕೇಂದ್ರ ಅಧಿಕಾರಿಗಳು ನೀಡಿದ ಪರಿಶೀಲನಾ ವರದಿ ಸಮರ್ಪಕವಾಗಿದ್ದಲ್ಲಿ ರೈತರಿಗೆ, ಅನುದಾನದ ಲಭ್ಯತೆಯ ಆಧಾರದ ಮೇಲೆ ರೈತರ ವಂತಿಕೆ ಪಾವತಿಸಲು ಮಂಜೂರಾತಿ ಪತ್ರ (Sanction letter) ನೀಡುವುದು. ಮಂಜೂರಾತಿ ಪತ್ರದ ನಮೂನೆಯನ್ನು ***ಅನುಬಂಧ-4*** ರಲ್ಲಿ ಲಗತ್ತಿಸಿದೆ.
- ರೈತರ ವಂತಿಕೆಯನ್ನು ರೈತರ ಬ್ಯಾಂಕ್ ಖಾತೆಯಿಂದ ಆರ್.ಟಿ.ಜಿ.ಎಸ್/ NEFT ಮೂಲಕವೇ ತಯಾರಕ ಸಂಸ್ಥೆಗೆ ಪಾವತಿಸಲು/ ವರ್ಗಾಯಿಸಲು ಕ್ರಮ ವಹಿಸುವುದು
- ರೈತರ ವಂತಿಕೆ ಪಾವತಿಸಿದ ಬಗ್ಗೆ ಮಾಹಿತಿ ನೀಡಿದ ನಂತರ ರೈತರ ದೃಢೀಕರಣ ಪತ್ರದ ಆಧಾರದ ಮೇಲೆ ತಯಾರಕ ಸಂಸ್ಥೆ/ ದರಕರಾರು ಹೊಂದಿರುವ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ನೀಡುವುದು. ಕಾರ್ಯಾದೇಶದ (Work Order) ನಮೂನೆಯನ್ನು ***ಅನುಬಂಧ-5*** ರಲ್ಲಿ ಲಗತ್ತಿಸಿದೆ.
- ಕಾರ್ಯಾದೇಶ ನೀಡಿದ 15 ದಿನಗಳೊಳಗಾಗಿ ತಯಾರಕ ಸಂಸ್ಥೆಗಳು ಹನಿ ನೀರಾವರಿ ಘಟಕಗಳನ್ನು ಅನುಮೋದಿತ ಪ್ಲಾನ್ ಲೇ ಔಟ್ ಮತ್ತು ಇಲಾಖೆಯ ಮಾರ್ಗಸೂಚಿಯಂತೆ ಹನಿ ನೀರಾವರಿ ಘಟಕಗಳನ್ನು ರೈತರ ಕ್ಷೇತ್ರದಲ್ಲಿ ಅಳವಡಿಸುವುದು. (ಕಾರ್ಯಾದೇಶ ನೀಡಿದ 15 ದಿನಗಳೊಳಗಾಗಿ ಸರಬರಾಜು ಮಾಡದಿದ್ದ ಸಂದರ್ಭದಲ್ಲಿ ಲಿಖಿತ ರೂಪದಲ್ಲಿ ಸಂಸ್ಥೆಗೆ ಹಾಗೂ ಕೇಂದ್ರ ಕಚೇರಿಗೆ ಮಾಹಿತಿ ನೀಡುವುದು)
- ಕೇಂದ್ರ ಮತ್ತು ರಾಜ್ಯದ ಪಾಲಿನ ಒಟ್ಟು ಸಹಾಯಧನವನ್ನು ಒಂದೇ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡುವುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನಕ್ಕೆ ಪ್ರತ್ಯೇಕ ಬಿಲ್ಲುಗಳನ್ನು ಪಡೆಯದೇ, ಒಂದೇ ಬಿಲ್ಲನ್ನು ಪಡೆಯುವುದು. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು

ಪ್ರತ್ಯೇಕವಾಗಿ ಬಿಡುಗಡೆ ಮಾಡಿದಲ್ಲಿ ಮಾತ್ರ ಸಂಸ್ಥೆಗಳಿAದ GOI ಮತ್ತು GOK share ಗೆ ಪ್ರತ್ಯೇಕವಾದ ನಗದು/ ಕ್ರೆಡಿಟ್ ಬಿಲ್ಲುಗಳನ್ನು ಒಂದೇ ಬಿಲ್ಲಿನ ಆರು ಪ್ರತಿಗಳನ್ನು ಮೂಲ ಸಹಿಯೊಂದಿಗೆ ಪಡೆಯುವುದು. ಬಿಲ್ಲುಗಳಲ್ಲಿ ಕಡ್ಡಾಯವಾಗಿ GST ನಂಬರ್ ಹಾಗೂ ಈ ಕುರಿತ ತೆರಿಗೆ ಬಾಬ್ತನ್ನು ಸ್ಪಷ್ಟವಾಗಿ ನಮೂದಿಸಿರಬೇಕು.

- **ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಅಧಿಕಾರಿಗಳು** ಹನಿ ನೀರಾವರಿ ತಯಾರಕ ಸಂಸ್ಥೆಗಳು ಕ್ಷೇತ್ರದಲ್ಲಿ ಅನುಮೋದಿತ ಪ್ಲಾನ್ ಲೇಔಟ್ ಮತ್ತು ಇಲಾಖೆಯ ಮಾರ್ಗಸೂಚಿಯಂತೆ ನೈಜವಾಗಿ ಅಥವಾ ವಾಸ್ತವವಾಗಿ ಅಳವಡಿಸಿರುವ ಹನಿ ನೀರಾವರಿ ಘಟಕದ ವಿವಿಧ ಪರಿಕರಗಳ ಪ್ರಮಾಣಕ್ಕೆ (Actual material) ಗುಜರಾತ್ ಗ್ರೀನ್ ರೆವಲೂಷನ್ ಸಂಸ್ಥೆಯು (ಜಿ.ಜಿ.ಆರ್.ಸಿ) ನೀಡಿರುವ ದರಗಳನ್ನು (ಜಿ.ಜಿ.ಆರ್.ಸಿ ದರಗಳ ವಿವರಗಳನ್ನು ***ಅನುಬಂಧ-6*** ರಲ್ಲಿ ನೀಡಲಾಗಿದೆ) ಅನುಸರಿಸಿ ಬಿಲ್ಲುಗಳನ್ನು ತಯಾರಿಸಿರುವ ಬಗ್ಗೆ ಹಾಗೂ ಬಿಲ್ಲಿನಲ್ಲಿ ನಮೂದಿಸಿರುವ ಪ್ರಮಾಣಕ್ಕೆ ತಾಳೆ ಹೊಂದುತ್ತಿದೆಯೇ ಎಂದು ಪರಿಶೀಲಿಸಿ, ದೃಢೀಕರಿಸುವುದು. ಸೂಕ್ಷ್ಮ ನೀರಾವರಿ ಘಟಕಗಳ ಎಲ್ಲಾ ಭಾಗಗಳನ್ನು/ಸಾಮಗ್ರಿಗಳನ್ನು (Components) ಅಳವಡಿಸಿರುವ ಬಗ್ಗೆ ಭೌತಿಕವಾಗಿ ಪರಿಶೀಲಿಸುವುದು. **ಇದೇ ಸಮಯದಲ್ಲಿ ಕೆ ಕಿಸಾನ್ ಮೋಬೈಲ್ ಆಪ್ ನಲ್ಲಿ ಅಪ್ ಲೋಡ್ ಮಾಡುವುದು.** ಇದೆ ಸಂದರ್ಭದಲ್ಲಿ Geo-tagged ಫೋಟೋಗಳನ್ನು ಕೇಂದ್ರ ಸರ್ಕಾರದ ಭುವನ್ ಸಾಫ್ಟ್ವೇರ್‌ನ, PDMC (Per Drop More Crop) ಪೋರ್ಟಲ್‌ನಲ್ಲಿ ಸಹ ತಪ್ಪದೇ ಅಪ್‌ಲೋಡ್ ಮಾಡುವುದು.
- ರೈತರಿಂದ ಘಟಕದ ಅಳವಡಿಕೆ ಬಗ್ಗೆ ಪಡೆದ ತೃಪ್ತಿಕರ ಪ್ರಮಾಣ ಪತ್ರದೊಂದಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು, ದೃಢೀಕರಣಗಳನ್ನು ಮತ್ತು ಪರಿಶೀಲನಾ ವರದಿಯೊಂದಿಗೆ ಸಂಸ್ಥೆಯು ನೀಡಿದ ಬಿಲ್ಲುಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಹನಿ ನೀರಾವರಿಗೆ ಸಂಬಂಧಿಸಿ , ಗುಜರಾತ್ ಗ್ರೀನ್ ರೆವಲೂಷನ್ ಸಂಸ್ಥೆಯು (ಜಿ.ಜಿ.ಆರ್.ಸಿ) ನೀಡಿರುವ ದರಗಳ ಅನ್ವಯ, ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ವಿವಿಧ ಅಂತರಗಳಲ್ಲಿ ವಿವಿಧ ವಿಸ್ತೀರ್ಣಗಳಿಗೆ ಅಗತ್ಯವಿರುವ ಪರಿಕರಗಳ ಅಂದಾಜು ಪ್ರಮಾಣ ವಿವರಗಳನ್ನು ಈ ಕಚೇರಿಯ ಪತ್ರ ಸಂಖ್ಯೆ: ಉಕೃನಿ/ಕೃಯಾಂ&ಸೂನೀ/ ಸೂನೀ/ ನೋಂದಣಿ/ದರ/ 2017-18, ದಿ:17-02-2018 ನೀಡಿರುವಂತೆ ಅನುಸರಿಸಲಾಗಿದೆಯೇ ಎಂದು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸುವುದು.
- ಹನಿ ನೀರಾವರಿ ಮತ್ತು ತುಂತುರು ನೀರಾವರಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ನೀಡಿರುವ ಸೂಚ್ಯಂಕ ದರಗಳನ್ನು (Indicative cost) ***ಅನುಬಂಧ-1*** ರಲ್ಲಿ ಹಾಗೂ ಇದರ ಅನ್ವಯ ಹನಿ ನೀರಾವರಿ ಘಟಕಗಳಿಗೆ ನೀಡಬೇಕಾಗಿರುವ ಸಹಾಯಧನದ ವಿವರಗಳನ್ನು ***ಅನುಬಂಧ-2*** ರಲ್ಲಿ ನೀಡಲಾಗಿದ್ದು ಅದರನ್ವಯೇ ಬಿಲ್ಲುಗಳನ್ನು ನೀಡಲಾಗಿದೆಯೇ ಎಂದು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸುವುದು.

- ಹನಿ ನೀರಾವರಿಗೆ ಸಂಬಂಧಿಸಿದಂತೆ ವಿಸ್ತೀರ್ಣಕ್ಕನುಗುಣವಾಗಿ ಕ್ಷೇತ್ರದಲ್ಲಿ ಅಳವಡಿಸಿರುವ Actual material ನ ಒಟ್ಟು ಮೊತ್ತ ಹಾಗೂ ಜಿ.ಜಿ.ಆರ್.ಸಿ ದರಗಳಂತೆ ಭಾರತ ಸರ್ಕಾರದ ಸೂಚ್ಯಂಕ ದರಗಳನ್ನು ಹೋಲಿಸುವುದು. ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸರ್ಕಾರದ ಸಹಾಯಧನವನ್ನು (ಅನುಬಂಧ-1ರಂತೆ) ಪರಿಗಣಿಸುವುದು. ನೈಜವಾಗಿ ಅಳವಡಿಸಿರುವ ಒಟ್ಟು ಮೊತ್ತ ಮತ್ತು ಸರ್ಕಾರದ ಸಹಾಯಧನದ ವ್ಯತ್ಯಾಸವನ್ನು ರೈತರ ವಂತಿಕೆಯಾಗಿ ಪಾವತಿಸಲು ಸೂಚಿಸುವುದು.

| | | | |
|---|---|---|---|
| ಸಂಸ್ಥೆಯವರಿ0ದ ಪಡೆದ ಶಾಸನಬದ್ಧ ಬಿಲ್ಲುಗಳಲ್ಲಿ ಇರುವ ಮೊತ್ತ ಹಾಗೂ ಅದರ ಸಹಾಯಧನದ ಮೊತ್ತ | ಭಾರತ ಸರ್ಕಾರದ ಮಾರ್ಗಸೂಚಿಯಲ್ಲಿ ನಮೂದಿಸಿರುವ Bill of Quantities ಮೊತ್ತ ಹಾಗೂ ಅದರ ಸಹಾಯಧನ ಮೊತ್ತ | ಕೃಷಿ ಇಲಾಖೆಯ ಅಧಿಕಾರಿಗಳು ಕ್ಷೇತ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಇರುವ ನೈಜ ಉಪಕರಣಗಳ ಪ್ರಮಾಣದ ಮೊತ್ತ ಹಾಗೂ ಅದರ ಸಹಾಯಧನದ ಮೊತ್ತ | ರೈತರಿಗೆ ಪಾವತಿಸಬಹುದಾದ ಸಹಾಯಧನದ ಮೊತ್ತ (ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು) ಇದು ಭಾರತ ಸರ್ಕಾರದ Indicative cost ನ ಅನ್ವಯ ಶೇ.90ರ ಸಹಾಯಧನವನ್ನು ಮೀರುವಂತಿಲ್ಲ |

## ತುಂತುರು ನೀರಾವರಿ

- ತುಂತುರು ನೀರಾವರಿ ಘಟಕಕ್ಕೆ ಅರ್ಜಿ ಸಲ್ಲಿಸಿದ ರೈತರಿಗೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಸಹಾಯಕ ಕೃಷಿ ನಿರ್ದೇಶಕರು ರೈತರ ವಂತಿಕೆ ಪಾವತಿಸಲು ಮಂಜೂರಾತಿ ಪತ್ರ (Sanction letter) ನೀಡುವುದು. ಮಂಜೂರಾತಿ ಪತ್ರದ ನಮೂನೆಯನ್ನು *ಅನುಬಂಧ-**4*** ರಲ್ಲಿ ಲಗತ್ತಿಸಿದೆ.
- ರೈತರ ವಂತಿಕೆಯನ್ನು ರೈತರ ಬ್ಯಾಂಕ್ ಖಾತೆಯಿಂದ ಆರ್.ಟಿ.ಜಿ.ಎಸ್/ NEFT ಮೂಲಕವೇ ತಯಾರಕ ಸಂಸ್ಥೆಗೆ ಪಾವತಿಸಲು/ ವರ್ಗಾಯಿಸಲು ಕ್ರಮ ವಹಿಸುವುದು.
- ರೈತರ ವಂತಿಕೆ ಪಾವತಿಸಿದ ಬಗ್ಗೆ ಮಾಹಿತಿ ನೀಡಿದ ನಂತರ ರೈತರ ದೃಢೀಕರಣ ಪತ್ರದ ಆಧಾರದ ಮೇಲೆ ತಯಾರಕ ಸಂಸ್ಥೆ/ ದರಕರಾರು ಹೊಂದಿರುವ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ನೀಡುವುದು. ಕಾರ್ಯಾದೇಶದ (Work Order) ನಮೂನೆಯನ್ನು ***ಅನುಬಂಧ-5*** ರಲ್ಲಿ ಲಗತ್ತಿಸಿದೆ.
- ಕಾರ್ಯಾದೇಶ ನೀಡಿದ **15** ದಿನಗಳೊಳಗಾಗಿ ತಯಾರಕ ಸಂಸ್ಥೆಗಳು ತುಂತುರು ನೀರಾವರಿ ಘಟಕಗಳನ್ನು ಸರಬರಾಜು ಮಾಡುವುದು.(ಕಾರ್ಯಾದೇಶ ನೀಡಿದ **15** ದಿನಗಳೊಳಗಾಗಿ ಸರಬರಾಜು

ಮಾಡದಿದ್ದ ಸಂದರ್ಭದಲ್ಲಿ ಲಿಖಿತ ರೂಪದಲ್ಲಿ ಸಂಸ್ಥೆಗೆ ಹಾಗೂ ಕೇಂದ್ರ ಕಚೇರಿಗೆ ಮಾಹಿತಿ ನೀಡುವುದು)

- ತುಂತುರು ನೀರಾವರಿ ಘಟಕಗಳನ್ನು ವಿತರಿಸುವಾಗ ಅಥವಾ ಅಳವಡಿಸಿದ ಕ್ಷೇತ್ರದಲ್ಲಿ **ಕೆ. ಕಿಸಾನ್ ಮೊಬೈಲ್ ಆಪ್ ನಲ್ಲಿ ಛಾ**ಯಾಚಿತ್ರವನ್ನು ಅಪ್ ಲೋಡ್ ಮಾಡುವುದು. ಇದೆ ಸಂದರ್ಭದಲ್ಲಿ Geo-tagged ಫೋಟೊಗಳನ್ನು ಕೇಂದ್ರ ಸರ್ಕಾರದ ಭುವನ್ ಸಾ**ಫ್ಟ್‌ವೇ**ರ್‌ನ**,** PDMC (Per Drop More Crop) ಪೋರ್ಟಲ್‌ನಲ್ಲಿ ಸಹ ತಪ್ಪದೇ ಅಪ್‌ಲೋಡ್ ಮಾಡುವುದು.
- ಕೇಂದ್ರ ಮತ್ತು ರಾಜ್ಯದ ಪಾಲಿನ ಒಟ್ಟು ಸಹಾಯಧನವನ್ನು ಒಂದೇ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆ ಮಾಡುವುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನಕ್ಕೆ ಪ್ರತ್ಯೇಕ ಬಿಲ್ಲುಗಳನ್ನು ಪಡೆಯದೇ**,** ಒಂದೇ ಬಿಲ್ಲನ್ನು ಪಡೆಯುವುದು. ಆದರೆ**,** ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಿದಲ್ಲಿ ಮಾತ್ರ ಸಂಸ್ಥೆಗಳಿಂದ GOI ಮತ್ತು GOK share ಗೆ ಪ್ರತ್ಯೇಕವಾದ ನಗದು/ ಕ್ರೆಡಿಟ್ ಬಿಲ್ಲುಗಳನ್ನು ಒಂದೇ ಬಿಲ್ಲಿನ ಆರು ಪ್ರತಿಗಳನ್ನು ಮೂಲ ಸಹಿಯೊಂದಿಗೆ ಪಡೆಯುವುದು. ಬಿಲ್ಲುಗಳಲ್ಲಿ ಕಡ್ಡಾಯವಾಗಿ GST ನಂಬರ್ ಹಾಗೂ ಈ ಕುರಿತ ತೆರಿಗೆ ಬಾಬ್ತನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
- ರೈತ ಸಂಪರ್ಕ ಕೇಂದ್ರುದ ಕೃಷಿ ಅಧಿಕಾರಿಯು ರೈತರ ವಿವರಗಳನ್ನು ಸ್ಟಾಕ್ ರಿಜಿಸ್ಟರ್‌ನಲ್ಲಿ ನಮೂದಿಸುವುದು ಹಾಗೂ ಘಟಕದ ಅಳವಡಿಕೆ ಬಗ್ಗೆ ರೈತರಿಂದ ಪಡೆದ ತೃಪ್ತಿಕರ ಪ್ರಮಾಣ ಪತ್ರವನ್ನು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ಹನಿ ನೀರಾವರಿ ಮತ್ತು ತುಂತುರು ನೀರಾವರಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದಿಂದ ನೀಡಿರುವ ಸೂಚ್ಯಂಕ ದರಗಳನ್ನು (Indicative cost) ***ಅನುಬಂಧ-1*** ರಲ್ಲಿ ಹಾಗೂ ಇದರ ಅನ್ವಯ ***ತುಂತುರು ನೀರಾವರಿ ಘಟಕಗಳಿಗೆ ನೀಡಬೇಕಾಗಿರುವ ಸಹಾಯಧನವನ್ನು ಅನುಬಂಧ-3ರಲ್ಲಿ*** ನೀಡಲಾಗಿದ್ದು**,** ಅದರನ್ವಯವೇ ಬಿಲ್ಲುಗಳನ್ನು ನೀಡಲಾಗಿದೆಯೇ ಎಂದು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸುವುದು.

14. ರೈತರು ತಮ್ಮ ವಂತಿಕೆಯನ್ನು ಮಾತ್ರ ಪಾವತಿಸಿದಲ್ಲಿ**,** ಸರ್ಕಾರದ ಸಹಾಯಧನವನ್ನು ತಯಾರಕ ಸಂಸ್ಥೆಗೆ ವರ್ಗಾಯಿಸಲು ರೈತರು ನೀಡಿದ Authorisation letter ಆಧಾರದ ಮೇಲೆ ಸಹಾಯಧನವನ್ನು ತಯಾರಕ ಸಂಸ್ಥೆಗೆ ಅಥವಾ ರೈತರು ಪೂರ್ಣ ಮೊತ್ತ ಪಾವತಿಸಿದ್ದಲ್ಲಿ ರೈತರ ಬ್ಯಾಂಕ್ ಖಾತೆಗೆ ಅಥವಾ ಲಘು ನೀರಾವರಿ ಆಳವಡಿಸಲು ಪಡೆದ ಸಾಲದ ಖಾತೆಗೆ ಸಹಾಯಧನವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು.

15. ತಯಾರಕ ಸಂಸ್ಥೆಗಳು ಇನ್‌ವಾಯ್ಸ್/ ಕ್ರೆಡಿಟ್ ಬಿಲ್ಲುಗಳಲ್ಲಿ ಇಲಾಖೆಯ ಕಾರ್ಯಾದೇಶದ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸತಕ್ಕದ್ದು.

**ಪ್ರಮಾಣ ಪತ್ರ**

ನಾನು ------------------------------ದಿನಾಂಕ:----------------------ರ0ದು -------------------------ತಾಲ್ಲೂಕಿನ ------------------------ಹೋಬಳಿಯ-----------------------------ಗ್ರಾಮದ ----------------------ರೈತರ ಕ್ಷೇತ್ರದಲ್ಲಿ ಅಳವಡಿಸಿದ ಹನಿ/ತುಂತುರು ನೀರಾವರಿ ಗುಣಾತ್ಮಕ ಅಂಶಗಳಾದ BIS ಗುರುತುಗಳನ್ನು ಸಲಕರಣೆಗಳ ಮೇಲೆ ಪರಿಶೀಲಿಸಿರುತ್ತೇನೆ. ಬಿಲ್ಲಿನಲ್ಲಿ ನಮೂದಿಸಿದ ಸಾಮಗ್ರಿಗಳು ಹಾಗೂ ಪ್ರಮಾಣ ಮತ್ತು ಸರಬರಾಜು ಹಾಗೂ ಅಳವಡಿಸಿದ ಸಾಮಗ್ರಿ ಹಾಗೂ ಪ್ರಮಾಣ ತಾಳೆಯಾಗುತ್ತದೆ. ಸದರಿ ಸಲಕರಣೆಗಳ ಪ್ರಮಾಣ ಮತ್ತು ಗುಣಮಟ್ಟಗಳು ಸದರಿ ಕ್ಷೇತ್ರದಲ್ಲಿ ಸೂಕ್ಷ್ಮ ನೀರಾವರಿ ಅಳವಡಿಸಲು ತಯಾರಿಸಿದ ವಿನ್ಯಾಸ ಮತ್ತು ಅಂದಾಜು ಪಟ್ಟಿಗೆ ಹೊಂದಾಣಿಕೆಯಾಗುತ್ತದೆ ಎಂದು ದೃಢೀಕರಿಸುತ್ತೇನೆ.

| | |
|---|---|
| ಸಹಾಯಕ ಕೃಷಿ ಅಧಿಕಾರಿ, | ಕೃಷಿ ಅಧಿಕಾರಿ, |
| ________ ರೈತ ಸಂಪರ್ಕ ಕೇಂದ್ರ | ________ರೈತ ಸಂಪರ್ಕ ಕೇಂದ್ರ |

16. ಸಂಸ್ಥೆಗಳಿಗೆ ಸಹಾಯಧನ ಪಾವತಿ ಮಾಡುವಾಗ, ಸಂಸ್ಥೆಗಳ ಬಿಲ್ಲನ್ನು ಅಧಿಕೃತವಾಗಿ ಸಲ್ಲಿಸಿದ ದಿನಾಂಕದ ಆಧಾರದ ಮೇಲೆ ಜ್ಯೇಷ್ಠತೆಯನ್ನು (Seniority) ನಿರ್ವಹಿಸುವುದು ಹಾಗೂ ಸಂಸ್ಥೆಗಳಿಗೆ ಸ್ವೀಕೃತಿಯನ್ನು ನೀಡುವುದು. ಜ್ಯೇಷ್ಠತೆ ಅನ್ವಯವೇ ಸಂಸ್ಥೆಗಳಿಗೆ ಅನುದಾನ ಪಾವತಿಗೆ ಡಿ.ಸಿ.ಬಿಲ್ಲುಗಳನ್ನು ತಯಾರಿಸುವುದು.
17. ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಹಾಗೂ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಸೂಕ್ಷ್ಮ ನೀರಾವರಿ ವಿತರಣೆಯ ಛಾಯಾಚಿತ್ರಗಳನ್ನು ವರ್ಷಾವಾರು ಮತ್ತು ಘಟಕವಾರು ವಿಂಗಡಿಸಿ ಆಲ್ಬಂ (album) ಮಾಡಿ ಇಟ್ಟುಕೊಳ್ಳತಕ್ಕದ್ದು.
18. ಪ್ರತಿ ವರ್ಷ ಇಲಾಖಾ ಅಧಿಕಾರಿಗಳು, ಅನುದಾನ ಬಿಡುಗಡೆಗೆ ಕಾಯದೇ, ಜಿಲ್ಲಾವಾರು ನಿಗದಿಪಡಿಸಿರುವ **ವಾರ್ಷಿಕ ಕಾರ್ಯಕ್ರಮಕ್ಕೆ ಶೇ.50 ರಷ್ಟು** ಫಲಾನುಭವಿಗಳನ್ನು ಆಯ್ಕೆ ಮಾಡಿ, ಕಾರ್ಯಾದೇಶ ನೀಡುವುದು ಹಾಗೂ ಅನುದಾನ ಬಿಡುಗಡೆಯಾದ ನಂತರ ನಿಯಮಾನುಸಾರ ಸಹಾಯಧನವನ್ನು ಪಾವತಿಸಲು ಕ್ರಮ ಕೈಗೊಳ್ಳುವುದು. ನಿಗದಿ ಪಡಿಸಿದ ವಾರ್ಷಿಕ ಕಾರ್ಯಕ್ರಮಕ್ಕಿಂತ ಹೆಚ್ಚಾಗಿ ಕೇಂದ್ರ ಕಚೇರಿಯ ಪೂರ್ವಾನುಮತಿ ಇಲ್ಲದೆ ಅನುಷ್ಠಾನ ಮಾಡಿದಲ್ಲಿ ಸಂಬAಧಪಟ್ಟ ಅನುಷ್ಠಾನಾಧಿಕಾರಿಯು ಪೂರ್ಣ ಜವಾಬ್ದಾರರಾಗುತ್ತಾರೆ.
19. ಹನಿ/ ತುಂತುರು ನೀರಾವರಿ ಘಟಕಗಳೊಂದಿಗೆ ಉಪಯೋಗಿಸುವ ವಿಧಾನದ (Users manual) ವಿವರ ಇರುವ ಕೈಪಿಡಿಯನ್ನು ಒದಗಿಸಲು ಸರಬರಾಜುದಾರರಿಗೆ ಸೂಚಿಸುವುದು.

20. ಸೂಕ್ಷ್ಮ ನೀರಾವರಿ ಘಟಕಗಳ ಪ್ರಾತ್ಯಕ್ಷಿಕೆಯನ್ನು ತಪ್ಪದೇ ಏರ್ಪಡಿಸಲು ಸರಬರಾಜುದಾರರಿಗೆ ಸೂಚಿಸುವುದು.

21. ಈ ಯೋಜನೆಯಡಿ ಪ್ರತಿ ಮಾಹೆಯ ಅಂತ್ಯಕ್ಕೆ ವಿವಿಧ ಯೋಜನೆ/ಲೆಕ್ಕ ಶೀರ್ಷಿಕೆಗಳಡಿ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪ್ರತ್ಯೇಕವಾಗಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು ಹಾಗೂ ಸದರಿ ಪ್ರಗತಿಯನ್ನು ಇಲಾಖೆಯ DSS ಪೋರ್ಟಲ್ ನಲ್ಲಿ ಮತ್ತು ವಿಭಾಗದಿಂದ ನೀಡುವ Google Spread Sheet ನಲ್ಲಿ ಅಪ್ಲೋಡ್ ಮಾಡುವುದು.

22. ವರ್ಷಾಂತ್ಯಕ್ಕೆ ಪ್ರಗತಿ ವರದಿಗಳೊಂದಿಗೆ ತಾಳೆಯಾಗುವ ಉಪಯೋಗಿತ ಪತ್ರಗಳನ್ನು ಸಲ್ಲಿಸುವುದು.

23. ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ವಿತರಿಸಿದ ಎಲ್ಲಾ ಘಟಕಗಳನ್ನು ಸಂಬ0ಧಪಟ್ಟ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ **ಶೇ.100 ರಷ್ಟು ಪರಿಶೀಲಿಸಿ** ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಮತ್ತು ವರದಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

24. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ವಿತರಿಸಿದ ಎಲ್ಲಾ ಘಟಕಗಳನ್ನು **ಶೇ. 25 ರಷ್ಟು ಪರಿಶೀಲಿಸಿ** ರೈತರ ತೃಪ್ತಿಕರ ಪ್ರಮಾಣ ಪತ್ರವನ್ನು ಮತ್ತು ವರದಿಯನ್ನು ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.

25. ಜಿಲ್ಲೆಯ ಉಪ ಕೃಷಿ ನಿರ್ದೇಶಕರು ತಾಲ್ಲೂಕುಗಳಲ್ಲಿ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ವಿತರಿಸಿದ ಘಟಕಗಳನ್ನು **ಶೇ. 7.5 ರಷ್ಟು** ಪರಿಶೀಲಿಸುವುದು.

26. ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ತಾಲ್ಲೂಕುಗಳಲ್ಲಿ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ವಿತರಿಸಿದ ಘಟಕಗಳನ್ನು **ಶೇ. 3** ರಷ್ಟು ಪರಿಶೀಲಿಸುವುದು.

27. ರೈತರು ಕೃಷಿ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಇಲಾಖೆಯ ಪೂರ್ವಾನುಮತಿ ಇಲ್ಲದೆ ಘಟಕಗಳನ್ನು ಅಳವಡಿಸಿದ್ದಲ್ಲಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲ. ಈ ಬಗ್ಗೆ ರೈತರು, ರೈತ ಮುಖಂಡರು ಮತ್ತು ಚುನಾಯಿತ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡುವುದರೊಂದಿಗೆ ಸಮೂಹ ಮಾಧ್ಯಮದ ಮೂಲಕ ಸಹ ವ್ಯಾಪಕ ಪ್ರಚಾರ ನೀಡುವುದು.

- ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಇಲಾಖಾ ನೋಂದಣಾ ಸುತ್ತೋಲೆಗಳನ್ವಯ ವಿತರಿಸುವುದು.
- ಪ್ರತಿ ರೈತನಿಗೆ 5.00 ಹೆಕ್ಟೇರ್ ಪ್ರದೇಶದವರೆಗೆ ಸಹಾಯಧನ ನೀಡಬಹುದು. ಮೊದಲ ಎರಡು ಹೆಕ್ಟೇರ್ ಪ್ರದೇಶದವರೆಗೆ ಶೇ.90ರಷ್ಟು ಸಹಾಯಧನವನ್ನು

ಹಾಗೂ 2.00 ಹೆಕ್ಟೇರ್‌ಗಿಂತ ಮೇಲ್ಪಟ್ಟು 5.00 ಹೆಕ್ಟೇರ್ ಪ್ರದೇಶದವರೆಗೆ ಎಲ್ಲಾ ವರ್ಗದ ರೈತರಿಗೆ ಶೇ.45ರಷ್ಟು ಸಹಾಯಧನವನ್ನು ನೀಡುವುದು.

- ನೋಂದಾಯಿತ ಅಧಿಕೃತ ಸಂಘ-ಸ0ಸ್ಥೆಗಳಿಗೂ ಸಹ ಈ ಕಾರ್ಯಕ್ರಮದಡಿ ಸೌಲಭ್ಯವನ್ನು ನೀಡಬಹುದಾಗಿದೆ.

- ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ನೀಡುವಾಗ ಶೇ.24.1 ಸಹಾಯಧನವನ್ನು ಪರಿಶಿಷ್ಠ ಜಾತಿ, ಶೇ.17.15 ಪರಿಶಿಷ್ಟ ವರ್ಗಗಳ ರೈತರಿಗೆ ಹಾಗೂ ಶೇ.6.95 ಸರ್ಕಾರದ ನಿಯಮಾನುಸಾರ ಹಿಂದುಳಿದ ವರ್ಗದ ರೈತರಿಗೆ ಹಾಗೂ ಅಲ್ಪಸಂಖ್ಯಾತ ರೈತರಿಗೆ ವಿತರಿಸತಕ್ಕದ್ದು.

- ಸದರಿ ಯೋಜನೆಯಡಿ ರೈತ ಮಹಿಳೆಯರಿಗೆ ಶೇ.33 ರಷ್ಟು ಮೀಸಲಿಡಬೇಕು. ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಆದ್ಯತೆ ನೀಡುವುದು.

- ಸರ್ಕಾರದ ಆದೇಶಗಳು / ನಿರ್ದೇಶನಗಳನ್ವಯ ಸದರಿ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಕಾಲ ಕಾಲಕ್ಕೆ ತಿಳಿಸಲಾಗುವುದು.

## ಅನುಬಂಧ-1

## ಭಾರತ ಸರ್ಕಾರದ ಸೂಚ್ಯಂಕ ದರಗಳು (GOI Indicative Cost)(in Rs.)

### ಹನಿ ನೀರಾವರಿ

| Area in Ha. | Spacing | | |
|---|---|---|---|
| | 2.5 m x0.6m | 1.8m x 0.6m | 1.2mx0.6m (or lower spacing) |
| 0.4 | 30810 | 37845 | 50388 |
| 1.0 | 63145 | 80599 | 112237 |
| 2.0 | 116042 | 152551 | 213400 |
| 3.0 | 177345 | 229637 | 323019 |
| 4.0 | 246276 | 312784 | 435788 |
| 5.0 | 302318 | 389511 | 545181 |

### ತುಂತುರು ನೀರಾವರಿ

| Area | Pipe diameter in mm | | |
|---|---|---|---|
| | 63mm | 75mm | 90mm |
| Upto 0.4ha | 7817 | NA | NA |
| More than 0.40ha to 1.00ha | 19542 | 21901 | NA |
| More than 1.00ha to 2.00ha | 28213 | 31372 | NA |
| More than 2.00ha to 3.00ha | NA | NA | 42345 |
| More than 3.00ha to 4.00ha | NA | NA | 53404 |
| More than 4.00ha to 5.00ha | NA | NA | 60459 |

## ಅನುಬಂಧ-2

## ಹನಿ ನೀರಾವರಿ ಘಟಕಗಳಿಗೆ ಭಾರತ ಸರ್ಕಾರದ ಮಾರ್ಗಸೂಚಿಯ ಸೂಚ್ಯಂಕ ದರಗಳ ಅನ್ವಯ ನೀಡಬೇಕಾಗಿರುವ ಸಹಾಯಧನ (ರೂ.ಗಳಲ್ಲಿ)

| **Subsidy @ 90% from 0.2 to 2.00 ha.** | | | |
|---|---|---|---|
| ವಿಸ್ತೀರ್ಣ<br>Area in Ha. | 2.5 m x0.6m | 1.8m x 0.6m | 1.2mx0.6m<br>(or lower spacing) |
| 0.20 | 11,732 | 14243 | 18719 |
| 0.30 | 17,598 | 21364 | 28078 |
| 0.40 | **23,464** | **28485** | **37437** |
| 0.50 | 29,025 | 35827 | 48033 |
| 0.60 | 34,586 | 43170 | 58629 |
| 0.70 | 40,147 | 50512 | 69225 |
| 0.80 | 45,709 | 57854 | 79821 |
| 0.90 | 51,270 | 65197 | 90417 |
| **1.00** | **56,831** | **72539** | **101013** |
| 1.10 | 61,592 | 79015 | 110118 |
| 1.20 | 66,352 | 85490 | 119222 |
| 1.30 | 71,113 | 91966 | 128327 |
| 1.40 | 75,874 | 98442 | 137432 |
| 1.50 | 80,634 | 104917 | 146537 |
| 1.60 | 85,395 | 111393 | 155641 |
| 1.70 | 90,156 | 117869 | 164746 |
| 1.80 | 94,917 | 124345 | 173851 |
| 1.90 | 99,677 | 130820 | 182955 |
| **2.00** | **1,04,438** | **137296** | **192060** |

| Subsidy @ 45% from 2.10 to 5.00 ha. | | | |
|---|---|---|---|
| Area in Ha. | 2.5 m x0.6m | 1.8m x 0.6m | 1.2mx0.6m (or lower spacing) |
| 2.10 | 54978 | 72117 | 100963 |
| 2.20 | 57736 | 75586 | 105896 |
| 2.30 | 60495 | 79055 | 110829 |
| 2.40 | 63253 | 82524 | 115762 |
| 2.50 | 66012 | 85992 | 120695 |
| 2.60 | 68771 | 89461 | 125627 |
| 2.70 | 71529 | 92930 | 130560 |
| 2.80 | 74288 | 96399 | 135493 |
| 2.90 | 77046 | 99868 | 140426 |
| **3.00** | **79805** | **103337** | **145359** |
| 3.10 | 82907 | 107079 | 150434 |
| 3.20 | 86009 | 110820 | 155508 |
| 3.30 | 89111 | 114562 | 160583 |
| 3.40 | 92213 | 118303 | 165657 |
| 3.50 | 95315 | 122045 | 170732 |
| 3.60 | 98416 | 125787 | 175807 |
| 3.70 | 101518 | 129528 | 180881 |
| 3.80 | 104620 | 133270 | 185956 |
| 3.90 | 107722 | 137011 | 191030 |
| **4.00** | **110824** | **140753** | **196105** |
| 4.10 | 113346 | 144206 | 201028 |
| 4.20 | 115868 | 147658 | 205950 |
| 4.30 | 118390 | 151111 | 210873 |
| 4.40 | 120912 | 154564 | 215795 |
| 4.50 | 123434 | 158017 | 220718 |
| 4.60 | 125955 | 161469 | 225641 |
| 4.70 | 128477 | 164922 | 230563 |
| 4.80 | 130999 | 168375 | 235486 |
| 4.90 | 133521 | 171827 | 240408 |
| **5.00** | **136043** | **175280** | **245331** |

## ಅನುಬಂಧ-3

## ತುಂತುರು ನೀರಾವರಿ ಘಟಕಗಳಿಗೆ ಭಾರತ ಸರ್ಕಾರದ ಮಾರ್ಗಸೂಚಿಯ ಸೂಚ್ಯಂಕ ದರಗಳ ಅಥವ GGRC ದರಗಳಲ್ಲಿ ಕಡಿಮೆಯಿರುವ ದರಕ್ಕನುಗುಣವಾಗಿ ನೀಡಬೇಕಾಗಿರುವ ಸಹಾಯಧನ

| Area | Pipe diameter in mm | | |
|---|---|---|---|
| | 63mm | 75mm | 90mm |
| Upto 0.4ha | 7035 | NA | NA |
| More than 0.40ha to 1.00ha | 17392 | 18632 | NA |
| More than 1.00ha to 2.00ha | 25025 | 26690 | NA |
| More than 2.00ha to 3.00ha | NA | NA | 16096 |
| More than 3.00ha to 4.00ha | NA | NA | 20304 |
| More than 4.00ha to 5.00ha | NA | NA | 23171 |

**ಅನುಬಂಧ-4**

**ಕರ್ನಾಟಕ ಸರ್ಕಾರ**

**ಕೃಷಿ ಇಲಾಖೆ**

**ಪತ್ರ ಸಂಖ್ಯೆ:ಸಕೃನಿ/** **ಸಹಾಯಕ ಕೃಷಿ ನಿರ್ದೇಶಕರ ಕಚೇರಿ**

**________ತಾಲ್ಲೂಕು**

**ಮಂಜೂರಾತಿ ಪತ್ರ (Sanction Letter) (MI)**

________ನೇ ಸಾಲಿನಲ್ಲಿ ____________ಯೋಜನೆಯಡಿ ಶ್ರೀ/ಶ್ರೀಮತಿ _________________________ಬಿನ್/ಕೋಂ__________, ____________ ಗ್ರಾಮ, ____________ ಹೋಬಳಿ__________ ತಾಲ್ಲೂಕು, ________ ಜಿಲ್ಲೆ(ನೋಂದಣಿ ಸಂಖ್ಯೆ: __________, ಮೊಬೈಲ್ ಸಂಖ್ಯೆ:___________) ಆದ ನೀವು _______ ಸರ್ವೆ ನಂಬರ್ ಅಡಿ ಮೆ: ___________________________ಸಂಸ್ಥೆಯ ಮೂಲಕ ____ಹೆಕ್ಟೇರ್ ಪ್ರದೇಶದಲ್ಲಿ ಹನಿನೀರಾವರಿ ಘಟಕ (Spacing ________ಮೀ)/ ತುಂತುರು ನೀರಾವರಿ ಘಟಕ (೬೩/೭೫/೯೦mm)ವನ್ನು ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಸಹಾಯಧನದಡಿ ಪಡೆಯಲು ಅರ್ಜಿ ಸಲ್ಲಿಸಿರುತ್ತೀರಿ. ಘಟಕದ ಅಂದಾಜು ಮೊತ್ತ ರೂ.__________ಗಳಾಗಿರುತ್ತದೆ.

ಸದರಿ ಘಟಕಕ್ಕೆ ಸಂಬ0ಧಿಸಿದ0ತೆ, ರೂ.________ಗಳ ರೈತರ ವಂತಿಕೆಯನ್ನು __ ದಿನಗಳೊಳಗಾಗಿ ಮೆ: ____________________________ಸಂಸ್ಥೆಯ __________ಬ್ಯಾಂಕ್, ಖಾತೆ ಸಂಖ್ಯೆ:___________, IFSC Code_________ ಗೆ ಪಾವತಿಸಲು ತಿಳಿಸಿದೆ. ಪಾವತಿಸಿರುವ ಬಗ್ಗೆ ವಿವರಗಳನ್ನು (ಬ್ಯಾಂಕ್ ಚಲನ್ ಸಂಖ್ಯೆ / NEFT / ಆರ್.ಟಿ.ಜಿ.ಎಸ್ ಸಂಖ್ಯೆ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ___________ತಾಲ್ಲೂಕು ಇವರಿಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

ಸಹಾಯಕ ಕೃಷಿ ನಿರ್ದೇಶಕರು

__________ ತಾಲ್ಲೂಕು

ಪ್ರತಿಯನ್ನು ಮೆ: ____________________________ಸಂಸ್ಥೆಗೆ ಮಾಹಿತಿಗಾಗಿ ಕಳುಹಿಸಿದೆ.

**ಅನುಬಂಧ-5**

**ಕರ್ನಾಟಕ ಸರ್ಕಾರ**

**ಕೃಷಿ ಇಲಾಖೆ**

**ಪತ್ರ ಸಂಖ್ಯೆ: ಸಕೃನಿ/ ಸಹಾಯಕ ಕೃಷಿ ನಿರ್ದೇಶಕರ ಕಚೇರಿ**

**________ತಾಲ್ಲೂಕು**

**ಇವರಿಗೆ :**

**ದಿನಾಂಕ:**

**ಕಾರ್ಯಾದೇಶ (Work Order) (MI)**

________ನೇ ಸಾಲಿನಲ್ಲಿ ____________ಯೋಜನೆಯಡಿ ಶ್ರೀ/ಶ್ರೀಮತಿ _________________________ಬಿನ್/ಕೋಂ__________, ____________ ಗ್ರಾಮ, ____________ಹೋಬಳಿ __________ತಾಲ್ಲೂಕು________ ಜಿಲ್ಲೆ (ನೋಂದಣಿ ಸಂಖ್ಯೆ: ___________, ಮೊಬೈಲ್ ಸಂಖ್ಯೆ:___________) ಆದ ಇವರು _______ ಸರ್ವೆ ನಂಬರ್ ಅಡಿ ಮೆ: ___________________________ಸಂಸ್ಥೆಯ ಮೂಲಕ ____ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ಘಟಕ(Spacing _________ಮೀ)/ ತುಂತುರು ನೀರಾವರಿ ಘಟಕ (63/75/90mm) ವನ್ನು ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ಒಟ್ಟು ರೂ._____ಗಳ ಮೊತ್ತದ ಅಂದಾಜು ನೀಡಿದ್ದು, ಇದರಲ್ಲಿ ಸರ್ಕಾರದ ಸಹಾಯಧನ ರೂ. _____ಗಳು ಆಗಿರುತ್ತದೆ. ಈ ಸಂಬ0ಧ ರೈತರು ತಮ್ಮ ವಂತಿಕೆ ರೂ._______ಗಳನ್ನು ದಿನಾಂಕ:__________ರ0ದು ಪಾವತಿಸಿದ್ದು, ಇವರ ಕ್ಷೇತ್ರದಲ್ಲಿ ಸದರಿ ಘಟಕದ ಅನುಷ್ಠಾನ ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ.

ಈ ಕಾರ್ಯಾದೇಶ ಪಡೆದ ನಂತರ ಗರಿಷ್ಠ 15 ದಿನಗಳ ಅವಧಿಯೊಳಗೆ ಕಾರ್ಯ ಪೂರ್ಣಗೊಳಿಸಿ ಸಹಾಯಧನದ ಬಿಲ್ಲುಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ___________ತಾಲ್ಲೂಕು ಇವರಿಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

ಸಹಾಯಕ ಕೃಷಿ ನಿರ್ದೇಶಕರು

_________ತಾಲ್ಲೂಕು

ಪ್ರತಿಯನ್ನು ಶ್ರೀ/ಶ್ರೀಮತಿ _________________________ ಬಿನ್/ಕೋಂ__________, ____________ಗ್ರಾಮ, ___________ಹೋಬಳಿ __________ತಾಲ್ಲೂಕು________ಜಿಲ್ಲೆ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

## ಅನುಬಂಧ-6

## Gujarat Green Revolution Company Limited
## P. O. Fertilizernagar - 391 750, Dist: Vadodara.

### Price List w.e.f. 21/09/2018

| Sr. No. | | Name of the System Components | Raw material used | ISI No/ Brand | Unit | Price |
|---|---|---|---|---|---|---|
| **1** | | **Non Return Valve, Low Friction** | | | | |
| | a | 1.5 " | GM | 778 | No | 661.04 |
| | b | 2 " | GM | 778 | No | 1000.59 |
| | c | 2.5 " | GM | 778 | No | 1340.13 |
| | d | 3 " | GM | 778 | No | 1679.68 |
| | e | 4 " | CI | 14846 | No | 2358.75 |
| | f | 5 " | CI | 14846 | No | 3037.83 |
| | g | 6 " | CI | 14846 | No | 3716.92 |
| **2** | | **Sand Filter with back wash assembly** | | | | |
| | a | 10 m3/hr x 1.5"/2/2.5" | MS | 14606 | No | 6065.90 |
| | b | 20 m3/hr x 2 "/2.5/3" | MS | 14606 | No | 7937.60 |
| | c | 25 m3/hr x 2 "/2.5/3" | MS | 14606 | No | 8872.63 |
| | d | 30 m3/hr x 2.5 "/3"/4 | MS | 14606 | No | 10414.43 |
| | e | 40 m3/hr x 2.5 "/3"/4' | MS | 14606 | No | 11252.53 |
| | f | 50 m3/hr x 3 "/4" | MS | 14606 | No | 12238.18 |
| **3** | | **Disc Filter** | | | | |
| | a | 10 m3/hr x 1.5"/2/2.5" | Metal / Plastic | 12785 | No | 3365.70 |
| | b | 20 m3/hr x 2 "/2.5/3" | Metal / Plastic | 12785 | No | 3947.51 |
| | c | 25 m3/hr x 2 "/2.5/3" | Metal / Plastic | 12785 | No | 4233.80 |
| | d | 40 m3/hr x 2.5 "/3"/4' | Metal / Plastic | 12785 | No | 5032.46 |
| | e | 50 m3/hr x 3 "/4" | Metal / Plastic | 12785 | No | 5564.90 |
| **4** | | **Screen Filter/Semi auto clean SF** | | | | |
| | a | 10 m3/hr x 1.5"/2/2.5" | Metal / Plastic | 12785 | No | 1271.07 |

| Sr. No. | | Name of the System Components | Raw material used | ISI No/ Brand | Unit | Price |
|---|---|---|---|---|---|---|
| | b | 20 m3/hr x 2 "/2.5/3" | Metal / Plastic | 12785 | No | 1499.65 |
| | c | 25 m3/hr x 2 "/2.5/3" | Metal / Plastic | 12785 | No | 1507.23 |
| | d | 30 m3/hr x 2.5 "/3"/4 | Metal / Plastic | 12785 | No | 1447.33 |
| | e | 40 m3/hr x 2.5 "/3"/4' | Metal / Plastic | 12785 | No | 1716.77 |
| | g | 50 m3/hr x 3 "/4" | Metal / Plastic | 12785 | No | 2055.08 |
| **5** | | **Hydro-Cyclone Filter** | | | | |
| | a | 20 m3/hr x 2 "/2.5/3" | MS | 14743 | No | 2441.00 |
| | b | 25 m3/hr x 2 "/2.5/3" | MS | 14743 | No | 2663.34 |
| | c | 30 m3/hr x 2.5 "/3"/4 | MS | 14743 | No | 2792.63 |
| | d | 40 m3/hr x 2.5 "/3"/4' | MS | 14743 | No | 3020.35 |
| | e | 50 m3/hr x 3 "/4" | MS | 14743 | No | 3165.06 |
| **6** | | **Pressure Gauge 2" (Glycerine)** | Metal | 3624 | No | 177.62 |
| **7** | | **By Pass Assembly** | | | | |
| | a | 1.5 " x 1.5 " | MS/GM/PVC | As Specified | No | 639.06 |
| | b | 2 " x 1.5 " | MS/GM/PVC | As Specified | No | 666.81 |
| | c | 2.5" x 2 " | MS/GM/PVC | As Specified | No | 677.91 |
| | d | 3 " x 1.5 " | MS/GM/PVC | As Specified | No | 694.53 |
| | e | 3 " x 2 " | MS/GM/PVC | As Specified | No | 805.66 |
| **8** | | **By Pass Tee (Flange End)** | | | | |
| | a | 2" | GI / MS | As Specified | No | 417.25 |
| | b | 2.5" | GI / MS | As Specified | No | 423.60 |
| | c | 3" | GI / MS | As Specified | No | 692.26 |

| Sr. No. | | Name of the System Components | Raw material used | ISI No/ Brand | Unit | Price |
|---|---|---|---|---|---|---|
| | d | 4" | GI / MS | As Specified | No | 869.26 |
| | e | 5" | GI / MS | As Specified | No | 1256.49 |
| **9** | | **By Pass Tee (Flange End) – PP** | | | | |
| | a | 2" | PP / PP30%GF | As Specified | No | 109.40 |
| | b | 2.5" | PP / PP30%GF | As Specified | No | 409.53 |
| | c | 3" | PP / PP30%GF | As Specified | No | 476.20 |
| | d | 4" | PP / PP30%GF | As Specified | No | 483.45 |
| **10** | | **Water Meter** | | | | |
| | a | 1.5 " | Metal | 4064 | No | 4017.98 |
| | b | 2 " | Metal | 4064 | No | 4216.97 |
| | c | 2.5 " | Metal | 4064 | No | 4415.96 |
| | d | 3 " | Metal | 4064 | No | 4614.96 |
| ಬಿ - 14 | ಜಿಲ್ಲಾಮತ್ತುತಾಲ್ಲೂಕುಮಟ್ಟದಲ್ಲಿಆಡಳಿತ/ಬಂಡವಾಳವೆಚ್ಚಗಳು, ಬಾಡಿಗೆವಾಹನ, ಪ್ರವಾಸಭತ್ಯೆಗಳುಇತ್ಯಾದಿ. | 41 | 7.25 | 62 | 8.60 | 55 | 8.15 | 55 | 8.15 | 213 | 32.15 |
| ಬಿ - 15 | ಕ್ಷೇತ್ರಪಾಠಶಾಲೆಗಳು | 15 | 4.41 | 24 | 7.06 | 21 | 6.18 | 21 | 6.18 | 81 | 23.83 |
| ಡಿ-1 | ಜಿಲ್ಲಾಮಟ್ಟದತರಬೇತಿಕೇಂದ್ರಗಳಿಗೆನಿರ್ವಹಣಾವೆಚ್ಚದಬೆಂಬಲ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಡಿ-2 | ಸಮುದಾಯಬಾನುಲಿಕೇಂದ್ರಅನುಷ್ಠಾನ | - | - | - | - | - | - | - | - | 0 | 0 |
| ಡಿ-3 | ರೈತಮಿತ್ರಚಟುವಟಿಕೆಅನುಷ್ಠಾನ | - | - | - | - | - | - | - | - | 0 | 0 |
| ಇ-1 | ರಾಜ್ಯಮಟ್ಟದಅನ್ವೇಷಣಾಚಟುವಟಿಕೆಗಳು | - | - | - | - | - | - | - | - | 0 | 0 |
| ಇ-2 | ಜಿಲ್ಲಾಮಟ್ಟದಅನ್ವೇಷಣಾಚಟುವಟಿಕೆಗಳು | 5 | 1.25 | 8 | 2.00 | 7 | 1.75 | 7 | 1.75 | 27 | 6.75 |
| ಎಫ್. | ನವೀನಮಾದರಿಯವಿದ್ಯನ್ಮಾನಉಪಕರಣಗಳು (ಕಡ್ಡಾಯ ಚಟುವಟಿಕೆ) (ಪ್ರದರ್ಶನ ಹಲಗೆಗಳು, ಪಿಕೊ ಪ್ರೊಜೆಕ್ಟರ್, ಟ್ಯಾಬ್ಸ್, | 7 | 2.75 | 10 | 3.50 | 9 | 3.25 | *9* | 3.25 | 35 | 12.75 |

| ಕ್ರ.ಸಂ | ಚಟುವಟಿಕೆಗಳು | ಗದಗ | | ಹಾಸನ | | ಹಾವೇರಿ | | ಕಲಬುರಗಿ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| | ಜಿ.ಪಿ.ಆರ್. ಎಸ್ವೆಚ್ಚ, ಕಲಾಜಾತ ಇತ್ಯಾದಿ) | | | | | | | | | | |
| | **ಒಟ್ಟು** | **4529** | **64.29** | **7220** | **91.52** | **6323** | **82.45** | **6323** | **82.45** | **24395** | **320.71** |

| ಕ್ರ.ಸಂ | ಚಟುವಟಿಕೆಗಳು | ಕೊಡಗು | | ಕೋಲಾರ | | ಕೊಪ್ಪಳ | | ಮಂಡ್ಯ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-1 | ವಿಸ್ತರಣೆಯೋಜನೆರಿವಿಸಿಟಿಂಗ್ (SREP) | 0 | 0 | 0 | 0 | 0 | 0 | 0 | 0 | 0 | 0 |
| ಬಿ-2 | ರೈತರತರಬೇತಿಗಳು(ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 1374 | 7.13 | 2290 | 11.88 | 1832 | 9.50 | 3206 | 16.63 | 8702 | 45.06 |
| ಬಿ-3 | ಕೃಷಿಯೇತರಪ್ರಾತ್ಯಕ್ಷಿಕೆಗಳು | 45 | 1.80 | 75 | 3.00 | 60 | 2.40 | 105 | 4.20 | 285 | 11.4 |
| ಬಿ-4 | ರೈತರಪ್ರವಾಸಗಳು (ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 1170 | 5.10 | 1950 | 8.50 | 1560 | 6.80 | 2730 | 11.90 | 7410 | 32.3 |
| ಬಿ-5 | ವಿವಿಧರೈತಆಸಕ್ತಗುಂಪುಗಳ/ಹಾರಭದ್ರತಾಗುಂಪುಗಳು, ಕೌಶಲ್ಯವರ್ಧನೆ, ಸುತ್ತುನಿಧಿಇತ್ಯಾದಿ | 42 | 3.15 | 70 | 5.25 | 56 | 4.20 | 98 | 7.35 | 266 | 19.95 |
| ಬಿ-6 | ರೈತಗುಂಪುಗಳಿಗೆಪ್ರೋತ್ಸಾಹಕಪ್ರಶಸ್ತಿ | 2 | 0.40 | 2 | 0.40 | 2 | 0.40 | 2 | 0.40 | 8 | 1.6 |
| ಬಿ-7 | ರೈತರತಾಲ್ಲೂಕುಮಟ್ಟದಪ್ರಶಸ್ತಿ | 15 | 1.50 | 25 | 2.50 | 20 | 2.00 | 35 | 3.50 | 95 | 9.5 |
| ಬಿ-8 | ಜಿಲ್ಲಾ ಮಟ್ಟ ಪ್ರದರ್ಶನ, ಕಿಸಾನ್ಮೇಳ, ಹಣ್ಣುಗಳು / ತರಕಾರಿಗಳಪ್ರದರ್ಶನಗಳು | 1 | 4.00 | 1 | 4.00 | 1 | 4.00 | 1 | 4.00 | 4 | 16 |
| ಬಿ-9 | ಮಾಹಿತಿ ಪ್ರಸರಣ (ಮುದ್ರಣ/ ಪ್ರಕಟಣೆ) | 4 | 4.16 | 6 | 5.60 | 5 | 4.88 | 8 | 7.04 | 23 | 21.68 |
| ಬಿ-10 | ಮಾಹಿತಿತಂತ್ರಜ್ಞಾನನೆಟ್ವರ್ಕ್ | 1 | 1.00 | 1 | 1.00 | 1 | 1.00 | 1 | 1.00 | 4 | 4 |
| ಬಿ-11 | ರೈತವಿಜ್ಞಾನಿಸಂವಾದಗಳು&ಕೃಷಿತಂತ್ರಜ್ಞರಬೆಂಬಲ&ಜಂಟಿ ಭೇಟಿಗಳು | 29 | 1.00 | 29 | 1.00 | 29 | 1.00 | 29 | 1.00 | 116 | 4 |
| ಬಿ-12 | ಕಿಸಾನ್ಗೋಷ್ಠಿ ಗಳು | 6 | 0.90 | 10 | 1.50 | 8 | 1.20 | 14 | 2.10 | 38 | 5.7 |
| ಬಿ -13 | ಅಲ್ಪಾವದಿಸಂಶೋಧನೆಗಳನ್ನುಸಂಶೋಧನಾಕೇಂದ್ರಗಳಮೂಲಕಅನುಷ್ಠಾನ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |

| ಕ್ರ.ಸಂ | ಚಟುವಟಿಕೆಗಳು | ಕೊಡಗು | | ಕೋಲಾರ | | ಕೊಪ್ಪಳ | | ಮಂಡ್ಯ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ - 14 | ಜಿಲ್ಲಾಮತ್ತುತಾಲ್ಲೂಕುಮಟ್ಟದಲ್ಲಿಆಡಳಿತ/ಬಂಡವಾಳವೆಚ್ಚಗಳು, ಬಾಡಿಗೆವಾಹನ, ಪ್ರವಾಸಭತ್ಯೆಗಳುಇತ್ಯಾದಿ. | 27 | 6.35 | 41 | 7.25 | 34 | 6.80 | 55 | 8.15 | 157 | 28.55 |
| ಬಿ - 15 | ಕ್ಷೇತ್ರಪಾಠಶಾಲೆಗಳು | 9 | 2.65 | 15 | 4.41 | 12 | 3.53 | 21 | 6.18 | 57 | 16.77 |
| ಡಿ-1 | ಜಿಲ್ಲಾಮಟ್ಟದತರಬೇತಿಕೇಂದ್ರಗಳಿಗೆನಿರ್ವಹಣಾವೆಚ್ಚದಬೆಂಬಲ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಡಿ-2 | ಸಮುದಾಯಬಾನುಲಿಕೇಂದ್ರ ಅನುಷ್ಠಾನ | - | - | - | - | - | - | - | - | 0 | 0 |
| ಡಿ-3 | ರೈತಮಿತ್ರಚಟುವಟಿಕೆಅನುಷ್ಠಾನ | - | - | - | - | - | - | - | - | 0 | 0 |
| ಇ-1 | ರಾಜ್ಯಮಟ್ಟದಅನ್ವೇಷಣಾಚಟುವಟಿಕೆಗಳು | - | - | - | - | - | - | - | - | 0 | 0 |
| ಇ-2 | ಜಿಲ್ಲಾಮಟ್ಟದಅನ್ವೇಷಣಾಚಟುವಟಿಕೆಗಳು | 3 | 0.75 | 5 | 1.25 | 4 | 1.00 | 7 | 1.75 | 19 | 4.75 |
| ಎಫ್. | ನವೀನಮಾದರಿಯವಿದ್ಯನ್ಮಾನಉಪಕರಣಗಳು (ಕಡ್ಡಾಯಚಟುವಟಿಕೆ) (ಪ್ರದರ್ಶನಹಲಗೆಗಳು, ಪಿಕೊ ಪ್ರೊಜೆಕ್ಟರ್, ಟ್ಯಾಬ್ಸ್, ಜಿ.ಪಿ.ಆರ್. ಎಸ್ವೆಚ್ಚ, ಕಲಾಜಾತಇತ್ಯಾದಿ) | 5 | 2.25 | 7 | 2.75 | 6 | 2.50 | 9 | 3.25 | 27 | 10.75 |
| | **ಒಟ್ಟು** | **2735** | **46.14** | **4529** | **64.29** | **3632** | **55.21** | **6323** | **82.45** | **17219** | **248.09** |

| ಕ್ರ.ಸಂ | ಚಟುವಟಿಕೆಗಳು | ಮೈಸೂರು | | ರಾಯಚೂರು | | ರಾಮನಗರ | | ಶಿವಮೊಗ್ಗ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-1 | ವಿಸ್ತರಣೆಯೋಜನೆರಿವಿಸಿಟಿಂಗ್ (SREP) | 0 | 0 | 0 | 0 | 0 | 0 | 0 | 0 | 0 | 0 |
| ಬಿ-2 | ರೈತರತರಬೇತಿಗಳು(ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 3206 | 16.63 | 2290 | 11.88 | 1832 | 9.50 | 3206 | 16.63 | 10534 | 54.64 |
| ಬಿ-3 | ಕೃಷಿಯೇತರಪ್ರಾತ್ಯಕ್ಷಿಕೆಗಳು | 105 | 4.20 | 75 | 3.00 | 60 | 2.40 | 105 | 4.20 | 345 | 13.8 |
| ಬಿ-4 | ರೈತರಪ್ರವಾಸಗಳು (ಅಂತರ ರಾಜ್ಯ, ರಾಜ್ಯ ದೊಳಗೆ, ಜಿಲ್ಲೆ ಯೊಳಗೆ) | 2730 | 11.90 | 1950 | 8.50 | 1560 | 6.80 | 2730 | 11.90 | 8970 | 39.1 |
| ಬಿ-5 | ವಿವಿಧರೈತಆಸಕ್ತಗುಂಪುಗಳ/ಹಾರಭದ್ರತಾಗುಂ ಪುಗಳು, ಕೌಶಲ್ಯ ವರ್ಧನೆ, ಸುತ್ತುನಿಧಿ ಇತ್ಯಾದಿ | 98 | 7.35 | 70 | 5.25 | 56 | 4.20 | 98 | 7.35 | 322 | 24.15 |
| ಬಿ-6 | ರೈತಗುಂಪುಗಳಿಗೆಪ್ರೋತ್ಸಾಹಕಪ್ರಶಸ್ತಿ | 2 | 0.40 | 2 | 0.40 | 2 | 0.40 | 2 | 0.40 | 8 | 1.60 |
| ಬಿ-7 | ರೈತರತಾಲ್ಲೂಕುಮಟ್ಟದಪ್ರಶಸ್ತಿ | 35 | 3.50 | 25 | 2.50 | 20 | 2.00 | 35 | 3.50 | 115 | 11.5 |
| ಬಿ-8 | ಜಿಲ್ಲಾಮಟ್ಟಪ್ರದರ್ಶನ, ಕಿಸಾನ್ಮೇಳ, ಹಣ್ಣುಗಳು / ತರಕಾರಿಗಳಪ್ರದರ್ಶನಗಳು | 1 | 4.00 | 1 | 4.00 | 1 | 4.00 | 1 | 4.00 | 4 | 16.00 |
| ಬಿ-9 | ಮಾಹಿತಿಪ್ರಸರಣ (ಮುದ್ರಣ/ಪ್ರಕಟಣೆ) | 8 | 7.04 | 6 | 5.60 | 5 | 4.88 | 8 | 7.04 | 27 | 24.56 |
| ಬಿ-10 | ಮಾಹಿತಿತಂತ್ರಜ್ಞಾನನೆಟ್ವರ್ಕ್ | 1 | 1.00 | 1 | 1.00 | 1 | 1.00 | 1 | 1.00 | 4 | 4.00 |

| ಕ್ರ.ಸಂ | ಚಟುವಟಿಕೆಗಳು | ಮೈಸೂರು | | ರಾಯಚೂರು | | ರಾಮನಗರ | | ಶಿವಮೊಗ್ಗ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-11 | ರೈತವಿಜ್ಞಾನಿಸಂವಾದಗಳು&ಕೃಷಿತಂತ್ರಜ್ಞರಬೆಂಬಲ&ಜಂಟಿ ಭೇಟಿಗಳು | 29 | 1.00 | 29 | 1.00 | 29 | 1.00 | 29 | 1.00 | 116 | 4.00 |
| ಬಿ-12 | ಕಿಸಾನ್ಗೋಷ್ಠಿಗಳು | 14 | 2.10 | 10 | 1.50 | 8 | 1.20 | 14 | 2.10 | 46 | 6.90 |
| ಬಿ - 13 | ಅಲ್ಪಾವದಿಸಂಶೋಧನೆಗಳನ್ನುಸಂಶೋಧನಾಕೇಂದ್ರಗಳ ಮೂಲಕಅನುಷ್ಠಾನ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಬಿ - 14 | ಜಿಲ್ಲಾಮತ್ತುತಾಲ್ಲೂಕುಮಟ್ಟದಲ್ಲಿಆಡಳಿತ/ಬಂಡವಾಳವೆಚ್ಚಗಳು, ಬಾಡಿಗೆವಾಹನ, ಪ್ರವಾಸಭತ್ಯೆಗಳುಇತ್ಯಾದಿ. | 55 | 8.15 | 41 | 7.25 | 34 | 6.80 | 55 | 8.15 | 185 | 30.35 |
| ಬಿ - 15 | ಕ್ಷೇತ್ರಪಾಠಶಾಲೆಗಳು | 21 | 6.18 | 15 | 4.41 | 12 | 3.53 | 21 | 6.18 | 69 | 20.3 |
| ಡಿ-1 | ಜಿಲ್ಲಾಮಟ್ಟದತರಬೇತಿಕೇಂದ್ರಗಳಿಗೆನಿರ್ವಹಣಾವೆಚ್ಚದ ಬೆಂಬಲ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಡಿ-2 | ಸಮುದಾಯಬಾನುಲಿ ಕೇಂದ್ರ ಅನುಷ್ಠಾನ | - | - | - | - | - | - | - | - | 0 | 0 |
| ಡಿ-3 | ರೈತಮಿತ್ರಚಟುವಟಿಕೆ ಅನುಷ್ಠಾನ | - | - | - | - | - | - | - | - | 0 | 0 |

| ಕ್ರ.ಸಂ | ಚಟುವಟಿಕೆಗಳು | ಮೈಸೂರು | | ರಾಯಚೂರು | | ರಾಮನಗರ | | ಶಿವಮೊಗ್ಗ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಇ-1 | ರಾಜ್ಯ ಮಟ್ಟದ ಅನ್ವೇಷಣಾಚಟುವಟಿಕೆ ಗಳು | - | - | - | - | - | - | - | - | 0 | 0 |
| ಇ-2 | ಜಿಲ್ಲಾಮಟ್ಟದಅನ್ವೇಷಣಾಚಟುವಟಿಕೆ ಗಳು | 7 | 1.75 | 5 | 1.25 | 4 | 1.00 | 7 | 1.75 | 23 | 5.75 |
| ಎಫ್. | ನವೀನಮಾದರಿಯವಿದ್ಯನ್ಮಾನಉಪಕರಣಗಳು (ಕಡ್ಡಾಯಚಟುವಟಿಕೆ) (ಪ್ರದರ್ಶನಹಲಗೆಗಳು, ಪಿಕೊಪ್ರೊಜೆಕ್ಟರ್, ಟ್ಯಾಬ್ಸ್, ಜಿ.ಪಿ.ಆರ್.ಎಸ್ವಿಚ್ಚ್, ಕಲಾಜಾತಇತ್ಯಾದಿ) | 9 | 3.25 | 7 | 2.75 | 6 | 2.50 | 9 | 3.25 | 31 | 11.75 |
| | **ಒಟ್ಟು** | **6323** | **82.45** | **4529** | **64.29** | **3632** | **55.21** | **6323** | **82.45** | **20807** | **284.40** |

| ಕ್ರ .ಸಂ | ಚಟುವಟಿಕೆಗಳು | ತುಮಕೂರು | | ಉಡುಪಿ | | ಉ.ಕನ್ನಡ | | ವಿಜಯಾಪುರ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-1 | ವಿಸ್ತರಣೆಯೋಜನೆರಿವಿಸಿಟಿಂಗ್ (SREP) | 0 | 0 | 0 | 0 | 0 | 0 | 0 | 0 | 0 | 0 |
| ಬಿ-2 | ರೈತರತರಬೇತಿಗಳು(ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 4580 | 23.75 | 1374 | 7.13 | 5038 | 26.13 | 2290 | 11.88 | 13282 | 68.89 |
| ಬಿ-3 | ಕೃಷಿಯೇತರಪ್ರಾತ್ಯಕ್ಷಿಕೆಗಳು | 150 | 6.00 | 45 | 1.80 | 165 | 6.60 | 75 | 3.00 | 435 | 17.4 |
| ಬಿ-4 | ರೈತರಪ್ರವಾಸಗಳು (ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 3900 | 17.00 | 1170 | 5.10 | 4290 | 18.70 | 1950 | 8.50 | 11310 | 49.3 |
| ಬಿ-5 | ವಿವಿಧರೈತಆಸಕ್ತಗುಂಪುಗಳ/ಹಾರಭದ್ರುತಾಗುಂಪುಗಳು, ಕೌಶಲ್ಯವರ್ಧನೆ, ಸುತ್ತುನಿಧಿಇತ್ಯಾದಿ | 140 | 10.50 | 42 | 3.15 | 154 | 11.50 | 70 | 5.25 | 406 | 30.4 |
| ಬಿ-6 | ರೈತಗುಂಪುಗಳಿಗೆಪ್ರೋತ್ಸಾಹಕಪ್ರಶಸ್ತಿ | 2 | 0.40 | 2 | 0.40 | 2 | 0.40 | 2 | 0.40 | 8 | 1.6 |

| ಕ್ರ.ಸಂ | ಚಟುವಟಿಕೆಗಳು | ತುಮಕೂರು | | ಉಡುಪಿ | | ಉ.ಕನ್ನಡ | | ವಿಜಯಾಪುರ | | ಒಟ್ಟು | |
|---|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-7 | ರೈತರತಾಲ್ಲೂಕುಮಟ್ಟದಪ್ರಶಸ್ತಿ | 50 | 5.00 | 15 | 1.50 | 55 | 5.50 | 25 | 2.50 | 145 | 14.5 |
| ಬಿ-8 | ಜಿಲ್ಲಾಮಟ್ಟಪ್ರದರ್ಶನ, ಕಿಸಾನ್ಮೇಳ, ಹಣ್ಣುಗಳು / ತರಕಾರಿಗಳಪ್ರದರ್ಶನಗಳು | 1 | 4.00 | 1 | 4.00 | 1 | 4.00 | 1 | 4.00 | 4 | 16 |
| ಬಿ-9 | ಮಾಹಿತಿಪ್ರಸರಣ (ಮುದ್ರಣ/ಪ್ರಕಟಣೆ) | 11 | 9.20 | 4 | 4.16 | 12 | 9.92 | 6 | 5.60 | 33 | 28.88 |
| ಬಿ-10 | ಮಾಹಿತಿತಂತ್ರಜ್ಞಾನನೆಟ್ವರ್ಕ್ | 1 | 1.00 | 1 | 1.00 | 1 | 1.00 | 1 | 1.00 | 4 | 4 |
| ಬಿ-11 | ರೈತವಿಜ್ಞಾನಿಸಂವಾದಗಳು&ಕೃಷಿತಂತ್ರಜ್ಞರಬೆಂಬಲ&ಜಂಟಿಭೇಟಿಗಳು | 29 | 1.00 | 29 | 1.00 | 29 | 1.00 | 29 | 1.00 | 116 | 4 |
| ಬಿ-12 | ಕಿಸಾ ನ್ಗೋಷ್ಠಿಗಳು | 20 | 3.00 | 6 | 0.90 | 22 | 3.30 | 10 | 1.50 | 58 | 8.7 |
| ಬಿ - 13 | ಅಲ್ಪಾವದಿಸಂಶೋಧನೆಗಳನ್ನುಸಂಶೋಧನಾಕೇಂದ್ರಗಳಮೂಲಕಅನುಷ್ಠಾನ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಬಿ - 14 | ಜಿಲ್ಲಾಮತ್ತುತಾಲ್ಲೂಕುಮಟ್ಟದಲ್ಲಿಆಡಳಿತ/ ಬಂಡವಾಳವೆಚ್ಚಗಳು, ಬಾಡಿಗೆ ವಾಹನ, ಪ್ರವಾಸಭತ್ಯೆಗಳುಇತ್ಯಾದಿ. | 76 | 9.50 | 27 | 6.35 | 83 | 9.95 | 41 | 7.25 | 227 | 33.05 |
| ಬಿ - 15 | ಕ್ಷೇತ್ರಪಾಠಶಾಲೆಗಳು | 30 | 8.82 | 9 | 2.65 | 33 | 9.71 | 15 | 4.41 | 87 | 25.59 |
| ಡಿ-1 | ಜಿಲ್ಲಾಮಟ್ಟದತರಬೇತಿಕೇಂದ್ರಗಳಿಗೆನಿರ್ವಹಣಾವೆಚ್ಚದಬೆಂಬಲ | 1 | 2.00 | 1 | 2.00 | 1 | 2.00 | 1 | 2.00 | 4 | 8.00 |
| ಡಿ-2 | ಸಮುದಾಯಬಾನುಲಿಕೇಂದ್ರಅನುಷ್ಠಾನ | - | - | - | - | - | - | - | - | 0 | 0 |
| ಡಿ-3 | ರೈತಮಿತ್ರಚಟುವಟಿಕೆಅನುಷ್ಠಾನ | - | - | - | - | - | - | - | - | 0 | 0 |
| ಇ-1 | ರಾಜ್ಯಮಟ್ಟದಅನ್ವೇಷಣಾಚಟುವಟಿಕೆಗಳು | - | - | - | - | - | - | - | - | 0 | 0 |
| ಇ-2 | ಜಿಲ್ಲಾಮಟ್ಟದಅನ್ವೇಷಣಾಚಟುವಟಿಕೆಗಳು | 10 | 2.50 | 3 | 0.75 | 11 | 2.75 | 5 | 1.25 | 29 | 7.25 |
| ಎಫ್. | ನವೀನಮಾದರಿಯವಿದ್ಯನ್ಮಾನಉಪಕರಣಗಳು (ಕಡ್ಡಾಯಚಟುವಟಿಕೆ) (ಪ್ರದರ್ಶನಹಲಗೆಗಳು, ಪಿಕೊಪ್ರೊಜೆಕ್ಟರ್, ಟ್ಯಾಬ್ಸ್, ಜಿ.ಪಿ.ಆರ್.ಎಸ್ವಚ್ಚ್, ಕಲಾಜಾತಇತ್ಯಾದಿ) | 12 | 4.00 | 5 | 2.25 | 13 | 4.25 | 7 | 2.75 | 37 | 13.25 |
| | **ಒಟ್ಟು** | **9014** | **109.67** | **2735** | **46.14** | **9911** | **118.71** | **4529** | **64.29** | **26189** | **338.81** |

| ಕ್ರ. ಸಂ | ಚಟುವಟಿಕೆಗಳು | ಯಾದಗಿರಿ | | ಒಟ್ಟು | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಬಿ-1 | ವಿಸ್ತರಣೆಯೋಜನೆರಿವಿಸಿಟಿಂಗ್ (SREP) | 0 | 0 | 0 | 0 |
| ಬಿ-2 | ರೈತರತರಬೇತಿಗಳು(ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 1374 | 7.13 | 1374 | 7.13 |
| ಬಿ-3 | ಕೃಷಿಯೇತರಪ್ರಾತ್ಯಕ್ಷಿಕೆಗಳು | 45 | 1.80 | 45 | 1.80 |
| ಬಿ-4 | ರೈತರಪ್ರವಾಸಗಳು (ಅಂತರರಾಜ್ಯ, ರಾಜ್ಯದೊಳಗೆ, ಜಿಲ್ಲೆಯೊಳಗೆ) | 1170 | 5.10 | 1170 | 5.10 |
| ಬಿ-5 | ವಿವಿಧರೈತಆಸಕ್ತಗುಂಪುಗಳ/ಹಾರಭದ್ರತಾಗುಂಪುಗಳು, ಕೌಶಲ್ಯವರ್ಧನೆ, ಸುತ್ತುನಿಧಿಇತ್ಯಾದಿ | 42 | 3.15 | 42 | 3.15 |
| ಬಿ-6 | ರೈತಗುಂಪುಗಳಿಗೆಪ್ರೋತ್ಸಾಹಕಪ್ರಶಸ್ತಿ | 2 | 0.40 | 2 | 0.40 |
| ಬಿ-7 | ರೈತರತಾಲ್ಲೂಕುಮಟ್ಟದಪ್ರಶಸ್ತಿ | 15 | 1.50 | 15 | 1.50 |
| ಬಿ-8 | ಜಿಲ್ಲಾಮಟ್ಟಪ್ರದರ್ಶನ, ಕಿಸಾನ್ಮೇಳ, ಹಣ್ಣುಗಳು / ತರಕಾರಿಗಳಪ್ರದರ್ಶನಗಳು | 1 | 4.00 | 1 | 4.00 |
| ಬಿ-9 | ಮಾಹಿತಿಪ್ರಸರಣ (ಮುದ್ರಣ/ಪ್ರಕಟಣೆ) | 4 | 4.16 | 4 | 4.16 |
| ಬಿ-10 | ಮಾಹಿತಿತಂತ್ರಜ್ಞಾನನೆಟ್ವರ್ಕ್ | 1 | 1.00 | 1 | 1.00 |
| ಬಿ-11 | ರೈತವಿಜ್ಞಾನಿಸಂವಾದಗಳು&ಕೃಷಿತಂತ್ರಜ್ಞರ ಬೆಂಬಲ&ಜಂಟಿಭೇಟಿಗಳು | 29 | 1.00 | 29 | 1.00 |
| ಬಿ-12 | ಕಿಸಾನ್ಗೋಷ್ಠಿಗಳು | 6 | 0.90 | 6 | 0.90 |

| | | | | | |
|---|---|---|---|---|---|
| ಬಿ - 13 | ಅಲ್ಪಾವದಿಸಂಶೋಧನೆಗಳನ್ನುಸಂಶೋಧನಾ ಕೇಂದ್ರಗಳಮೂಲಕಅನುಷ್ಠಾನ | 1 | 2.00 | 1 | 2.00 |
| ಬಿ - 14 | ಜಿಲ್ಲಾಮತ್ತುತಾಲ್ಲೂಕುಮಟ್ಟದಲ್ಲಿಆಡಳಿತ/ ಬಂಡವಾಳವೆಚ್ಚಗಳು, ಬಾಡಿಗೆವಾಹನ, ಪ್ರವಾಸಭತ್ಯೆಗಳುಇತ್ಯಾದಿ. | 27 | 6.35 | 27 | 6.35 |
| ಬಿ - 15 | ಕ್ಷೇತ್ರಪಾಠಶಾಲೆಗಳು | 9 | 2.65 | 9 | 2.65 |
| ಡಿ-1 | ಜಿಲ್ಲಾಮಟ್ಟದತರಬೇತಿಕೇಂದ್ರಗಳಿಗೆನಿರ್ವಹ ಣಾವೆಚ್ಚದಬೆಂಬಲ | 1 | 2.00 | 1 | 2.00 |
| ಡಿ-2 | ಸಮುದಾಯಬಾನುಲಿಕೇಂದ್ರಅನುಷ್ಠಾನ | - | - | - | - |
| ಡಿ-3 | ರೈತಮಿತ್ರಚಟುವಟಿಕೆಅನುಷ್ಠಾನ | - | - | - | - |
| ಇ-1 | ರಾಜ್ಯಮಟ್ಟದಅನ್ವೇಷಣಾಚಟುವಟಿಕೆಗಳು | - | - | - | - |
| ಇ-2 | ಜಿಲ್ಲಾಮಟ್ಟದಅನ್ವೇಷಣಾಚಟುವಟಿಕೆಗಳು | 3 | 0.75 | 3 | 0.75 |
| ಎಫ್. | ನವೀನಮಾದರಿಯವಿದ್ಯನ್ಮಾನಉಪಕರಣಗಳು (ಕಡ್ಡಾಯಚಟುವಟಿಕೆ) (ಪ್ರದರ್ಶನಹಲಗೆಗಳು, ಪಿಕೊಪ್ರೊಜೆಕ್ಟರ್, ಟ್ಯಾಬ್ಸ್, ಜಿ.ಪಿ.ಆರ್.ಎಸ್ವೆಚ್ಚ, ಕಲಾಜಾತಇತ್ಯಾದಿ) | 5 | 2.25 | 5 | 2.25 |
| | **ಒಟ್ಟು** | 2735 | 46.14 | 2735 | 46.14 |

“ವಿಸ್ತರಣಾ ಸುದಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ” ಆತ್ಮ ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಇದಕ್ಕಾಗಿ ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾಮಟ್ಟದಲ್ಲಿ ಕೃಷಿತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ಆತ್ಮ) ಯನ್ನು ಅಸ್ಥಿತ್ವಕ್ಕೆ ತರಲಾಗಿದೆ.

2020-21ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಸ್ತರಣೆ ಮತ್ತು ತಾಂತ್ರಿಕತೆ (NMAET) ಅಡಿ (SMAE) ಆತ್ಮ ಯೋಜನೆಯು ಮಾರ್ಪಡಿಸಿರುವ ಮಾರ್ಗಸೂಚಿ 2018ರನ್ವಯ ಈ ಕೆಳಕಂಡ ಕಾರ್ಯಕ್ರಮಗಳನ್ನು ನಿರ್ವಹಿಸುವುದು.

ಯೋಜನೆಯಉದ್ದೇಶಗಳು:-

1. ಬಹು ಸಂಸ್ಥೆಗಳು ವಿಸ್ತರಣಾ ಸಾದನಾ ತಂತ್ರಗಳನ್ನು (ಸಾರ್ವಜನಿಕ/ಖಾಸಗಿವಿಸ್ತರಣಾಸೇವಾದಾರರುಸೇರಿಕೊಂಡತೆ) ರೂಪಿಸಿಕೊಳ್ಳಲು ಪ್ರೋತ್ಸಾಹಿಸುವುದು.
2. ಕ್ಷೇತ್ರ ಮಟ್ಟದ ಯೋಜನೆಯಿಂದ ಮೇಲ್ಮಟ್ಟದ ಯೋಜನೆಗಳನ್ನು ರೂಪಿಸುವ ವಿಧಾನದಿಂದ ಕೃಷಿಪದ್ಧತಿಗನುಗುಣವಾಗಿ ಸಮಗ್ರ ವಿಶಾಲತಳ ಹದಿಯ ವಿಸ್ತರಣಾ ಸೇವೆಯನ್ನು ಸಾದ್ಯವಾಗಿಸುವುದು.
3. ಗುಂಪುಗಳ ಒಗ್ಗಟ್ಟಿನ ಬಲವನ್ನು ಅಳವಡಿಸುವುದು ಅಂದರೆ ಆಸಕ್ತ ಗುಂಪುಗಳನ್ನೊಳಗೊಂಡು ರೈತರ ಗುರುತಿಸಲಾದ ಅಗತ್ಯತೆಗಳು/ ಅವಶ್ಯಕತೆಗಳನ್ನು ಸಾಧಿಸಲು ಮತ್ತು ಈ ಗುಂಪುಗಳನ್ನು ರೈತ ಉತ್ಪದನಾ ಸಂಸ್ಥೆಗಳಾಗಿ ಸಂಘಟಿಸುವುದು.
4. ರೈತ ಪರ ಕಾರ್ಯಕ್ರಮಗಳ ಯೋಜನೆ, ನಿರ್ವಹಣೆ ಮತ್ತು ಅನುಷ್ಟಾನಗಳಲ್ಲಿ ಒಗ್ಗೂಡುವಿಕೆಯನ್ನು ಸಾಧಿಸಲು ನೆರವಾಗುವುದು.
5. ಸ್ತ್ರೀಯರ ಅವಶ್ಯಕತೆಗಳನ್ನು ಗಮನಿಸುವಸಲುವಾಗಿ ರೈತ ಮಹಿಳೆಯರ ಗುಂಪುಗಳನ್ನು ರಚಿಸಿಅವುಗಳಿಗೆ ತರಬೇತಿಯನ್ನು ನೀಡುವುದು.

ಮೇಲಿನ ಉದ್ದೇಶಗಳನ್ನು ವಿವರಿಸಿರುವಂತೆ ಸಾಂಸ್ಥಿಕ ವ್ಯವಸ್ಥೆಗಳ ಬಲಪಡಿಸುವಿಕೆ, ಕರ್ತವ್ಯ ಬದ್ಧಮಾನವ ಸಂಪನ್ಮೂಲ,ನವೀನ ತಂತ್ರಜ್ಞಾನ ಪ್ರಸರಣಾಘಟಕ & ಪುನರ್ ನವೀಕೃತ ಸಾದನಾ ತಂತ್ರಗಳ ಮೂಲಕ ಸಾಧಿಸಲಾಗುವುದು.

ಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಪ್ರಮುಖ ಕಾರ್ಯಚಟುವಟಿಕೆಗಳು:-

ಮಾರ್ಗಸೂಚಿ-2018ರನ್ವಯ, ಆತ್ಮ ಕೆಫೆಟೇರಿಯಾ ಚಟುವಟಿಕೆಗಳು ಈ ಕೆಳಕಂಡಂತಿರುತ್ತದೆ.

1. ರಾಜ್ಯ ಮಟ್ಟದ ಚಟುವಟಿಕೆಗಳು- i)ವಿಸ್ತರಣಾ ಸಿಬ್ಬಂದಿಯ ಕೌಶಲ್ಯವರ್ಧನೆಗಾಗಿ ತರಬೇತಿಗಳು, ii)ಶೈಕ್ಷಣಿ ಕಪ್ರವಾಸಗಳು, iii)ರಾಜ್ಯ ಮಟ್ಟದ ಕೃಷಿವಸ್ತು ಪ್ರದರ್ಶನಗಳು, iv)ರಾಜ್ಯ ಹಾಗೂ ಜಿಲ್ಲಾ ಮಟ್ಟದ ಪ್ರಶಸ್ತಿಗಳು, v)ಸಮೇತಿ ಬಲವರ್ಧನೆ.

2. ಜಿಲ್ಲಾಮಟ್ಟದಚಟುವಟಿಕೆಗಳು- i)ರೈತರ ತರಬೇತಿಗಳು, ii)ಶೈಕ್ಷಣಿಕ ಪ್ರವಾಸಗಳು, iii)ಪ್ರಾತ್ಯಕ್ಷಿಕೆಗಳು, iv)ಪಾಠಶಾಲೆಗಳು, v)ಆಸಕ್ತ ಗುಂಪುಗಳು, vi)ತಾಲ್ಲೂಕಾ ಮಟ್ಟದ ರೈತ ಪ್ರಶಸ್ತಿಗಳು, vii)ಜಿಲ್ಲಾ/ ತಾಲ್ಲೂಕಾ ಸಲಹಾ ಸಮಿತಿಗಳು, viii) ರೈತ ವಿಜ್ಞಾನಿ ಅಧಿವೇಶನಗಳು, ಕ್ಷೇತ್ರೋತ್ಸವಗಳು, ಕಿಸಾನ್ಗೋಷ್ಠಿ, ಇತ್ಯಾದಿ.

3. ಆತ್ಮ ಯೋಜನೆಯಡಿ ಸಮಿತಿಗಳು-

i) ರಾಜ್ಯ ಮಟ್ಟದ ಸಮಿತಿಗಳು:-

ಅ) ಅಂತರ ಇಲಾಖಾ ಕಾರ್ಯತಂಡ:-ಕೃಷಿ ಅಭಿವೃದ್ಧಿಗೆ ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ, ಭೂಸಾರ ಸಂರಕ್ಷಣೆ ಇತ್ಯಾದಿ ಇಲಾಖೆಗಳಿವೆ. ಇವುಗಳ ಮಧ್ಯೆ ಪರಿಣಾಮಕಾರಿ ಸಂಯೋಜನೆಯನ್ನು ಸಾಧಿಸುವ ಉದ್ದೇಶಕ್ಕಾಗಿ ರಾಜ್ಯ ಮಟ್ಟದಲ್ಲಿ ಒಂದು ಅಂತರ ಇಲಾಖಾಕಾರ್ಯತಂಡವಿರುತ್ತದೆ.

ಆ) ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ):-ರಾಜ್ಯ ಕೃಷಿ ನಿರ್ವಹಣೆ ಮತ್ತು ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ) ಆಯಾ ರಾಜ್ಯದ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಮೂಲಭೂತ ಸೌಕರ್ಯ ಹಾಗೂ ಮಾನವ ಸಂಪನ್ಮೂಲ ಬಲಪಡಿಸುವ ಉದ್ದೇಶ ಹೊಂದಿವೆ.ರಾಜ್ಯ ಮಟ್ಟದಸ ಮಿತಿಯು (SLC)ತರಬೇತಿಯೋಜನೆಯನ್ನು ಅಭಿವೃದ್ಧಿಪಡಿಸುವ ಮಾರ್ಗಸೂಚಿಯ ಭಾಗವಾಗಿದೆ. ರಾಜ್ಯದಲ್ಲಿ ಎರಡು ಸಮೇತಿಗಳಾದ ಸಮೇತಿ(ದ), ಬೆಂಗಳೂರು ಮತ್ತು ಸಮೇತಿ(ಉ), ಧಾರವಾಡ ಕಾರ್ಯ ನಿರ್ವಹಿಸುತ್ತಿವೆ.

ಇ) ರಾಜ್ಯ ರೈತರ ಸಲಹಾ ಸಮಿತಿ (SFAC):-ರಾಜ್ಯ ರೈತ ಸಲಹಾ ಸಮಿತಿಯು ಸಮೇತಿಗೆ ತರಬೇತಿಗೆ ಸಂಬಂಧಿಸಿದ ಅಗತ್ಯತೆಗಳ ಬಗ್ಗೆ ಮಾಹಿತಿ ನೀಡಬೇಕು ಹಾಗೂ ರಾಜ್ಯ ಸಂಪರ್ಕ ಕೋಶಕ್ಕೆ ರಾಜ್ಯ ವಿಸ್ತರಣಾಕಾರ್ಯ ಯೋಜನೆಯನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಸಲಹೆ/ಮಾಹಿತಿ ನೀಡುವುದು.

ii) ಜಿಲ್ಲಾ ಮಟ್ಟದ ಸಮಿತಿಗಳು:-

ಅ) ಆಡಳಿತ ಮಂಡಳಿ(G.B..):-ಆತ್ಮ ಆಡಳಿತ ಮಂಡಳಿಯು ಕಾರ್ಯ ನೀತಿ ರೂಪಿಸುವುದಾಗಿದ್ದು ಆತ್ಮ ಯೋಜನೆಗೆ ಮಾರ್ಗದರ್ಶನ ಪರಾಮರ್ಶಿಸುವಿಕೆ ಹಾಗೂ ಕಾರ್ಯನಿರ್ವಹಣೆಯನ್ನು ತೀವ್ರಗೊಳಿಸಿ ಮುನ್ನಡೆಸುತ್ತದೆ.

ಆ) ಆತ್ಮ ನಿರ್ವಹಣಾ ಸಮಿತಿ (M.C.):- ಆತ್ಮ ಯೋಜನೆಯ ಚಟುವಟಿಕೆಗಳನ್ನು ಯೋಜಿಸುವುದು ಹಾಗೂ ಕಾರ್ಯರೂಪಕ್ಕೆ ತರುವುದು ನಿರ್ವಹಣಾ ಸಮಿತಿಯು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ನೇತೃತ್ವದಲ್ಲಿನ ಕೆಲಸವಾಗಿರುತ್ತದೆ.

iii) ಜಿಲ್ಲಾ ರೈತ ಸಲಹಾ ಸಮಿತಿ (DFAC):-ಜಿಲ್ಲಾ ರೈತ ಸಲಹಾ ಸಮಿತಿಯು ಮಾಹಿತಿ ಹಾಗೂ ಅನುಭವವನ್ನು ಆತ್ಮ ಆಡಳಿತ ಮಂಡಳಿಗೆ ಮತ್ತು ಉಸ್ತುವಾರಿ ಸಮಿತಿಗೆ ನೀಡಬೇಕು.

iv) ತಾಲ್ಲೂಕು ಮಟ್ಟದ ಸಮಿತಿಗಳು:-

ಅ) ತಾಲ್ಲೂಕು ತಾಂತ್ರಿಕ ಅನುಷ್ಠಾನ ತಂಡ (Block Technology Team) :- ತಾಲ್ಲೂಕು ತಾಂತ್ರಿಕ ಅನುಷ್ಠಾನ ತಂಡ ಕೃಷಿ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳ ತಾಲ್ಲೂಕು ಅಂತರ ಇಲಾಖಾ ತಂಡವಾಗಿದೆ. ಈ ತಂಡದ ಸ್ವರೂಪವು ತಾಲ್ಲೂಕುಗಳ ಆದ್ಯತಾ ಆಧಾರದ ಮೇಲೆ ಬದಲಾಗುತ್ತದೆ.

ಆ) ತಾಲ್ಲೂಕು ರೈತ ಸಲಹಾ ಸಮಿತಿ (BFAC) :-ತಾಲ್ಲೂಕು ರೈತ ಸಲಹಾ ಸಮಿತಿಯು ಮಾಹಿತಿ ಹಾಗೂ ಅನುಭವವನ್ನು ತಾಲ್ಲೂಕು ತಾಂತ್ರಿಕ ತಂಡಕ್ಕೆ ನೀಡಬೇಕು. ರೈತ ಆಸಕ್ತಿ ಗುಂಪುಗಳನ್ನು ರಚಿಸಿಕೊಳ್ಳುವುದಕ್ಕೂ ಮತ್ತು ಬೆಳೆಸುವುದಕ್ಕೂ ಸಹಾಯ ಮಾಡಬೇಕು

# XVI. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಲೆ.ಶೀ.: 2401-00-800-1-57

## RKVY-RAFTAAR (Rashtriya Krishi Vikasa Yojana-Renumerative approaches for Agriculture and Allied sectro Rejuvenation)

ಕೃಷಿ ಮತ್ತು ಕೃಷಿ ಸಂಬಂಧಿತ ವಲಯದಲ್ಲಿ ಬೆಳವಣಿಗೆಯನ್ನು ಸುಧಾರಿಸಲು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ ದಿನಾಂಕ:29.05.2007ರಲ್ಲಿ ನಡೆದ ಸಭೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಪ್ರಕಟಿಸಿರುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2007-08 ರಿಂದ 2014-15 ರವರೆಗೆ ಶೇ.100 ರಷ್ಟು ಕೇಂದ್ರ ಸರ್ಕಾರದ ಅನುದಾನವನ್ನು ಬಳಸಿಕೊಂಡು ವಿವಿಧ ಪ್ರಾಯೋಜನೆಗಳನ್ನು ಅನುಷ್ಠಾನಗೊಳಿಸ ಲಾಗಿದೆ.

**ಈ ಯೋಜನೆಯ ಮುಖ್ಯ ಉದ್ದೇಶಗಳು:**

1. ರೈತರಿಗೆ ಕೊಯ್ಲು ಹಾಗೂ ಕೊಯ್ಲೋತ್ತರ ಚಟುವಟಿಕೆಗಳಿಗೆ, ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ ಹಾಗೂ ಮಾರುಕಟ್ಟೆಗೆ ಪ್ರೋತ್ಸಾಹಿಸುವುದು.

2. ರಾಜ್ಯಗಳಿಗೆ ಕೃಷಿ ಸಂಬಂಧಿತ ಯೋಜನೆಗಳಿಗೆ ಹೆಚ್ಚಿನ ಸ್ವಾತಂತ್ರತೆ ನೀಡುವುದು.

3. ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರಾಮುಖ್ಯತೆ ನೀಡುವುದು.

4. ಸಮಗ್ರ ಕೃಷಿ ಪದ್ಧತಿಗೆ ಉತ್ತೇಜನ ನೀಡುವುದು.

5. ವಿವಿಧ ಉಪ-ಯೋಜನೆಗಳ ಮೂಲಕ ರಾಷ್ಟ್ರೀಯ ಆದ್ಯತೆಗಳಿಗೆ ಪ್ರಾಮುಖ್ಯತೆ ಕೊಡುವುದು.

6. ಯುವಜನತೆಗೆ ಹೊಸ ತಂತ್ರಜ್ಞಾನ ಮತ್ತು ತಾಂತ್ರಿಕತೆ ಅಳವಡಿಕೆ ಹಾಗೂ ಕೃಷಿ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಆಧ್ಯತೆ ನೀಡುವುದು.

2007-08 ರಿಂದ 2014-15ರ ವರೆಗೆ ಶೇ. 100 ರಷ್ಟು ಸಹಾಯಧನ ಕೇಂದ್ರ ಸರ್ಕಾರದಿಂದ ನೀಡಲಾಗಿರುತ್ತದೆ. ಆದರೆ, 2015-16ನೇ ಸಾಲಿನಿಂದ ಕೇಂದ್ರ ಸರ್ಕಾರವು 60:40 (ಕೇಂದ್ರದ ಪಾಲು : ರಾಜ್ಯದ ಪಾಲು) ಅನುಪಾತ ನಿಗಧಿಪಡಿಸಿರುತ್ತದೆ.

ಕೃಷಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು, ಸದರಿ ಯೋಜನೆಯನ್ನು ಈ ಕೆಳಕಂಡ ಇಲಾಖೆ/ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. 2020-21ನೇ ಸಾಲಿಗೆ ಕೇಂದ್ರ ಸರ್ಕಾರಿಂದ ರೂ.238.60 ಕೋಟಿ ಅನುದಾನ ನಿಗಧಿಯಾಗಿದ್ದು, ರಾಜ್ಯದ ಪಾಲು ರೂ.159.01 ಕೋಟಿ ಸೇರಿ ಒಟ್ಟಾರೆಯಾಗಿ ರೂ.397.61 ಕೋಟಿ ಲಭ್ಯವಾಗುತ್ತದೆ. ಸದರಿ ಅನುದಾನವನ್ನು ರಾಜ್ಯಮಟ್ಟದ ಮಂಜೂರಾತಿ ಸಮಿತಿ ಸಭೆಯಲ್ಲಿ ಇಲಾಖೆ/ಸಂಸ್ಥೆಗಳಿಗೆ ಹಂಚಿಕೆ ಮಾಡಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗುತ್ತದೆ.

**ಮುಂದುವರೆದು, ಕರ್ನಾಟಕ ಸರ್ಕಾರ 2020-21 ನೇ ಸಾಲಿಗೆ ರಾಜ್ಯ ಅಯವ್ಯಯದಲ್ಲಿ (ಸರ್ಕಾರ ಆದೇಶ ಸಂಖ್ಯೆ: AGRI-AML/91/2O2O, ಬೆಂಗಳೂರು ದಿನಾಂಕ: 02-6-2020) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ರೂ.250.00 ಕೋಟಿಗಳನ್ನು ನಿಗದಿಪಡಿಸಿರುತ್ತದೆ.**

| | |
|---|---|
| 1 | ಕೃಷಿ ಇಲಾಖೆ |
| 2 | ತೋಟಗಾರಿಕೆ ಇಲಾಖೆ |
| 3 | ಪಶು ಸಂಗೋಪನೆ ಇಲಾಖೆ |
| 4 | ರೇಷ್ಮೆ ಇಲಾಖೆ |
| 5 | ಮೀನುಗಾರಿಕೆ ಇಲಾಖೆ |
| 6 | ಜಲಾನಯನ ಅಭಿವೃದ್ಧಿ ಇಲಾಖೆ |
| 7 | ಸಿ.ಎಫ್.ಟಿ.ಆರ್.ಐ ಮೈಸೂರು |
| 8 | ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು |
| 9 | ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ |
| 10 | ಕೃಷಿ ವಿಶ್ವ ವಿದ್ಯಾನಿಲಯ, ರಾಯಚೂರು |
| 11 | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ |
| 12 | ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ |
| 13 | ಐ.ಐ.ಹೆಚ್.ಆರ್ |
| 14 | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಬೆಂಗಳೂರು |
| 15 | ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ |
| 16 | ಸಹಕಾರ ಇಲಾಖೆ |
| 17 | ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಮಂಗಳೂರು |
| 18 | ಗೇರು ಸಂಶೋಧನಾ ಸಂಸ್ಥೆ, ಪುತ್ತೂರು |

## XVII ಪಿ.ಎಂ.ಕಿಸಾನ್-ಕರ್ನಾಟಕ ಯೋಜನೆ ಲೆ.ಶೀ.: 2401-00-800-1-05-100

ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯ ಎಲ್ಲಾ ಅರ್ಹ ರೈತರಿಗೆ ದಿನಾಂಕ 14.08.2019 ರಿಂದ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ರೂ. 4000/- ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ಪಿ.ಎಂ.ಕಿಸಾನ್ ಕರ್ನಾಟಕ ಯೋಜನೆಯಡಿ ನೀಡುತ್ತಿದ್ದು, ಈ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರವು ಆಯವ್ಯಯ ಲೆಕ್ಕ ಶೀರ್ಷಿಕೆಯಡಿ 2401-00-800-1-05-100 ಅಡಿಯಲ್ಲಿ ರೂ. 2600 ಕೋಟಿಗಳ ಅನುದಾನವನ್ನು ನಿಗದಿಪಡಿಸಿದೆ.

**ಈ ಯೋಜನೆಯ ಮುಖ್ಯ ಉದ್ದೇಶಗಳು:**

ಸದರಿ ಯೋಜನೆಯಡಿ ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಉದ್ದೇಶದಂತೆಯೇ ರೈತರಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗು ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯ ಗಳಿಸಲು ನೆರವಾಗಲು ಸಾಗುವಳಿ ಭೂಮಿ ಹೊಂದಿರುವ (01.02.2019 ರಳೊಳಗಾಗಿ ಸ್ವಾಧೀನದಲ್ಲಿರುವ /ಭೂದಾಖಲೆಯಲ್ಲಿ ಹೆಸರಿರುವ) ಎಲ್ಲಾ ಅರ್ಹ ರೈತ ಕುಟುಂಬ (ಒಂದು ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು)ಕ್ಕೆ ವಾರ್ಷಿಕ ರೂ.4000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ನೆರವನ್ನು ರೂ.2000/-ಗಳಂತೆ ಎರಡು ಕಂತುಗಳಲ್ಲಿ ನೀಡಲಾಗುವುದು.

**ಯೋಜನೆಯ ಅರ್ಹತಾ ಷರತ್ತುಗಳು:** ಜಮೀನು ಹೊಂದಿದ ಪ್ರತಿಯೊಬ್ಬ ರೈತ ಕುಟುಂಬ ಈ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅರ್ಹನಾಗಿರುತ್ತಾನೆ. ಆದರೆ, ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಭೂಮಿ ಹೊಂದಿರುವ ಸಂಘ ಅಥವಾ ಸಂಸ್ಥೆಗಳು, ಕುಟುಂಬ ಸದಸ್ಯರು ಮಾಜಿ ಅಥವಾ ಹಾಲಿ ಸಾಂವಿಧಾನಿಕ ಹುದ್ದೆಗಳನ್ನು ಹೊಂದಿದ್ದಲ್ಲಿ, ಮಾಜಿ ಮತ್ತು ಹಾಲಿ ಸಚಿವರು/ರಾಜ್ಯ ಸಚಿವರು/ಲೋಕ ಸಭಾಸದಸ್ಯರು/ರಾಜ್ಯಸಭೆ ಸದಸ್ಯರು/ರಾಜ್ಯ ವಿಧಾನಸಭೆ/ವಿಧಾನ ಪರಿಷತ್ತಿನ ಸದಸ್ಯರು/ನಗರ ಸಭೆ ಅಧ್ಯಕ್ಷರು/ಪುರಸಭೆ ಅಧ್ಯಕ್ಷರು/ಜಿಲ್ಲಾಪಂಚಾಯಿತಿ ಅಧ್ಯಕ್ಷರು, ನಿವೃತ್ತಿ/ಹಾಲಿ ಸೇವೆಯಲ್ಲಿರುವ ಕೇಂದ್ರ/ ರಾಜ್ಯ ಸರ್ಕಾರಗಳ /ಸಚಿವಾಲಯ ಕಛೇರಿ/ಇಲಾಖೆ/ಕ್ಷೇತ್ರ ಕಛೇರಿಗಳು/ಕೇಂದ್ರ/ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಅಂಗ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳ ಅಧಿಕಾರಿಗಳು ಹಾಗೂ ನೌಕರರು/ಸ್ಥಳೀಯ ಸಂಸ್ಥೆಗಳ ಖಾಯಂ ನೌಕರರು (ಗ್ರೂಪ್ ಡಿ/4ನೇ ವರ್ಗ/ Multi Tasking Staff ಹೊರಡುಪಡಿಸಿ), ರೂ. 10,000/- ಅಥವಾ ಹೆಚ್ಚಿನ ಮೊತ್ತ ಪಡೆಯುತ್ತಿರುವ ವಯೋ ನಿವೃತ್ತ /ನಿವೃತ್ತ ಪಿಂಚಣಿದಾರರು. (ಗ್ರೂಪ್ ಡಿ/4ನೇ ವರ್ಗ/ Multi Tasking Staff ಹೊರತುಪಡಿಸಿ), ಕಳೆದ ಸಾಲಿನ ಆದಾಯ ತೆರಿಗೆ ಪಾವತಿದಾರರು, ವೈದ್ಯ, ಅಭಿಯಂತರ, ವಕೀಲ, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿಪರ ಸಂಸ್ಥೆಯಲ್ಲಿ ನೊಂದಾಯಿಸಿಕೊಂಡು ಸದರಿ ವೃತ್ತಿಯನ್ನು ಕೈಗೊಳ್ಳುತ್ತಿರುವವರು ಈ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅನರ್ಹರಾಗಿರುತ್ತಾರೆ.

ರಾಜ್ಯ ಸರ್ಕಾರದಿಂದ ರೈತರ ಮಾಹಿತಿಯನ್ನು http://fruitspmk.karnatak.gov.in ವೆಬ್ ಪೋರ್ಟಲ್ ಮುಖಾಂತರ ನಿರ್ವಹಿಸಲಾಗುತ್ತಿದೆ ಹಾಗೂ ಆರ್ಥಿಕ ಸಹಾಯವನ್ನು ಆಧಾರ್ ಗುರುತಿನ ಸಂಖ್ಯೆ ಆಧಾರದ ಮೇಲೆ ನೇರ ನಗದು ವರ್ಗಾವಣೆ ಪ್ರಕ್ರಿಯೆ ಮೂಲಕ ರೈತರ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ.

## XVIII ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ (ಲೆಕ್ಕ ಶೀರ್ಷಿಕೆ: 2402-00-101-0-03) ದಡಿ

### A ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮ

**ಪೀಠಿಕೆ**

ಮಣ್ಣು ಸಸ್ಯಗಳಿಗೆ ಪೋಷಕಾಂಶಗಳನ್ನು ಒದಗಿಸುವ ಜೀವಂತ ಸಾಧನ. ಮಣ್ಣು ವಿವಿಧ ಲವಣಾಂಶ, ಸಾವಯವ ವಸ್ತುಗಳು, ನೀರು, ಗಾಳಿಯನ್ನು ವಿವಿಧ ಪ್ರಮಾಣಗಳಲ್ಲಿ ಹೊಂದಿದ್ದು, ಸಸ್ಯಗಳ ಬೆಳವಣಿಗೆಗೆ ಸಹಕಾರಿಯಾಗಿರುತ್ತವೆ. ಮಣ್ಣುಗಳ ಉಪಯುಕ್ತತೆಯ ಆಧಾರದ ಮೇಲೆ ಅವುಗಳನ್ನು ವಿಂಗಡಿಸಿ ಅಧ್ಯಯನ ನಡೆಸಲಾಗುತ್ತದೆ. ಮಣ್ಣು ಸಮೀಕ್ಷೆಗಳನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಮತ್ತು ಮಣ್ಣು ವಿಶ್ಲೇಷಣೆಯನ್ನು ರಸಗೊಬ್ಬರ ಬಳಕೆ ಮತ್ತು ನಿರ್ವಹಣೆಯ ಒಂದು ಭಾಗವಾಗಿ ನಡೆಸಲಾಗುತ್ತದೆ.

ಈ ಯೋಜನೆಯನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ಮಣ್ಣು ಪರೀಕ್ಷಾ ಸೇವೆಗಳನ್ನು ಉತ್ತೇಜಿಸಲು, ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲು ಮತ್ತು ಪೋಷಕಾಂಶ ನಿರ್ವಹಣೆ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಲು ಅನುಷ್ಠಾನಗೊಳಿಸಲಾಗುತ್ತಿದೆ. ಮಣ್ಣು ಆರೋಗ್ಯ ಕುರಿತಾದ ಈ ಯೋಜನೆಯನ್ನು ಕೆಳಗೆ ರೂಪಿಸಿರುವ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಯಡಿ ರೂಪಿಸಲಾಗಿರುವ ಘಟಕಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇ 60:40 ರ ಹಂಚಿಕೆ ಅನುಪಾತದಲ್ಲಿ ಅನುದಾನವನ್ನು ಒದಗಿಸಿ ಅನುಷ್ಠಾನಗೊಳಿಸುವುದು.

**ಯೋಜನಾ ಉದ್ದೇಶಗಳು**

ಈ ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿವೆ.

- ರಸಗೊಬ್ಬರ ಬಳಕೆ ಪದ್ಧತಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು ಪ್ರತಿ 3 ವರ್ಷಗಳಿಗೊಮ್ಮೆ ದೇಶದ ಎಲ್ಲಾ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿತರಿಸುವುದು.
- ಸಾಮರ್ಥ್ಯವೃದ್ಧಿ, ಕೃಷಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ICAR/ ಕೃಷಿ ವಿಶ್ವ ವಿದ್ಯಾಲಯಗಳೊಂದಿಗೆ ಪರಿಣಾಮಕಾರಿಯಾದ ಸಂಯೋಜನೆಯ(linkage) ಮೂಲಕ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಕಾರ್ಯನಿರ್ವಹಣೆಯನ್ನು ಬಲಪಡಿಸುವುದು.
- ಪ್ರಮಾಣೀಕೃತ ಮಣ್ಣು ಮಾದರಿ ಸಂಗ್ರಹಣಾ ಮತ್ತು ವಿಶ್ಲೇಷಣಾ ಕಾರ್ಯವಿಧಾನಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಸರಿಸಿ ಮಣ್ಣು ಫಲವತ್ತತೆಯ ಸಮಸ್ಯೆಗಳನ್ನು ಗುರುತಿಸುವುದು. ಉದ್ದೇಶಿತ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ರಸಗೊಬ್ಬರ ಶಿಫಾರಸ್ಸುಗಳನ್ನು ರೂಪಿಸುವುದು.
- ಜಿಲ್ಲೆಗಳಲ್ಲಿ ನಿರ್ಧಿಷ್ಠ ಪೋಷಕಾಂಶಗಳ ಸದ್ಬಳಕೆ ಹೆಚ್ಚಿಸುವ ದೃಷ್ಠಿಯಿಂದ ಮಣ್ಣು ಪರೀಕ್ಷೆಯಾಧಾರಿತ ಪೋಷಕಾಂಶಗಳ ನಿರ್ವಹಣೆ ಅಭಿವೃದ್ಧಿ ಪಡಿಸುವುದು ಮತ್ತು ಉತ್ತೇಜಿಸುವುದು.

- ಪೋಷಕಾಂಶ ನಿರ್ವಹಣಾ ಪದ್ಧತಿಯನ್ನು ಪ್ರೋತ್ಸಾಹಿಸಲು ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ಸಿಬ್ಬಂದಿ ಹಾಗೂ ಪ್ರಗತಿಪರ ರೈತರ ಸಾಮರ್ಥ್ಯ ಹೆಚ್ಚಿಸುವುದು.

## ಯೋಜನೆಯ ಘಟಕಗಳು

- ಮಣ್ಣು ಆರೋಗ್ಯ ಚೀಟಿ: ಮಣ್ಣು ಫಲವತ್ತತೆಯ ಮಾಹಿತಿಯೊಂದಿಗೆ ಸಸ್ಯಪೋಷಕಾಂಶಗಳ ಶಿಫಾರಸ್ಸುಗಳನ್ನು ಒಳಗೊಂಡ ಮಣ್ಣು ಆರೋಗ್ಯ ಚೀಟಿಗಳನ್ನು ಎಲ್ಲಾ ರೈತರಿಗೂ ನಿಯತಕಾಲಿಕವಾಗಿ ವಿತರಿಸಲು ಗುರಿ ಹೊಂದಿದೆ.
- ಪೋಷಕಾಂಶಗಳ ಶಿಫಾರಸ್ಸುಗಳ ಪ್ಯಾಕೇಜ್‌ಗೆ ರೈತರಿಗೆ ಹಣಕಾಸಿನ ನೆರವು: ಪೋಷಕಾಂಶಗಳ ಕೊರತೆಗಳನ್ನು ನೀಗಿಸಲು ರೈತರು ಸರಿಯಾದ ಕ್ರಮಗಳನ್ನು ಅನುಸರಿಸಲು ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಪದ್ಧತಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಹಣಕಾಸಿನ ನೆರವು ನೀಡಲು ಗುರಿ ಹೊಂದಲಾಗಿದೆ.
- ರೈತರ ತರಬೇತಿ
- ಅಭಿಯಾನ ನಿರ್ವಹಣೆ

## ನಿರೀಕ್ಷಿತ ಪರಿಣಾಮ

- ಮಣ್ಣು ಆರೋಗ್ಯ ನಿರ್ವಹಣೆ ಉತ್ತೇಜಿಸಲು, ಪ್ರತಿ 3 ವರ್ಷಗಳಿಗೊಮ್ಮೆ ಒಂದು ಸುತ್ತಿನಲ್ಲಿ ಎಲ್ಲಾ ರೈತರಿಗೂ ಮಣ್ಣು ಆರೋಗ್ಯ ಚೀಟಿ ವಿತರಣೆ ಮಾಡುವುದು.
- ಸಸ್ಯ ಪೋಷಕಾಂಶಗಳ ಸಮತೋಲನ ಮತ್ತು ವಿವೇಚನಾಯುಕ್ತ ಬಳಕೆ ಬಗ್ಗೆ ಪ್ರಚಾರ
- ಸಮಗ್ರ ಪೋಷಕಾಂಶ ನಿರ್ವಹಣೆ ವ್ಯವಸ್ಥೆಯಿಂದ ಶೇ. 20 ರಷ್ಟು ರಾಸಾಯನಿಕ ಗೊಬ್ಬರ ಬಳಕೆ ಕಡಿಮೆ ಗೊಳಿಸುವುದು.

  ಆಯ್ಕೆಯಾದ ಬೆಳೆಗಳ ಉತ್ಪಾದಕತೆಯನ್ನು ಗಮನಾರ್ಹವಾಗಿ ಹೆಚ್ಚಿಸುವುದು.

- ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಎರೆಗೊಬ್ಬರ ಮತ್ತು ನಿಧಾನಗತಿಯಲ್ಲಿ ದೊರಕುವ ಸಾರಜನಕಯುಕ್ತ ಬೇವು ಲೇಪಿತ ಯೂರಿಯಾ ಗೊಬ್ಬರಗಳ ಬೇಡಿಕೆಯು ಮಣ್ಣಿನ ಫಲವತ್ತತೆ ಹಾಗೂ ಪೋಷಕಾಂಶಗಳ ಬಳಕೆ ದಕ್ಷತೆ ಹೆಚ್ಚಿಸುತ್ತದೆ.

## ಮಣ್ಣು ಆರೋಗ್ಯ ಚೀಟಿ

ಮಣ್ಣು ಮಾದರಿಗಳ ವಿಶ್ಲೇಷಣೆ ಮತ್ತು ಮಣ್ಣು ಆರೋಗ್ಯ ಚೀಟಿಗಳ ವಿತರಣೆಗೆ ಆರ್ಥಿಕ ಸಹಾಯ :

ಮಣ್ಣು ಆರೋಗ್ಯ ಚೀಟಿಯು ಮಣ್ಣು ಫಲವತ್ತತಾ ಮಟ್ಟ ಹಾಗೂ ಬೆಳೆ ಇಳುವರಿಯ ಮೇಲೆ ಪರಿಣಾಮ ಬೀರುವ ಅಂಶಗಳ ಕ್ಷೇತ್ರ ನಿರ್ದಿಷ್ಟ ವರದಿಯಾಗಿದ್ದು, ಎಲ್ಲಾ

ರೈತರಿಗೆ ನಿಗಧಿತ ಅವಧಿಗಳಲ್ಲಿ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸುವ ಮೂಲಕ ಮಣ್ಣಿನ ಫಲವತ್ತತೆಯ ಮಾಹಿತಿ ಹಾಗೂ ಬೆಳೆಗಳಿಗೆ ರಸಗೊಬ್ಬರಗಳ ಬಳಕೆಯ ಶಿಫಾರಸ್ಸುಗಳನ್ನು ನೀಡುವ ಗುರಿ ಹೊಂದಲಾಗಿದೆ.

ಮಣ್ಣು ಆರೋಗ್ಯ ಚೀಟಿಯಲ್ಲಿರುವ ವಿವರ:

1 ಮಣ್ಣು ವಿಶ್ಲೇಷಣಾ ವರದಿ

2. ಬೆಳೆಗಳಿಗೆ ರಸಗೊಬ್ಬರ, ಜೈವಿಕ ಗೊಬ್ಬರ ಹಾಗೂ ಲಘು ಪೋಷಕಾಂಶಗಳ ಪ್ರಮಾಣದ ಶಿಫಾರಸ್ಸು.

3. ಹುಳಿ ಮತ್ತು ಕ್ಷಾರ ಮಣ್ಣುಗಳ ಸುಧಾರಕಗಳ ಮಾಹಿತಿ

4. ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ಶಿಫಾರಸ್ಸು.

**ಮಣ್ಣು ಮಾದರಿಗಳ ಸಂಗ್ರಹಣೆಯ ಮತ್ತು ವಿಶ್ಲೇಂಷಣೆಯ ಕ್ರಿಯಾ ಯೋಜನೆ :**

2020-21 ನೇ ಸಾಲಿನಲ್ಲಿ ರಾಜ್ಯದಲ್ಲಿ 4573 ಗ್ರಾಮಗಳನ್ನು ಆಯ್ಕೆ ಮಾಡಿ ರೈತರಿಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಮಣ್ಣು ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು. ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಲ್ಲಿ ಗ್ರಾಮಗಳನ್ನು ಆಯ್ಕೆ ಮಾಡುವಾಗ ಎರಡನೇ ಸೈಕಲ್ ನಲ್ಲಿ ನಿರ್ದಿಷ್ಠ ಪೋಷಕಾಂಶಗಳ ಅಥವಾ ಗಂಧಕದ ಕೊರತೆಯಿರುವ ಗ್ರಾಮಗಳು ಅಥವಾ ಸಮಸ್ಯಾತ್ಮಕ ಮಣ್ಣುಗಳನ್ನು ಹೊಂದಿರುವ ಗ್ರಾಮಗಳು /ಇತರೆ ಗ್ರಾಮಗಳ ರೈತರಿಗೆ ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ನೀಡಲು ಸೂಕ್ತ ಸಂಪರ್ಕವಿರುವ ಗ್ರಾಮಗಳು /ಮುಖ್ಯ ಬೆಳೆಗಳ ಸರಾಸರಿ ಇಳುವರಿಯು ತಾಲ್ಲೂಕುಮಟ್ಟ/ಜಿಲ್ಲಾಮಟ್ಟದ ಇಳುವರಿಗಿಂತ ಕಡಿಮೆ ಇರುವಂತಹ ಗ್ರಾಮಗಳು / ಮಣ್ಣು ಆರೋಗ್ಯ ಚೀಟಿಯ ಮಹತ್ವದ ಕುರಿತು ಸಾಕಷ್ಟು ಅರಿವು ಇರದ ರೈತರನ್ನು ಹೊಂದಿರುವ ಗ್ರಾಮಗಳನ್ನು/ ಗ್ರಾಮದಲ್ಲಿ ಎಲ್ಲಾ ವರ್ಗದ ರೈತರು(ಸಾಮಾನ್ಯ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ) ಇರುವಂತಹ ಗ್ರಾಮಗಳನ್ನು ಪರಿಗಣಿಸುವುದು. ಗ್ರಾಮದ ವಿವರಗಳೊಂದಿಗೆ GPS coordinates ದಾಖಲಿಸಬೇಕು. ಕೃಷಿ ಸಖಿಯರು(ಗ್ರಾಮೀಣ ಅಭಿವೃದ್ಧಿ ಇಲಾಖೆಯ) ಇರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್/ಮಹಿಳಾ ಸ್ವಸಹಾಯ ಗುಂಪುಗಳನ್ನು ಹೊಂದಿರುವ ಗ್ರಾಮಗಳಿಗೆ ಆದ್ಯತೆ ನೀಡುವುದು.

ಮಣ್ಣು ಆರೋಗ್ಯ ಚೀಟಿ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ಹೊರಡಿಸಲಾಗಿರುವ ಆದೇಶ ಸಂಖ್ಯೆ:ಕೃಇ/66/ಕೃಮಸ/2015 (I) ದಿನಾಂಕ:06-11-2015 ಮತ್ತು ಕೃಇ/66/ಕೃಮಸ/2015 (II) ದಿನಾಂಕ: 06-11-2015 ಗಳನ್ವಯ ಹಾಗೂ ಕೇಂದ್ರ ಸರ್ಕಾರವು ಹೊರಡಿಸುವ ಆದೇಸಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

ರಾಜ್ಯದಲ್ಲಿ ಮಣ್ಣು ಮಾದರಿ ಸಂಗ್ರಹಣೆಗೆ ತಾಂತ್ರಿಕ ಉತ್ತೇಜರನ್ನು, ಆತ್ಮ ಯೋಜನೆಯ ಂಖಿಒ/ಃಖಿಒ ಹಾಗೂ ಇಲಾಖೆಯ ಅಧಿಕಾರಿಗಳನ್ನು ಮತ್ತು ಮಣ್ಣು ಪರೀಕ್ಷಾ ಪ್ರಯೋಗಾಲಯದ ಸಿಬ್ಬಂದಿಗಳನ್ನು ಬಳಸಿಕೊಳ್ಳುವುದು. ಅವಶ್ಯವಿದ್ದಲ್ಲಿ ವಿಜ್ಞಾನ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಅದರ ಮಣ್ಣು ಪರೀಕ್ಷಾ ಪ್ರಯೋಗಾಲಯದ ಸಿಬ್ಬಂದಿಗಳು, ಕೃಷಿ ವಿಶ್ವವಿದ್ಯಾಲಯಗಳ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಮತ್ತು ಮಣ್ಣು ಪರೀಕ್ಷಾ ಸಿಬ್ಬಂದಿಗಳನ್ನು, ಗ್ರಾಮಮಟ್ಟದ ಮಣ್ಣು ಪರೀಕ್ಷಾ ಘಟಕಗಳನ್ನು ಸಹ ಬಳಸಿಕೊಳ್ಳುವುದು.

**GPS coordinates (Latitude & Longitude, reading)** ಅಂಕಿ ಆಂಶಗಳನ್ನು ಮಣ್ಣು ಮಾದರಿ ಸಂಗ್ರಹಣಾ ವಿವರಗಳನ್ನು ಇತರೆ ಮಾಹಿತಿಗಳೊಂದಿಗೆ (ಗ್ರಿಡ್ ಸಂಖ್ಯೆ, ರೈತರ ಹೆಸರು, ಜಮೀನಿನ ವಿಸ್ತೀರ್ಣ, ಸರ್ವೆ ನಂ,ಬೆಳೆ ,ರೈತರ ಆಧಾರ್ ಸಂಖ್ಯೆ ಮತ್ತು ಮೋಬೈಲ್ ಸಂಖ್ಯೆಇತ್ಯಾದಿ) ಮಣ್ಣು ಆರೋಗ್ಯ ಚೀಟಿ ಪೋರ್ಟಲ್‌ನಲ್ಲಿ ನೋಂದಾಯಿಸುವುದು. ಸಂಗ್ರಹಿಸಿದ ಮಣ್ಣು ಮಾದರಿಯನ್ನು ಮಣ್ಣು ಆರೋಗ್ಯ ಕೇಂದ್ರಗಳಿಗೆ ಸಾಗಿಸುವುದು. ಮಣ್ಣು ಮಾದರಿಗಳನ್ನು ವಿಶ್ಲೇಷಿಸಿದ ನಂತರ ವಿಶ್ಲೇಷಣಾ ವರದಿಗಳನ್ನಾಧರಿಸಿದ ಮಣ್ಣು ಆರೋಗ್ಯ ಚೀಟಿಗಳನ್ನು ಗ್ರಿಡ್‌ನಲ್ಲಿ ಬರುವ ಎಲ್ಲಾ ರೈತರಿಗೂ ವಿತರಿಸುವುದು. ಜಿಲ್ಲೆಗೆ ನೀಡಿರುವ ಗುರಿಗಳನ್ವಯ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸುವುದು.

## ಮಣ್ಣು ಮಾದರಿಗಳ ವಿಶ್ಲೇಷಣೆ :

1. ಇಲಾಖೆಯ ಮಣ್ಣು ಆರೋಗ್ಯ ಕೇಂದ್ರಗಳು/ ಕೃಷಿ ವಿಶ್ವವಿದ್ಯಾಲಯದ /ಕೃಷಿ ವಿಜ್ಞಾನ ಕೇಂದ್ರಗಳ/ ಕೃಷಿ ವಿಶ್ವವಿದ್ಯಾಲಯ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಮಣ್ಣು ಪರೀಕ್ಷಾ ಪ್ರಯೋಗಾಲಯಗಳು, ಐ.ಸಿ.ಎ.ಆರ್ ಸಂಸ್ಥೆಗಳ/ ಖಾಸಗಿ ಸಂಸ್ಥೆಗಳ ಮಣ್ಣು ಪರೀಕ್ಷಾ ಪ್ರಯೋಗಾಲಯ/ ಜಿಲ್ಲೆಗಳಲ್ಲಿರುವ ವಿಜ್ಞಾನ ಕಾಲೇಜುಗಳ ಪ್ರಯೋಗಾಲಯಗಳನ್ನು, ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಯ ಮಣ್ಣು ಆರೋಗ್ಯ ನಿರ್ವಹಣೆ ಕಾರ್ಯಕ್ರಮಗಳಡಿ ಸ್ಥಾಪಿಸಿರುವ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ, ಮಿನಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಹಾಗೂ ಗ್ರಾಮ ಮಟ್ಟದ ಮಣ್ಣು ಪರೀಕ್ಷಾ ಘಟಕಗಳನ್ನು ಬಳಸಿಕೊಂಡು ಮಣ್ಣು ಮಾದರಿಗಳ ವಿಶ್ಲೇಷಣೆಯನ್ನು ಕೈಗೊಳ್ಳುವುದು.

2. ಮಣ್ಣು ಮಾದರಿಗಳಲ್ಲಿ 12 parameter ಗಳನ್ನು (pH, EC, OC, available N, available P, available K, S, Zn, B, Fe, Cu ಮತ್ತು Mn) ಕಡ್ಡಾಯವಾಗಿ ವಿಶ್ಲೇಷಿಸುವುದು.
3. ಇಲಾಖೆಯು ಕೈಗೊಳ್ಳುವ ಎಲ್ಲಾ ಪ್ರಾತ್ಯಕ್ಷಿಕೆಗಳ ಮುನ್ನ ಮಣ್ಣು ಮಾದರಿಯನ್ನು ವಿಶ್ಲೇಷಿಸಿ, ಮಣ್ಣು ಆರೋಗ್ಯ ಕಾರ್ಡ್‌ನ ಶಿಫಾರಸ್ಸಿನ ಅನ್ವಯ ಅಗತ್ಯ ಪರಿಕರಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
4. ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಮಣ್ಣು ಮಾದರಿ ತಲುಪಿದ ಮೂರು ವಾರಗಳೊಳಗೆ ವಿಶ್ಲೇಷಣೆಯನ್ನು ಪೂರ್ಣಗೊಳಿಸುವುದು.
5. ಇಲಾಖೆಯ ಮಣ್ಣು ಆರೋಗ್ಯ ಕೇಂದ್ರಗಳು ಅಗತ್ಯತೆಗೆ ಅನುಸಾರವಾಗಿ ಕಾರ್ಯನಿರ್ವಹಿಸುವಂತೆ ಹಾಗೂ ಕಡ್ಡಾಯವಾಗಿ ಪ್ರತಿ ಶಿಫ್ಟ್‌ಗೆ ಕನಿಷ್ಠ 100 ಮಣ್ಣು ಮಾದರಿಗಳನ್ನು ವಿಶ್ಲೇಷಿಸುವಂತೆ ಕ್ರಮ ವಹಿಸುವುದು.

## ಮಣ್ಣು ಆರೋಗ್ಯ ಚೀಟಿಗಳ ವಿತರಣೆ:

1. ಮಣ್ಣು ಮಾದರಿಗಳ ವಿಶ್ಲೇಷಣೆಯಾದ ನಂತರ ವಿಶ್ಲೇಷಣಾ ವರದಿಗಳನ್ನು ಮಣ್ಣು ಆರೋಗ್ಯ ಚೀಟಿ ಪೋರ್ಟಲ್‌ನಲ್ಲಿ ದಾಖಲಿಸಿ ಮಣ್ಣು ಆರೋಗ್ಯ ಚೀಟಿಗಳನ್ನು ತಯಾರಿಸುವುದು.
2. ಮಣ್ಣು ಮಾದರಿ ವಿಶ್ಲೇಷಣೆ ಆಧಾರಿತ ರಸಗೊಬ್ಬರ ಶಿಫಾರಸ್ಸುಗಳನೊಳಗೊಂಡ ಮಣ್ಣು ಆರೋಗ್ಯ ಚೀಟಿಯನ್ನು ಇಲಾಖೆಯ ವಿಸ್ತರಣಾ ಅಧಿಕಾರಿ / ಸಿಬ್ಬಂದಿಗಳ ಮೂಲಕ ರೈತರಿಗೆ ತಲುಪಿಸುವುದು.
3. ವಾರದಲ್ಲಿ ಒಂದು ದಿವಸವನ್ನು (ಆಧ್ಯತೆಯ ಮೇರೆಗೆ ಗುರುವಾರ) ಮಣ್ಣು ಆರೋಗ್ಯ ಚೀಟಿ ವಿತರಣೆಗಾಗಿ ನಿಗಧಿಪಡಿಸಿ ಅಭಿಯಾನ, ತರಬೇತಿಗಳ ಮೂಲಕ ರೈತರಿಗೆ ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸುವುದು.

## ವಣ್ಣು ಮಾದರಿ ವಿಶ್ಲೇಷಣೆಯ ಗುಣಮಟ್ಟ ಸುಧಾರಣೆಗೆ ಅನಿಯತ ಮಣ್ಣು ಮಾದರಿಗಳ ಪರೀಕ್ಷೆ Random Checking of Soil Analysis for Quality Improvement)

ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಡಿ ವಿಶ್ಲೇಷಿಸಲಾದ ಮಣ್ಣು ಮಾದರಿಗಳ ಪೈಕಿ ಶೇ.1ರಷ್ಟು ಮಾದರಿಗಳನ್ನು ವಿಶ್ಲೇಷಣೆಯ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ಬಾಹ್ಯ ಮೂಲಗಳಿಂದ ಮರು ವಿಶ್ಲೇಷಿಸಬೇಕಾಗಿರುತ್ತದೆ. ಗುಣಮಟ್ಟ ಖಾತರಿ ಪಡಿಸಿಕೊಳ್ಳಲು ಜಿಲ್ಲೆಗಳಿಂದ ಬರುವ ಮಣ್ಣು ಮಾದರಿಗಳನ್ನು ರೆಫರಲ್ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಾಡಬೇಕಾಗಿರುತ್ತದೆ.

ಮಿನಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಹಾಗೂ ಗ್ರಾಮಮಟ್ಟದ ಮಣ್ಣು ಪರೀಕ್ಷಾ ಘಟಕಗಳಲ್ಲಿ ವಿಶ್ಲೇಷಿಸಲಾದ ಮಣ್ಣು ಮಾದರಿಗಳ ಪೈಕಿ ಶೇ.1ರಷ್ಟು ಮಾದರಿಗಳನ್ನು ವಿಶ್ಲೇಷಣೆಯ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ಸಂಬಂಧಿಸಿದ ಜಿಲ್ಲೆಯ ಇಲಾಖೆಯ ಮಣ್ಣು ಪರೀಕ್ಷಾ ಪ್ರಯೋಗಾಲಯದಲ್ಲಿ ಮರುವಿಶ್ಲೇಷಣೆ ಕೈಗೊಳ್ಳುವುದು.

ರಾಜ್ಯದಲ್ಲಿ ಮಣ್ಣು ಆರೋಗ್ಯ ಅಭಿಯಾನ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ District Level Executive Committee (DLEC) ರಚಿಸಲಾಗಿದೆ. ಈ ಸಮಿತಿಯು ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಡಿ ಮಣ್ಣು ಸಂಗ್ರಹಣೆ ಮತ್ತು ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಮಣ್ಣು ಮಾದರಿ ವಿಶ್ಲೇಷಣೆ ಅನುಮೋದಿತ ಕಾರ್ಯವಿಧಾನಗಳನ್ವಯ ಕೈಗೊಳ್ಳಲಾಗುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು. ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮದ ಅನುಷ್ಠಾನದ ಉಸ್ತುವಾರಿ ಮತ್ತು ತೊಡಕುಗಳು ಉಂಟಾದಲ್ಲಿ ಪರಿಹರಿಸಲು ಸಹಕರಿಸುವುದು.

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಯ ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದ ಮಾರ್ಗಸೂಚಿಯನ್ವಯ, ಕೇಂದ್ರ ಸರ್ಕಾರದಿಂದ ಅನುಮೋದಿತ ಕಾರ್ಯಯೋಜನೆಯನ್ವಯ ಮತ್ತು ಇಲಾಖೆಯಿಂದ ಅಗಿಂದಾಗ್ಗೆ ಹೊರಡಿಸಲಾಗುವ ಸೂಚನೆ ಹಾಗೂ ಸುತ್ತೋಲೆಗಳನ್ವಯ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

**ಮಣ್ಣು ಆರೋಗ್ಯ ಚೀಟಿ ಯೋಜನೆಯ ಘಟಕಗಳು**

**ಪ್ರತಿ ಮಣ್ಣು ಮಾದರಿಗೆ ತಗುಲುವ ವೆಚ್ಚ :**

ಮಣ್ಣು ಮಾದರಿ ಸಂಗ್ರಹಣೆ, ವಿಶ್ಲೇಷಣೆ, ಮತ್ತು ಮಣ್ಣು ಆರೋಗ್ಯ ಚೀಟಿ ತಯಾರಿಕೆ ಹಾಗೂ ವಿತರಣೆಗೆ ಆರ್ಥಿಕ ನೆರವು ನೀಡಲಾಗುವುದು.

**ಪೋಷಕಾಂಶಗಳ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಪ್ರಾತ್ಯಕ್ಷಿಕೆ:**

ಮಣ್ಣು ಆರೋಗ್ಯ ಚೀಟಿಗಳಲ್ಲಿನ ಶಿಫಾರಸ್ಸುಗಳನ್ವಯ ಮಣ್ಣಿನಲ್ಲಿ ಪೋಷಕಾಂಶಗಳ ಕೊರತೆಯನ್ನು ನೀಗಿಸಲು ರೈತರಿಗೆ ತಮ್ಮ ಬೆಳೆ ಪದ್ಧತಿಗೆ ಅವಶ್ಯವಿರುವ ಪರಿಕರಗಳು, ಸಮತೋಲನ ಹಾಗೂ ಸಮಗ್ರ ಪೋಷಕಾಂಶ ನಿರ್ವಹಣಾ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಅವಶ್ಯವಿರುವ ಲಘು ಪೋಷಕಾಂಶ / ಮಣ್ಣು ಸುಧಾರಕಗಳ/ಜೈವಿಕ ಗೊಬ್ಬರಗಳು ಮತ್ತು ಇತರೆ ಸಸ್ಯ ಪೋಷಕಾಂಶಗಳನ್ನು ಬಳಕೆಗೆ ಆರ್ಥಿಕ ಸಹಾಯವನ್ನು ಪ್ರತಿ ಹೆಕ್ಟೇರ್‌ಗೆ ರೂ.2500/* ಮೀರದಂತೆ ಒದಗಿಸುವುದು. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

**ಅಭಿಯಾನ ನಿರ್ವಹಣೆ:**

ಮಣ್ಣು ವಿಶ್ಲೇಷಣಾ ಫಲಿತಾಂಶಗಳನ್ನು ಪೋರ್ಟಲ್‌ನಲ್ಲಿ ನಮೂದಿಸಿ, ರಸಗೊಬ್ಬರ ಶಿಫಾರಸ್ಸುಗಳನ್ನು ನೀಡಿ ಮಣ್ಣು ಆರೋಗ್ಯ ಚೀಟಿಗಳನ್ನು ತಯಾರಿಸಲು ಕೇಂದ್ರ ಸರ್ಕಾರದ ಅನುಮತಿ ಅನ್ವಯ ಪ್ರತಿ ಶಿಫ್ಟ್‌ಗೆ ಒಬ್ಬರಂತೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಿಕೊಳ್ಳುವುದು.

## ಅನುಬಂಧ-1
## ಪೋಷಕಾಂಶಗಳ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ಸಹಾಯ

| ಕ್ರ. ಸಂ | ಚಟುವಟಿಕೆಗಳು / ಘಟಕಗಳು | ತಗಲುವ ವೆಚ್ಚ |
|---|---|---|
| 1 | ಜಿಪ್ಸಂ / ಪಾಸ್ಪೋ ಜಿಪ್ಸಂ/ ಬೆನ್ಟೋನೆಟ್ ಸಲ್ಫರ್ | ಪ್ರತಿ ಹೆಕ್ಟೇರ್ ರೂ.2500/- |
| 2 | ಲಘು ಪೋಷಕಾಂಶಗಳು | |
| 3 | ಎಲ್ಲಾ ಜೈವಿಕ ಗೊಬ್ಬರಗಳು | |
| 4 | ಸುಣ್ಣ / ಸುಣ್ಣದ ಸಾಮಾಗ್ರಿಗಳು | |
| | ಒಟ್ಟು | |

## ಅನುಬಂಧ-2

**ಸಾಮರ್ಥ್ಯವೃದ್ಧಿ-ರೈತರಿಗೆ ತರಬೇತಿ (ರೂ.ಗಳಲ್ಲಿ )**

| ಕ್ರ. ಸಂ | ಚಟುವಟಿಕೆಗಳು / ಘಟಕಗಳು | ತಗಲುವ ವೆಚ್ಚ | ಕ್ರ.ಸಂ |
|---|---|---|---|
| 1 | ತರಬೇತಿ ಸಾಮಾಗ್ರಿ / ಲೇಖನ ಸಾಮಾಗ್ರಿ / ಸ್ಥಳ / ದೃಶ್ಯಶ್ರವಣಸಾಧನಗಳು ಇತ್ಯಾಧಿ | ಪ್ರತಿ ತರಬೇತಿಗೆ ರೂ. 2500/- | 2500.00 |
| 2 | ವಾಸ್ತವ್ಯ / ಪ್ರಯಾಣ / ಸಾಗಾಣಿಕ ವೆಚ್ಚ ಇತ್ಯಾಧಿ | ಪ್ರತಿ ತರಬೇತಿಗೆ ರೂ. 4500/- | 4500.00 |
| 3 | ವಿಷಯ ತಜ್ಞರು / ವಿಜ್ಞಾನಿಗಳಿಗೆ ಗೌರವಧನ ಇತ್ಯಾಧಿ | ಪ್ರತಿ ಉಪನ್ಯಾಸಕ್ಕೆ ರೂ. 250 ರಂತೆ 2 ದಿನಗಳಿಗೆ 8 ಉಪನ್ಯಾಸಗಳು | 2000.00 |
| 4 | ರೈತರಿಗೆ 2 ಊಟ / ಉಪಹಾರ | ಪ್ರತಿ ದಿನಕ್ಕೆ ರೂ.250/- ರಂತೆ 30 ರೈತರಿಗೆ 2 ದಿವಸಕ್ಕೆ | 15000.00 |
| | **ಒಟ್ಟು** | | 24000.00 |

**B.ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ (ಲೆಕ್ಕ ಶೀರ್ಷಿಕೆ: 2402-00-101-0-03) ದಡಿ ಮಣ್ಣು ಆರೋಗ್ಯ ನಿರ್ವಹಣೆ ಕಾರ್ಯಕ್ರಮ.**

ಮಣ್ಣು ಆರೋಗ್ಯ ನಿರ್ವಹಣೆ ಕಾರ್ಯಕ್ರಮದಡಿ ಹೊಸ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ, ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ, ಹೊಸ ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆ, ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ ಬಲವರ್ಧನೆ, ಲಘು ಪೋಷಕಾಂಶಗಳ ವಿತರಣೆ ಮತ್ತು ಪ್ರೋತ್ಸಾಹ ಮುಂತಾದ ಘಟಕಗಳಿರುತ್ತವೆ.

**ಹೊಸ ಮಣ್ಣು ಪ್ರಯೋಗಾಲಯಗಳ ಸ್ಥಾಪನೆ**

ಮಣ್ಣು ಪರೀಕ್ಷಾ ಪ್ರಯೋಗಾಲಯಗಳು ವಿಶ್ಲೇಷಿಸುವ ಮಣ್ಣು ಮಾದರಿಗಳ ಫಲಿತಾಂಶವನ್ನು validate ಮಾಡಲು ಶೇ. 1 ರಷ್ಟು ಮಣ್ಣು ಮಾದರಿಗಳನ್ನು ವಿಶ್ಲೇಷಿಸಲು ಕೃಷಿ ವಿಶ್ವವಿದ್ಯಾಲಯಗಳಲ್ಲಿ ರೆಫರಲ್ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಗೆ, ಹೊಸ ಸ್ಥಾನಿಕ ಮತ್ತು ಸಂಚಾರಿ ಮಣ್ಣು ಪ್ರಯೋಗಾಲಯಗಳು ಹಾಗೂ ಮಿನಿಲ್ಯಾಬ್‌ಗಳನ್ನು ಸ್ಥಾಪಿಸಲು ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಕೃಷಿ ಸಂಬಂಧಿತ ಇಲಾಖೆಗಳಲ್ಲದೇ ಕೃಷಿ ವಿಸ್ತರಣೆಯಲ್ಲಿ ಭಾಗಿಯಾಗಿರುವ ರಸಗೊಬ್ಬರ ಕಂಪನಿಗಳು, ಅಗ್ರಿ ಕ್ಲಿನಿಕ್ಸ್, ಸರ್ಕಾರೇತರ ಸಂಸ್ಥೆಗಳು, ಸಹಕಾರ ಸಂಘಗಳು ಮತ್ತು ಖಾಸಗಿ ಉದ್ದಿಮೆದಾರರನ್ನು ಪ್ರೋತ್ಸಾಹಿಸುವುದು. ಹೊಸ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಗೆ ಯೋಜನಾ ವೆಚ್ಚದ ಶೇ.75 ಅಥವಾ ಗರಿಷ್ಠ 75.00 ಲಕ್ಷಗಳ ಅರ್ಥಿಕ ಸಹಾಯವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 60:40 ರ ಅನುಪಾತದಲ್ಲಿ ನೀಡಲಿವೆ. ಜಿಲ್ಲೆಗಳಲ್ಲಿ ಖಾಸಗಿ ವಲಯದವರಿಂದ ಶಿಫಾರಸ್ಸುಗಳಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳನ್ನು DLEC ಮೂಲಕ ಕೇಂದ್ರ ಕಛೇರಿಗೆ ಸಲ್ಲಿಸುವುದು.

**ಮಿನಿ ಲ್ಯಾಬ್‌ಗಳ ಸ್ಥಾಪನೆ**

ಮಿನಿ ಲ್ಯಾಬ್ ಸ್ಥಾಪನೆಗಾಗಿ ಕೇಂದ್ರದಿಂದÀ ಶೇ.60ರಷ್ಟು ಗರಿಷ್ಠ ರೂ.45,000 ಆರ್ಥಿಕ ಸಹಾಯ. ಕೃಷಿ ವಿಶ್ತರಣೆಯಲ್ಲಿ ತೊಡಗಿರುವಖಾಸಗಿ ಎಜನ್ಸಿಗಳಾದ ರಸಗೊಬ್ಬರ ಕಂಪನಿಗಳು,ಕೃಷಿ ಕ್ಲಿನಿಕ್‌ಗಳು,ಸರ್ಕಾರೇತರ ಸಂಶ್ಥೆಗಳು ಸಹಕಾರ ಸಂಘಗಳು ಮತ್ತು ಕೃಷಿ ಉದ್ದಿಮೆದಾರಿಗೆ ಮಿನಿ ಲ್ಯಾಬ್ ಸ್ಥಾಪನೆಗಾಗಿ ಕೇಂದ್ರದಿಂದÀ ಶೇ.60ರಷ್ಟು ಗರಿಷ್ಠ ರೂ.45,000 ಆರ್ಥಿಕ ಸಹಾಯ ನೀಡಲು ಅವಕಾಶವಿರುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು 60:40 ರ ಅನುಪಾತದಲ್ಲಿ ವೆಚ್ಚ ಭರಿಸುವುದು.

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಯ ಮಣ್ಣು ಆರೋಗ್ಯ ಘಟಕದ ಮಾರ್ಗಸೂಚಿಗಳನ್ವಯ ಮತ್ತು ಇಲಾಖೆಯಿಂದ ಆಗಿಂದಾಗ್ಗೆ ಹೊರಡಿಸಲಾಗುವ ಸೂಚನೆ ಹಾಗೂ ಸುತ್ತೋಲೆಗಳನ್ವಯ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

**ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ**

ಈಗಾಗಲೇ ಅಸ್ತಿತ್ವದಲ್ಲಿರುವ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆಗಾಗಿ ಕೃಷಿ ಇಲಾಖೆ/ /ಕೃಷಿ ವಿಶ್ವವಿದ್ಯಾಲಯಗಳ/ಕೃಷಿ ವಿಜ್ಞಾನ ಕೇಂದ್ರಗಳು/ಕೃಷಿ ಸಂಬಂಧಿತ ಇಲಾಖೆಗಳ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಿಗೆ ಕೇಂದ್ರದಿಂದ ಗರಿಷ್ಠ ರೂ. 45.00 ಲಕ್ಷಗಳ ಆರ್ಥಿಕ ಸಹಾಯ ನೀಡಲಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಶೇ. 60 :40 ರಷ್ಟು ವೆಚ್ಚ ಭರಿಸುವುದು.

**ಗ್ರಾಮಮಟ್ಟದಲ್ಲಿ ಮಣ್ಣು ಪರೀಕ್ಷಾ ಪ್ರಾಯೋಜನೆಗಳನ್ನು ಸ್ಥಾಪನೆ**

**1.ಪೀಠಿಕೆ:**

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿ ಮಣ್ಣು ಆರೋಗ್ಯ ನಿರ್ವಹಣೆ ಯೋಜನೆಯಡಿ ಗ್ರಾಮ ಮಟ್ಟದಲ್ಲಿ ಮಣ್ಣು ಪರೀಕ್ಷಾ ಪ್ರಾಯೋಜನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಪ್ರಾಯೋಜನೆಯ ಉದ್ದೇಶವು ಗ್ರಾಮೀಣ ಯುವಕರಿಗೆ ಉದ್ಯೋಗ ಸೃಷ್ಠಿ ಮತ್ತು ನಿಗಧಿತ ಸಮಯದಲ್ಲಿ ಮಣ್ಣು ಮಾದರಿಗಳ ವಿಶ್ಲೇಷಣೆ ಮಾಡುವುದಾಗಿರುತ್ತದೆ.

**2.ಉದ್ದೇಶಗಳು:**

1.ಗ್ರಾಮೀಣ ಯುವ ಜನತೆಗೆ ಉದ್ಯೋಗ ಸೃಷ್ಠಿ

2.ಮಣ್ಣು ಮಾದರಿಯ ವಿಶ್ಲೇಷಣೆಯನ್ನು ತ್ವರಿತಗೊಳಿಸುವುದು.

3.ಮಣ್ಣು ಮಾದರಿ ಸಂಗ್ರಹಣೆಯಿಂದ ಮಣ್ಣು ಆರೋಗ್ಯ ಚೀಟಿ ವಿತರಣೆಯಲ್ಲಿನ ವಿಳಂಬವನ್ನು ಕಡಿಮೆಗೊಳಿಸಿ ರೈತರಿಗೆ ಅನುಕೂಲತೆಯನ್ನು ಹೆಚ್ಚಿಸಲು ಏಕಗವಾಕ್ಷಿ ವಿಧಾನದ ಪರಿಚಯ.

4.ಮಣ್ಣು ಆರೋಗ್ಯ ಚೀಟಿ ಪೋರ್ಟಲ್ ಬಳಸಿ ರೈತರಿಗೆ ಮಣ್ಣು ಆರೋಗ್ಯ ಚೀಟಿಯ ಆನ್‌ಲೈನ್ delivery .

5.ರೈತರ ಮನೆ ಬಾಗಿಲಿಗೆ ಮಣ್ಣು ಪರೀಕೆಯ ಸೌಲಭ್ಯವನ್ನು ಒದಗಿಸುವುದು

**3.ಕಾರ್ಯವಿಧಾನ:**

ಈ ಮೇಲಿನ ಉದ್ದೇಶಗಳನ್ನು ಸಾಧಿಸಲು ಕೆಳಕಂಡ ಕ್ರಮಗಳನ್ನು ಅಳವಡಿಸಿಕೊಳ್ಳುವುದು.

i) ಪ್ರತಿ ಗ್ರಾಮದಲ್ಲಿಯೂ ಫಲಾನುಭವಿಯನ್ನು ಗುರುತಿಸುವುದು ಮತ್ತು ಮಣ್ಣು ಪರೀಕ್ಷೆಯ ಘಟಕವನ್ನು ಸ್ಥಾಪಿಸುವುದು.

ii) ಮಣ್ಣು ವಿಶ್ಲೇಷಣೆಯ ಪ್ರತಿಯು ಮಣ್ಣು ಮಾದರಿಯು ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ತಲುಪಿದ ಒಂದು ತಿಂಗಳೊಳಗೆ ಪೂರ್ಣಗೊಳಿಸುವುದು. ಮಾರ್ಚ್‌ನಿಂದ ಜೂನ್ ಮತ್ತು ಅಕ್ಟೋಬರ್‌ನಿಂದ ನವೆಂಬರ್ ವೇಳಪಟ್ಟಿ ಈ ಕೆಳಗಿನಂತೆ ಇರುತ್ತದೆ.

ಎ) ಮಣ್ಣು ಮಾದರಿ ಸಂಗ್ರಹಣೆ & ಪೋರ್ಟ್‌ಲ್‌ನಲ್ಲಿ ನೋಂದಣಿ – 1 ರಿಂದ 10 ದಿನಗಳು

ಬಿ) ಮಣ್ಣು ಮಾದರಿಗಳ ವಿಶ್ಲೇಷಣೆ : 11 – 20 ದಿನಗಳು

ಸಿ) ಶಿಫಾರಸ್ಸುಗಳನ್ನು ಪೋರ್ಟ್ ನಲ್ಲಿ ಅಪ್‌ಲೋಡ್ ಮಾಡುವುದು 21-25 ದಿನಗಳು

ಡಿ) ಮಣ್ಣು ಆರೋಗ್ಯ ಚೀಟಿ ಮುದ್ರಣ ಮತ್ತು ವಿತರಣೆ 26-30 ದಿನಗಳು

iii) ಮಣ್ಣು ಮಾದರಿ ಸಂಗ್ರಹಣೆ, ಪರೀಕ್ಷೆ ಮತ್ತು ರಸಗೊಬ್ಬರ ಶಿಫಾರಸ್ಸುಗಳನ್ನು ಮಧ್ಯಸ್ಥಗಾರರಲ್ಲಿ(Stake holders) ಉತ್ತೇಜಿಸಲು ಜಿಲ್ಲಾ ಮಟ್ಟದ ಪ್ರಯೋಗಾಲಯಗಳಲ್ಲಿ ತರಬೇತಿ.

iv) ಕೃಷಿ ಕ್ಲಿನಿಕ್ ಮತ್ತು ಕೃಷಿ ವ್ಯಾಪಾರ ಕೇಂದ್ರಗಳು(Agri Clinics & Agri Business Centres), ಕೃಷಿ ಉದ್ದಿಮೆದಾರರು, ಮಾಜಿ ಯೋಧರು,ಸ್ವಸಹಾಯ ಸಂಘಗಳು, ರೈತರ ಉತ್ಪಾದಕರ ಸಂಸ್ಥೆಗಳು (FPOs), ರೈತ ಉತ್ಪನ್ನ ಕಂಪನಿಗಳು, ರೈತರ ಜಂಟಿ ಜವಾಬ್ದಾರಿ ಗುಂಪುಗಳು(Farmer Joint Liability Groups), ರೈತರ ಸಹಕಾರ ಸಂಘಗಳು, PACs , ಪರಿಕರಗಳ ರಿಟೇಲ್ ಔಟ್‌ಲೆಟ್‌ಗಳು, ಪರಿಕರಗಳ ರಿಟೇಲ್‌ದಾರರು, ಶಾಲೆಗಳು / ಕಾಲೇಜುಗಳಿಗೆ ಆರ್ಥಿಕ ಸಹಾಯವನ್ನು ನೀಡುವುದು.

v) ಗ್ರಾಮ ಮಟ್ಟದಲ್ಲಿ ನೀರಾವರಿ ಪ್ರದೇಶಗಳಲ್ಲಿ 2.5 ಹೆ ಗ್ರಿಡ್‌ಗಳಲ್ಲಿ ಹಾಗೂ ಮಳೆಯಾಶ್ರಿತ ಪ್ರದೇಶಗಳಲ್ಲಿ ಪ್ರತಿ 10.00 ಹೆ ಪ್ರದೇಶಗಳಿಗೆ ಒಂದು ಮಣ್ಣು ಮಾದರಿಯನ್ನು ಸಂಗ್ರಹಿಸುವುದು.

vi) ಮಣ್ಣು ಮಾದರಿಗಳನ್ನು standard procedures ಗಳನ್ವಯ ವಿವಿಧ ಅಂಶಗಳಾದ ರಸಸಾರ, ಲವಣಾಂಶ, ಸಾವಯವ ಇಂಗಾಲ ಲಭ್ಯವಿರುವ ಎನ್.ಪಿ.ಕೆ, ಗಂಧಕ ಮತ್ತು

ಲಘು ಪೋಷಕಾಂಶಗಳಾದ ಸತು, ಬೋರಾನ್, ಕಬ್ಬಿಣ, ಮ್ಯಾಂಗನೀಸ್, ತಾಮ್ರಗಳನ್ನು ವಿಶ್ಲೇಷಿಸುವುದು.

vii) ಮಣ್ಣು ಮಾದರಿ ಸಮಗ್ರಹಣೆ, ವಿಶ್ಲೇಷಣೆ ಮಣ್ಣು ಆರೋಗ್ಯ ಚೀಟಿ ಮುದ್ರಣ ಮತ್ತು ವಿತರಣೆಗೆ ಆರ್ಥಿಕ ಸಹಾಯವನ್ನು ಒದಗಿಸುವುದು.

**4. ಕಾರ್ಯಕ್ರಮ ರಚನೆ :**

ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಯೋಜನೆಯಲ್ಲಿರುವ ರಾಷ್ಟ್ರಮಟ್ಟದ ಸಲಹಾ ಸಮಿತಿ ಕಾರ್ಯಕಾರಿ ಸಮಿತಿ ಹಾಗೂ ರಾಜ್ಯಮಟ್ಟದ ಸಮಿತಿಗಳು ಈ ಕಾರ್ಯಕ್ರಮಕ್ಕೂ ಅನ್ವಯಿಸುತ್ತವೆ.

ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯು ಈ ಕೆಳಕಂಡಂತಿರುತ್ತದೆ.

| | |
|---|---|
| ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| ಜಂಟಿ ಕೃಷಿ ನಿರ್ದೇಶಕರು/ ಉಪ ಕೃಷಿ ನಿರ್ದೇಶಕರು | ಸದಸ್ಯರು |
| ಜಿಲ್ಲಾ ಮಟ್ಟದ ತೋಟಗಾರಿಕೆ ಅಧಿಕಾರಿ | ಸದಸ್ಯರು |
| ಕೃಷಿ ವಿಶ್ವವಿದ್ಯಾನಿಲಯ/ ಕೃಷಿ ವಿಜ್ಞಾನ ಕೇಂದ್ರಗಳ ಪ್ರತಿನಿಧಿಗಳು | ಸದಸ್ಯರು |

ಕಾರ್ಯಕ್ರಮದ ಉದ್ದೇಶಗಳನ್ನು ಸಾಧಿಸುವುದು, ಯೋಜನೆ ಸಿದ್ಧಪಡಿಸುವುದು, ಅನುಷ್ಠಾನಗೊಳಿಸುವುದು ಹಾಗೂ ಉಸ್ತುವಾರಿಯು ಆಐಇಅ ಯ ಜವಾಬ್ದಾರಿಯಾಗಿರುತ್ತದೆ. ಜಂಟಿ ಕೃಷಿ ನಿರ್ದೇಶಕರ ಕಛೇರಿ ಜಿಲ್ಲಾ ನೋಡಲ್ ಏಜನ್ಸಿಯಾಗಿ ಕೆಳಕಂಡ ಕಾರ್ಯಕ್ರಮಗಳನ್ನು ನಿರ್ವಹಿಸಲಿದೆ.

1. ಕ್ಲಿನಿಕ್ ಮತ್ತು ಕೃಷಿ ವ್ಯಪಾರ ಕೇಂದ್ರಗಳು(Agri Clinics & Agri Business Centres), ಕೃಷಿ ಉದ್ದಿಮೆದಾರರು, ಮಾಜಿ ಯೋಧರು,ಸ್ವಸಹಾಯ ಸಂಘಗಳು, ರೈತರ ಉತ್ಪಾದಕರ ಸಂಸ್ಥೆಗಳು (FPOs), ರೈತ ಉತ್ಪನ್ನ ಕಂಪನಿಗಳು, ರೈತರ ಜಂಟಿ ಜವಾಬ್ದಾರಿ ಗುಂಪುಗಳು(Farmer Joint Liability Groups), ರೈತರ ಸಹಕಾರ ಸಂಘಗಳು, PACs , ಪರಿಕರಗಳ ರಿಟೇಲ್ ಔಟ್‌ಲೆಟ್‌ಗಳು, ಪರಿಕರಗಳ ರಿಟೇಲ್‌ದಾರರು, ಶಾಲೆಗಳು / ಕಾಲೇಜುಗಳಿಗೆ ಆರ್ಥಿಕ ಸಹಾಯ ಉಪಯೋಗವನ್ನು ಪಡೆಯಲು ಕಾಲಮಿತಿ ಮತ್ತು ಪಾರದರ್ಶಕತೆಯಿಂದ ಆಯ್ಕೆ ಮಾಡುವುದು.2020-21ನೇ ಸಾಲಿನಲ್ಲಿ ಮಹಿಳಾ ಸ್ವಸಹಾಯ ಗುಂಪುಗಳನ್ನು ಆಧ್ಯತೆ ಮೇಲೆ ಪರಿಗಣಿಸುವುದು. ಗ್ರಾಮೀಣಾಅಭಿವೃದ್ಧಿ ಇಲಾಖೆಯ ಸಹಕಾರದೊಂದಿಗೆ ಮಹಿಳಾ ಸ್ವಸಹಾಯ ಗುಂಪುಗಳನ್ನು ಆಯ್ಕೆಮಾಡುವುದು.

2.ವಿಶೇಷವಾಗಿ ಸಂಸದ ಆದರ್ಶ ಗ್ರಾಮ ಯೋಜನೆ (SAGY) ಯ ಗ್ರಾಮಗಳಲ್ಲಿ ಪಾರದರ್ಶಕತೆ ಮತ್ತು ಕಾಲಮಿತಿಯಲ್ಲಿ ಆಯ್ಕೆ ಮಾಡುವುದು.

3.ಮಣ್ಣು ಪರೀಕ್ಷಾ ಘಟಕಗಳ ಸ್ಥಾಪನೆಗೆ ಸ್ಥಳ ಗುರುತಿಸುವುದು.

4.ಉಪಕರಣ/ಪರಿಕರಗಳನ್ನು ಖರೀದಿಯ ಬಗ್ಗೆ ದಾಖಲಾತಿಗಳನ್ನು ನಿಯಾಮವಳಿಗಳ ಪ್ರಕಾರ ಕೃಷಿ ನಿರ್ದೇಶಕರಿಗೆ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಸಲ್ಲಿಸುವುದು

5. ಫಲಾನುಭವಿಗಳಿಗೆ ಮಿನಿ ಲ್ಯಾಬ್ ಗಳ ಸರಬರಾಜುದಾರರಿಂದ ಮಣ್ಣು ಮಾದರಿ ವಿಶ್ಲೇಷಣೆ ಮತ್ತು ನೀರು ಮಾದರಿ ವಿಶ್ಲೇಷಣೆಯ ತರಬೇತಿ ನೀಡಲಾಗುತ್ತದೆ. ಸರ್ಕಾರದ ಮಣ್ಣು ಪರೀಕ್ಷಾ ಪ್ರಯೋಗಾಲಯ/ ಕೃಷಿ ವಿಜ್ಞಾನ ಕೇಂದ್ರ/ ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಣ್ಣು ಮಾದರಿ ಸಂಗ್ರಹಣೆ, ನೋಂದಣಿ ಮತ್ತು ಮಣ್ಣು ಆರೋಗ್ಯ ಚೀಟಿಗಳ ತಯಾರಿಕೆಯ ಬಗ್ಗೆ ಫಲಾನುಭವಿಗಳಿಗೆ ತರಬೇತಿಯನ್ನು ನೀಡಲಾಗುತ್ತದೆ.

6.ಅನುಮೋದನೆಗೊಂಡ ಕಾರ್ಯಕ್ರಮಗಳ ಪಟ್ಟಿ, ಫಲಾನುಭವಿಗಳ ಹೆಸರು ವೆಚ್ಚದ ವಿವರ ಇತ್ಯಾದಿಗಳನ್ನು ಮಣ್ಣು ಆರೋಗ್ಯ ಚೀಟಿ ಪೋರ್ಟಲ್‌ನಲ್ಲಿ ,ಪಂಚಾಯತ್ ಭವನ, ಗ್ರಾಮಗಳ / cluster ಮಟ್ಟದಲ್ಲಿ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದು, ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಸಂಬಂಧಿಸಿದ ಗ್ರಾಮ ಸಭೆಗಳಲ್ಲಿ ಇವುಗಳನ್ನು ವಾರ್ಷಿಕ ಅನುಮೋದನೆಗೆ ಮತ್ತು ಸಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸುವುದು.

7.ಗ್ರಾಮಮಟ್ಟದ ಮಣ್ಣು ಪರೀಕ್ಷ ಘಟಕದ ವ್ಯಾಪ್ತಿಯನ್ನು ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯು ನಿರ್ಧರಿಸುತ್ತದೆ.

8. ಗುಚ್ಛ ಗ್ರಾಮಗಳಾಗಿದ್ದಲ್ಲಿ ಮಣ್ಣು ಪರೀಕ್ಷಾ ಘಟಕಗಳ ಸ್ಥಾಪಿಸಬೇಕಿರುವ ಗ್ರಾಮವನ್ನು ಗ್ರಾಮಗಳ ಗ್ರಾಮಸಭೆಗಳು ನಿರ್ಧರಿಸುತ್ತದೆ.

9.ಫಲಾನುಭವಿಗಳು ವಿಶೇಷಿಸುವ ಮಾದರಿಗಳಲ್ಲಿ ಶೇ.1.00ರಷ್ಟು ಮಾದರಿಗಳನ್ನು ಆ ಪ್ರದೇಶದ ಅಥವಾ ರಾಜ್ಯದ ಯಾವುದಾದರೂ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮರುವಿಶ್ಲೇಷಿಸಲಾಗುತ್ತದೆ.

10. ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯು ಅರ್ಜಿಗಳನ್ನು ಸಲ್ಲಿಸಿದ 30 ದಿನಗಳೊಳಗೆ ಫಲಾನುಭವಿಗಳನ್ನು ಆಯ್ಕೆಮಾಡಿ ಅನುಮೋದಿಸುವುದು.

i) ಕೃಷಿ ಕ್ಲಿನಿಕ್ ಮತ್ತು ಕೃಷಿ ವ್ಯಾಪಾರ ಕೇಂದ್ರಗಳು(Agri Clinics & Agri Business Centres), ಕೃಷಿ ಉದ್ದಿಮೆದಾರರು, ಮಾಜಿ ಯೋಧರು,ಸ್ವಸಹಾಯ ಸಂಘಗಳು, ರೈತರ ಉತ್ಪಾದಕರ ಸಂಸ್ಥೆಗಳು (FPOs), ರೈತ ಉತ್ಪನ್ನ ಕಂಪನಿಗಳು, ರೈತರ ಜಂಟಿ ಜವಾಬ್ದಾರಿ ಗುಂಪುಗಳು(Farmer Joint Liability Groups), ರೈತರ ಸಹಕಾರ ಸಂಘಗಳು,

PACs , ಪರಿಕರಗಳ ರಿಟೇಲ್ ಔಟ್‌ಲೆಟ್‌ಗಳು, ಪರಿಕರಗಳ ರಿಟೇಲ್‌ದಾರರು ಶಾಲೆಗಳು / ಕಾಲೇಜುಗಳನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡುವುದು.

ii) ಫಲಾನುಭವಿಗಳು ಕನಿಷ್ಠ ಪಕ್ಷ ಮಟ್ರಿಕ್ ನಲ್ಲಿ 2ನೇ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು. ವಿಜ್ಞಾನ ಮತ್ತು ಅomಠuಣeಡಿ ಜ್ಞಾನ ಹೊಂದಿರಬೇಕು.

iii) ಅರ್ಜಿದಾರರು ಅರ್ಜಿಗಳನ್ನು ಅಗತ್ಯ ಶೈಕ್ಷಣಿಕ ಅರ್ಹತೆ , PAN ಸಂಖ್ಯೆ ಮತ್ತು ಆಧಾರ್ ಸಂಖ್ಯೆಯ ದಾಖಲಾತಿಗಳನ್ನು ಜಂಟಿ ಕೃಷಿ ನಿರ್ದೇಸಕರುಗಳಿಗೆ ಸಲ್ಲಿಸುವುದು.

iv)ಮಣ್ಣು ಮಾದರಿ ಸಂಗ್ರಹಣೆ, ವಿಶ್ಲೇಷಣೆ ಮತ್ತು ಮಣ್ಣು ಆರೋಗ್ಯ ಚೀಟಿಗಳನ್ನು ರೈತರಿಗೆ ವಿತರಿಸುವುದ್ದಲ್ಲದೇ ಫಲಾನುಭವಿಗಳು ಮಣ್ಣು ಮಾದರಿಗಳ ವಿಶ್ಲೇಷಣೆಯ ಫಲಿತಾಂಶಗಳನ್ನು ಮತ್ತು ಮಣ್ಣು ಮಾದರಿ/ರೈತರ ವಿವರಗಳನ್ನು ಎಕ್ಸೆಲ್ ಶೀಟ್ ಗಳಲ್ಲಿ ಅಧಿಕಾರಿಗಳಿಗೆ ಸಲ್ಲಿಸುವುದು.

v) ಅರ್ಜಿದಾರರು/ಫಲಾನುಭವಿಗಳು ಗ್ರಾಮಮಟ್ಟದಲ್ಲಿ ಮಣ್ಣು ಪರೀಕ್ಷಾ ಘಟಕಗಳನ್ನು ಸ್ಥಾಪಿಸಲು ಸ್ವಂತ ಕಟ್ಟಡ ಅಥವಾ ಬಾಡಿಗೆ ಕಟ್ಟಡವನ್ನು ಹೊಂದಿರಬೇಕು. ಕನಿಷ್ಠ 4 ವರ್ಷಗಳ ಅವಧಿಗೆ ಬಾಡಿಗೆ ಕರಾರು ಪತ್ರವನ್ನು ಹೊಂದಿರಬೇಕು.

### 6.ಆರ್ಥಿಕ ಸಹಾಯ:

ಗ್ರಾಮಮಟ್ಟದ ಮಣ್ಣು ಪರೀಕ್ಷಾ ಘಟಕಗಳನ್ನು ಸ್ಥಾಪಿಸಲು ಗರಿಷ್ಠ ಯೋಜನಾ ವೆಚ್ಚ ರೂ.5.00 ಲಕ್ಷಗಳು. ಫಲಾನುಭವಿಗಳಿಗೆ ಯೋಜನಾ ವೆಚ್ಚದ ಶೇ.75.00ರಷ್ಟು ಆರ್ಥಿಕ ಸಹಾಯವನ್ನು ಸಬ್ಸಿಡಿಯನ್ನಾಗಿ ನೀಡಲಾಗುತ್ತದೆ. ಈ ಸಬ್ಸಿಡಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ 60:40ರ ಅನುಪಾತದಲ್ಲಿ ಭರಿಸಲಿವೆ.ಉಳಿದ ಶೇ25.00ರಷ್ಟು ಯೋಜನಾ ವೆಚ್ಚವನ್ನು ಫಲಾನುಭವಿಗಳೆ ಭರಿಸುವುದು.

### 7.ಮಿನಿ ಲ್ಯಾಬ್‌ಗಳ ಸ್ಥಾಪನೆಗೆ ಅನುದಾನದ ಹರಿವಿನ ವಿಧಾನ:

ಗ್ರಾಮಮಟ್ಟದ ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪನೆಗಾಗಿ ಪ್ರಾಸ್ತವನೆಗಳನ್ನು ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿಯಿಂದ ಕೃಷಿ ನಿರ್ದೇಶಕರಿಗೆ ಸಲ್ಲಿಸಲಾಗುವುದು. ಕೃಷಿ ನಿರ್ದೇಶಕರಿಂದ INM ವಿಭಾಗ, ಕೃಷಿ ಸಹಕಾರ ಮತ್ತು ರೈತರ ಕಲ್ಯಾಣ ಇಲಾಖೆ , ಭಾರತ ಸರ್ಕಾರ ಇಲ್ಲಿಗೆ ಅಂತಿಮ ಆಯ್ಕೆಗೆ ಸಲ್ಲಿಸಲಾಗುವುದು. ಕೃಷಿ ಸಹಕಾರ ಮತ್ತು ರೈತರ ಕಲ್ಯಾಣ ಇಲಾಖೆಯ ಕಾರ್ಯಕಾರಿ ಸಮಿತಿಯು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿ, ಕೇಂದ್ರ ಪಾಲಿನ ಅನುದಾನವನ್ನು ಬಿಡುಗಡೆ ಮಾಡುತ್ತದೆ.

**8.ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ**

ರಾಜ್ಯ ಸರ್ಕಾರ ಅಥವಾ ನಿಗಧಿಯಾದ ಅನುಷ್ಠಾನ ಸಂಸ್ಥೆಗಳು ಸಾಧ್ಯವಾದಷ್ಟು ಪಂಚಾಯತ್‌ರಾಜ್ ಸಂಸ್ಥೆಗಳು ಕಾರ್ಯಕ್ರಮದ ಅನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಳ್ಳುವುದು.

**9.ಉಸ್ತುವಾರಿ:**

i) ಕಾರ್ಯಕ್ರಮದ ಅನುಷ್ಠಾನಕ್ಕೆ ಗುರಿಗಳ ನಿಗಧಿ, ವೇಳಾಪಟ್ಟಿ ನಿಗಧಿಪಡಿಸಿರುವುದರಿಂದ ಹಾಗೂ ಸದರಿಯವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳ್ಳುವುದರಿಂದ ಜಂಟಿ ಕೃಷಿ ನಿರ್ದೇಶಕರು ಕಾರ್ಯಕ್ರಮದ ಉಸ್ತುವಾರಿಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**10.ನಿರೀಕ್ಷಿತ ಪರಿಣಾಮ:**

(i) ಸಮತೋಲಿತ ಮತ್ತು ವಿವೇಚನಾಯುಕ್ತ ಸಸ್ಯ ಪೋಷಕಾಂಶಗಳ ಬಳಕೆಯನ್ನು ಪ್ರೋತ್ಸಾಹಿಸುವುದು.

(ii) ಸಾವಯವ ಮೂಲದ ಸಸ್ಯ ಪೋಷಕಾಂಶಗಳಾದ ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಎರೆಹುಳು ಗೊಬ್ಬರ ನಿಧಾನಗತಿಯ ಬಿಡುಗಡೆಯಾಗುವ ಸಾರಜನಕ ರಸಗೊಬ್ಬರಗಳಾದ ಬೇವು ಲೇಪಿತ / ಗಂಧಕ ಲೇಪಿತ ಯೂರಿಯಾಗಳ ಬೇಡಿಕೆ ಹೆಚ್ಚಾಲಿದ್ದು, ಇದರಿಂದಾಗಿ ಮಣ್ಣಿನ ಫಲವತ್ತತೆ ಹಾಗೂ ಪೋಷಕಾಂಶಗಳ ಬಳಕೆ ಪ್ರಮಾಣದಲ್ಲಿ ಸುಧಾರಣೆಯಾಗಲಿದೆ.

**11.ಫಲಾನುಭವಿಗಳಿಗೆ ತರಬೇತಿ:**

ಮಣ್ಣಿನ ಫಲವತ್ತತೆ ನಿರ್ವಹಣೆಯಲ್ಲಿ ಮಣ್ಣು ಪರೀಕ್ಷೆಯ ಮಹತ್ವ, ಮಣ್ಣು ಸಂಗ್ರಹಣೆ ವಿಧಾನ ಪರೀಕ್ಷಾ ಪ್ರೋಟೋಕಾಲ್, ಮಣ್ಣು ಪರೀಕ್ಷಾ ಫಲಿತಾಂಶಗಳ ವ್ಯಖ್ಯಾನ, ಪೋಷಕಾಂಶಗಳ ಶಿಫಾರಸ್ಸು, ಬೆಳೆ ಪದ್ಧತಿಯಾಧರಿತ ಪೋಷಕಾಂಶಗಳ ನಿರ್ವಹಣೆ, ಇಳುವರಿ ಮತ್ತು ಅದರ ಗುಣಮಟ್ಟದಲ್ಲಿ ಸಮತೋlಲಿತ ಪೋಷಕಾಂಶಗಳ ಮಹತ್ವ ಮತ್ತು ಮಣ್ಣು ಆರೋಗ್ಯ ನಿರ್ವಹಣೆ ಇತ್ಯಾಧಿ ಕುರಿತಂತೆ ಫಲಾನುಭವಿಗಳಿಗೆ ತರಬೇತಿ ನೀಡುವುದು.

**12. ಗ್ರಾಮಮಟ್ಟದಲ್ಲಿ ಮಣ್ಣು ಪರೀಕ್ಷೆ ಘಟಕಗಳ ಸ್ಥಾಪನೆಗಾಗಿ (3000 ಮಾದರಿ/ವರ್ಷ) ಘಟಕವಾರು ಅನುದಾನದ ವಿವರ:**

| ವಿಷಯ | ವಿವರ | ದರ |
|---|---|---|
| ಉಪಕರಣ ಯಂತ್ರೋಪಕರಣ ರಸಾಯನಿಕ, ಗಾಜಿನ ಸಾಮಗ್ರಿ ಇತರೆ ಪ್ರಯೋಗಾಲಯ ವಸ್ತುಗಳ ಖರೀದಿಗೆ | 1. Minilab with accessories– 1.00<br>2. Glasswares – 0.25<br>3. Electronic balance – 0.25<br>4. Analytical balance – 0.15<br>5. Drying oven – 0.35<br>6. Distillation unit,seiving system / electric /water filters etc., – 0.50 | ರೂ. 2.50 ಲಕ್ಷ |
| ಐಟಿ ಉಪಕರಣಗಳ ಖರೀದಿ | Computer, printers, scanner handheld drive | ರೂ. 1.00 ಲಕ್ಷ |
| Contingency expenditure (ಸಾಧಿಲ್ವಾರು ವೆಚ್ಚ) | Electricity &water connectivity & supplybills- 0.30<br>Broad band & telephone charges-0.40<br>Stationary- 0.50<br>Annual maintenance cost-0.30 | ರೂ. 1.50 ಲಕ್ಷ |
| ಒಟ್ಟು | | 5.00 ಲಕ್ಷ |

13. ಮಣ್ಣು ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆಗಾಗಿ ವೆಚ್ಚಗಳು ಅನ್ವಯಿಸುತ್ತವೆ. ಮಣ್ಣು ಮಾದರಿ ಸಂಗ್ರಹಣೆ, ವಿಶ್ಲೇಷಣೆ, ಮಣ್ಣು ಆರೋಗ್ಯ ಚೀಟಿ ತಯಾರಿಕೆ ಮತ್ತು ವಿತರಣೆಗೆ ಒಟ್ಟು ರೂ. 300/- ಒಂದು ಮಣ್ಣು ಮಾದರಿಗೆ.

14. ವಿಶ್ಲೇಷಣಾ ವೆಚ್ಚ ಪಾವತಿಗಾಗಿ ಅನುಮೋದನೆ ಮತ್ತು ಬಿಡುಗಡೆ

a) ಫಲಾನುಭವಿಗಳಿಗೆ ಎರಡು ಕಂತುಗಳಲ್ಲಿ ಅನುದಾನವನ್ನು ಪಾವತಿಸುವುದು. ಶೇ. 50ರಷ್ಟು ಪೋರ್ಟ್‌ಲ್‌ನಲ್ಲಿ ಮಾದರಿ ನೋಂದಣಿ ನಂತರ ಹಾಗೂ ಉಳಿದ ಶೇ. 50ರಷ್ಟು ಮಣ್ಣು ಆರೋಗ್ಯ ಚೀಟಿ ವಿತರಣೆಯ ನಂತರ

b) ಫಲಾನುಭವಿಯ ಬ್ಯಾಂಕ್ ಖಾತೆಯು ಮಣ್ಣು ಆರೋಗ್ಯ ಚೀಟಿ ಪೋರ್ಟ್‌ಲ್‌ಗೆ ಲಿಂಕ್ ಆಗಿರಬೇಕು.

c) ಮಣ್ಣು ಮಾದರಿಗಳನ್ನು ರಾಜ್ಯ ಸರ್ಕಾರವು ಒದಗಿಸಿದಲ್ಲಿ ಅದಕ್ಕೆ ತಕ್ಕಂತೆ ಪಾವತಿಗಳನ್ನು ಕಟಾಯಿಸಲಾಗುವುದು.

**ಲಘುಪೋಷಕಾಂಶಗಳ ಪ್ರೋತ್ಸಾಹ ಮತ್ತು ವಿತರಣೆ:**

ಮಣ್ಣಿನಲ್ಲಿರುವ ಲಘು ಪೋಷಕಾಂಶಗಳ ಕೊರತೆ ನೀಗಿಸಲು ಲಘುಪೋಷಕಾಂಶಗಳ ಬಳಕೆಯನ್ನು ಪ್ರೋತ್ಸಾಹಿಸಲು ಸತು, ಕಬ್ಬಿಣ,ಮ್ಯಾಂಗನೀಸ್, ಬೋರಾನ್ ಹಾಗೂ ಇತರೆ ಲಘುಪೋಷಕಾಂಶಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಗರಿಷ್ಠ ರೂ. 500 ಪ್ರತಿ ಹೆ. ವಿತರಣೆ ಮಾಡುವುದು.

ಕೇಂದ್ರ ಸರ್ಕಾರದ ಅನುಮೋದಿತ ಕಾರ್ಯಯೋಜನೆಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

# XIX "ಕೃಷಿ ಮೂಲಭೂತ ಸೌಕರ್ಯ"

## 1.ಪ್ರಧಾನ ಕಾಮಗಾರಿಗಳು. ಲೆಕ್ಕ ಶೀರ್ಷಿಕೆ 4401-00-001-1-01 ಯೋಜನೆ ಉಪ ಶೀರ್ಷಿಕೆ 139

2020-21 ನೇ ಸಾಲಿನಲ್ಲಿ ಮೇಲಿನ ಲೆಕ್ಕ ಶೀರ್ಷಿಕೆಯಡಿ ರೂ.200.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಈ ಯೋಜನೆಯಡಿ ಸ್ವಂತ ಕಟ್ಟಡ ಹೊಂದಿರದೇ ಇರುವ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಉಪ ಕೃಷಿ ನಿರ್ದೇಶಕರ ಕಛೇರಿ-1 ಮತ್ತು 2, ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ರೈತ ಸಂಪರ್ಕ ಕೇಂದ್ರಗಳ (RIDF ಯೋಜನೆ ಹೊರತುಪಡಿಸಿದ) ನೂತನ ಕಟ್ಟಡಗಳನ್ನು ನಿರ್ಮಿಸಲು, ಸಂತ ಕಟ್ಟಡಗಳನ್ನು ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಆವಣದಲ್ಲಿ ಗೋದಾಮು ನಿರ್ಮಾಣ ಹಾಗೂ ಉಚಿತ ನಿವೇಶನಗಳು ಲಭ್ಯವಿಲ್ಲದ ಸ್ಥಳಗಳಲ್ಲಿ ಇಲಾಖೆಯ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ನಿವೇಶನಗಳ ಖರೀದಿಗೆ ಮೇಲಿನ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗುವ ಅನುದಾನವನ್ನು ಬಳಸಲಾಗುವುದು.

### ನೂತನ ಕಟ್ಟಡ ನಿರ್ಮಾಣಕ್ಕಾಗಿ ಮಾರ್ಗಸೂಚಿಗಳು

1. ನೂತನ ಕಟ್ಟಡ ನಿರ್ಮಾಣಕ್ಕೆ ನಿವೇಶನವು ಲಭ್ಯವಿರಬೇಕು ಹಾಗೂ ನಿವೇಶನವು ಇಲಾಖೆಯ ಕಛೇರಿಯ ಮುಖ್ಯಸ್ಥರ ಹೆಸರಿನಲ್ಲಿರಬೇಕು ಮತ್ತು ಸುಪರ್ದಿನಲ್ಲಿರಬೇಕು.

2. ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ನಿವೇಶನದ ದಾಖಲೆಗಳ ಪ್ರತಿಗಳು, ವಿವರವಾದ ಅಂದಾಜು ಪಟ್ಟಿ ಹಾಗೂ ಕಟ್ಟಡದ ನಕ್ಷೆಯೊಂದಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಅನುದಾನ ಬಿಡುಗಡೆಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಆರ್ಥಿಕ ಅಧಿಕಾರ ವ್ಯಾಪ್ತಿ ಮೀರಿದ್ದಲ್ಲಿ.)

3. ನೂತನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ಅಥವಾ ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ ಮೂಲಕವೇ ಕೈಗೊಳ್ಳುವುದು.

4. ಗೋದಾಮು ನಿರ್ಮಾಣ ಕಾಮಗಾರಿಯನ್ನು ಸರ್ಕಾರವು ಅನುಮತಿಸಿದ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವುದು.

5. ಉಚಿತ ನಿವೇಶನ ಲಭ್ಯವಿಲ್ಲದಿದ್ದ ಕಡೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ/ ಸರ್ಕಾರದ ಅಂಗ ಸಂಸ್ಥೆಗಳ ಮೂಲಕ/ ಖಾಸಗಿಯವರಿಂದ ನಿವೇಶನ ಖರೀದಿಸಲು ನಿಯಮಾನುಸಾರ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿಯ ನಂತರ ನಿವೇಶನ ಖರೀದಿಸಲು ಕ್ರಮ ವಹಿಸುವುದು.

6. ಹೊಸ ಕಟ್ಟಡಗಳ ನಿರ್ಮಾಣಕ್ಕೆ ವಿವರವಾದ ಮಾಹಿತಿಗಳೊಂದಿಗೆ ಶೀಘ್ರವಾಗಿ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

## 2. ಲೆಕ್ಕ ಶೀರ್ಷಿಕೆ 4401-00-001-1-01 ಯೋಜನೆ "ಕೃಷಿ ಮೂಲಭೂತ ಸೌಕರ್ಯ"

### ಉಪ ಶೀರ್ಷಿಕೆ 436 ಬಂಡವಾಳ ವೆಚ್ಚ (NABARD WORKS)

2020-21 ನೇ ಸಾಲಿನಲ್ಲಿ ಮೇಲಿನ ಲೆಕ್ಕ ಶೀರ್ಷಿಕೆಯಡಿ ರೂ.648.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

RIDF 18 19 & 20 ಯೋಜನೆಯಡಿ ರಾಜ್ಯದಲ್ಲಿ ಒಟ್ಟು 133 ರೈತ ಸಂಪರ್ಕ ಕೇಂದ್ರಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. RIDF 18 ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು M/s KRIDL ಸಂಸ್ಥೆಗೆ ವಹಿಸಲಾಗಿರುತ್ತದೆ.

ನಾಲ್ಕು ರೈತ ಸಂಪರ್ಕ ಕೇಂದ್ರ ಕಟ್ಟಡ ಕಾಮಗಾರಿಗಳನ್ನು ಹೊರತು ಪಡಿಸಿ RIDF 19 ಮತ್ತು 20 ರ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಗೆ ವಹಿಸಲಾಗಿರುತ್ತದೆ.

ಪ್ರಸ್ತುತ 132 ರೈತ ಸಂಪರ್ಕ ಕೇಂದ್ರ ಕಟ್ಟಡಗಳ ನಿಮಾ ಣ ಕಾಮಗಾರಿ ಪೂರ್ಣಗೊಂಡಿರುತ್ತದೆ. 01 ರೈತ ಸಂಪರ್ಕ ಕೇಂದ್ರ ಕಟ್ಟಡದ ನಿರ್ಮಾಣ ಪ್ರಗತಿ ಹಂತದಲ್ಲಿರುತ್ತದೆ.

ಆರ್.ಐ.ಡಿ.ಎಫ್-23 ರ ಯೋಜನೆಯಡಿ 85 ರೈತ ಸಂಪರ್ಕ ಕೇಂದ್ರ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಸರ್ಕಾರದ ಆದೇಶದನ್ವಯ KRIDL ಸಂಸ್ಥೆಗೆ ವಹಿಸಲಾಗಿರುತ್ತದೆ. (ಒಂದು ಕಾಮಗಾರಿಯನ್ನು ಹೊರತುಪಡಿಸಿ ಪಂ.ರಾ.ಇ) ಕಾಮಗಾರಿಗಳ ಪ್ರಗತಿ ವಿವಿಧ ಹಂತದಲ್ಲಿರುತ್ತದೆ.

ಮೇಲಿನ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗುವ ಅನುದಾನವನ್ನು ಆರ್.ಐ.ಡಿ.ಎಫ್-23 ರ ಯೋಜನೆಯಡಿ ನಿರ್ಮಾಣ ಹಂತದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

ಸೂಚನೆ: ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ನಿಯಮಿತವಾಗಿ ತಮ್ಮ ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ರೈತ ಸಂಪರ್ಕ ಕೇಂದ್ರಗಳ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸುವುದು ಹಾಗೂ ಪ್ರತಿ ಮಾಹೆಯ 5 ನೇ ತಾರೀಖಿನೊಳಗೆ ಕಾಮಗಾರಿ ಅನುಷ್ಠಾನ ಸಂಸ್ಥೆಯಿಂದ ಪಡೆದು ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಕೇಂದ್ರ ಕಛೇರಿಯ ಇಂಜನಿಯರಿಂಗ್ ವಿಭಾಗಕ್ಕೆ ಸಲ್ಲಿಸುವುದು e-mail:agrieng@nic.in

ಸೂಚನೆ: ಜಿಲ್ಲಾ ಜಂಟಿ ನಿರ್ದೇಶಕರುಗಳು ರೈತ ಸಂಪರ್ಕ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲು ತಮ್ಮ ಜಿಲ್ಲೆಗಳಲ್ಲಿ ನಿವೇಶನ ಲಭ್ಯತೆಯ ಬಗ್ಗೆ ಈ ಕೆಳಕಂಡ ನಮೂನೆಯಲ್ಲಿ ಕೇಂದ್ರ ಕಛೇರಿಯ ಇಂಜಿನೀಯರಿಂಗ್ ವಿಭಾಗಕ್ಕೆ ಮಾಹಿತಿಯನ್ನು ಸಲ್ಲಿಸುವುದು. e-mail:agrieng@nic.in

# ನಮೂನೆ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಹೋಬಳಿ | ರೈತ ಸಂಪರ್ಕ ಕೇಂದ್ರ ನಿರ್ಮಾಣಕ್ಕೆ ಸ್ಥಳ | ನಿವೇಶನದ ಲಭ್ಯತೆ (ಉದ್ದ*ಅಗಲ) |
|---|---|---|---|---|---|

1. ನಿವೇಶನವು ಇಲಾಖೆಯ ಸುಪರ್ದಿಯಲ್ಲಿದ್ದು, ಇಲಾಖೆಯ ಹೆಸರಿಗೆ ನೊಂದಣಿ/ಖಾತೆ ಇರಬೇಕು.

2. ತಕ್ಷಣ ನಿರ್ಮಾಣ ಕಾಮಗಾರಿ ಪ್ರಾರಂಭಿಸಲು ನಿವೇಶನವು ಎಲ್ಲಾ ರೀತಿಯಿಂದ ಲಭ್ಯವಿರಬೇಕು.